ಬಸವ ಬೆಳಕು

ದೇ. ಜವರೇಗೌಡ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಬಸವ ಬೆಳಕು

ದೇ. ಜವರೇಗೌಡ

ಪ್ರಸಾರಾಂಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

BASAVA BELAKU : Extention Lecture delivered by Prof. D. Javaregowda, Ex-Vice-Chancellor of Mysore University, Published by Prasaranga, Bangalore University, Bangalore. Pp. 82+x.

ಪ್ರಥಮ ಮುದ್ರಣ 1984

ದ್ವಿತೀಯ ಮುದ್ರಣ 1985

ಪ್ರಕಾಶಕರು :
ಡಾ॥ ಕೆ. ಮರುಳಸಿದ್ದಪ್ಪ
ನಿರ್ದೇಶಕರು
ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560 056

ಪ್ರಕಟಣ ಸಹಾಯಕ :
ಪುಂಡಲೀಕ ಹಾಲಂಬಿ

ಬೆಲೆ : 50 ಪೈಸೆ

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ-ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಹ ಸಕ್ರಿಯವಾಗಿ ಪಾಲ್ಗೊಳ್ಳುವುದು ಆವಶ್ಯಕ. ಪಾಠ ಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆ ಗಳಿಗೆ ಮಾತ್ರ ವಿಶ್ವವಿದ್ಯಾಲಯಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನ ಪ್ರಸಾರದ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯ ಕಳೆದ ಹಲವಾರು ವರ್ಷಗಳಿಂದ ನಗರದ ವಿವಿಧ ಸಂಘ ಸಂಸ್ಥೆಗಳಲ್ಲಿ ಕಾರ್ಖಾನೆಯ ಕಾರ್ಮಿಕ ಕೂಟಗಳಲ್ಲಿ, ಕಾಲೇಜುಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪ-ನ್ಯಾಸಗಳನ್ನು ಏರ್ಪಡಿಸುತ್ತಾ ಬಂದಿದೆ. ಅಧಿಕ ಸಂಖ್ಯೆಯಲ್ಲಿ, ಸುಲಭ ಬೆಲೆಯಲ್ಲಿ ನಮ್ಮ ಜನತೆಯನ್ನು ತಲುಪಲೆಂದು ಈ ಕಿರುಹೊತ್ತಿಗೆಗಳನ್ನು ಪ್ರಕಟಿಸು ತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಬೆಳಗಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ದೊಡ್ಡಬಳ್ಳಾಪುರದಲ್ಲಿ ಏರ್ಪಡಿಸಲಾಗಿದ್ದ ಪ್ರಚಾರೋಪನ್ಯಾಸದ ಹಸ್ತಪ್ರತಿಯನ್ನು ಪ್ರಕಟಣೆಗಾಗಿ ಪ್ರೊ॥ ದೇ.ಜವರೇಗೌಡ ಅವರು ದಯಮಾಡಿ ನಮಗಿತ್ತು ಸಹಕರಿಸಿದ್ದಾರೆ. ಕನ್ನಡದ ಖ್ಯಾತ ಲೇಖಕರಾದ ಪ್ರೊ॥ ದೇಜಗೌ ಅವರ ಈ ನೆರವು, ಸಹಕಾರಕ್ಕಾಗಿ ವಿಶ್ವವಿದ್ಯಾಲಯ ಅವರಿಗೆ ಆಭಾರಿಯಾಗಿದೆ.

ಡಿ. ಶಂಕರನಾರಾಯಣ
ಉಪಕುಲಪತಿ
ಬೆಂಗಳೂರು ವಿಶ್ವವಿದ್ಯಾಲಯ

ಪ್ರಕಾಶಕರ ಮಾತು

ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವ ಉದ್ದೇಶದಿಂದ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗ ಪಠ್ಯ ಹಾಗೂ ಪಠ್ಯೇತರ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ಇತರ ವಿಷಯಗಳಲ್ಲಿ ಪ್ರಸಿದ್ಧರಾದ ವಿದ್ವಾಂಸರಿಂದ ಗ್ರಂಥಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಆಧುನಿಕ ಕನ್ನಡ ಸಾಹಿತ್ಯದ ಆವರಣಕ್ಕೆ ಅಗತ್ಯವಾದ ಹಾಗೂ ಜನಸಾಮಾನ್ಯರಿಗೆ ಜ್ಞಾನವನ್ನು ನೀಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ತ್ವಶಾಸ್ತ್ರ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ, ಜಾನಪದ, ಸಮಾಜಶಾಸ್ತ್ರ, ಮಾನವಿಕ ಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು ಅನೇಕ ಹೊತ್ತಿಗೆಗಳನ್ನು ಈಗಾಗಲೇ ಪ್ರಕಟಿಸಿದೆ. ಹೀಗೆ ಪುಸ್ತಕಗಳ ಪ್ರಕಟಣೆಗೆ ಸಂಬಂಧಿಸಿದಂತೆ ಹಲವಾರು ಯೋಜನೆಗಳನ್ನು ಹಾಕಿಕೊಂಡು ಪ್ರಸಾರಾಂಗ ನಿರಂತರವಾಗಿ ಅವನ್ನು ಕಾರ್ಯಗತ ಮಾಡುತ್ತ ಬಂದಿದೆ.

ವಿಶ್ವವಿದ್ಯಾಲಯವು ಪ್ರತಿವರ್ಷವೂ ಪ್ರಚಾರೋಪನ್ಯಾಸಗಳನ್ನು ಕಾಲೇಜುಗಳಲ್ಲಿ, ಸಂಘ – ಸಂಸ್ಥೆಗಳಲ್ಲಿ, ಕಾರ್ಖಾನೆಗಳಲ್ಲಿ ಏರ್ಪಡಿಸುತ್ತಿದೆ. ಅನಂತರ ಉಪನ್ಯಾಸವನ್ನು ಪುಸ್ತಕ ರೂಪದಲ್ಲಿ ಹೊರತರುತ್ತಿದೆ. "ಬಸವ ಬೆಳಕು"–ದೊಡ್ಡಬಳ್ಳಾಪುರದಲ್ಲಿ ಪ್ರೊ. ದೇ. ಜವರೇಗೌಡ ಅವರು ನೀಡಿದ ಪ್ರಚಾರೋಪನ್ಯಾಸದ ಹೊತ್ತಿಗೆ.

ದ್ವಿತೀಯ ಮುದ್ರಣದ ಬಗ್ಗೆ ಒಂದು ಮಾತು

ಬೆಂಗಳೂರಿನ ಬಸವತತ್ತ್ವ ಪ್ರಚಾರ ಟ್ರಸ್ಟಿನ ಅಧ್ಯಕ್ಷರಾದ ನಿವೃತ್ತ ನ್ಯಾಯಮೂರ್ತಿ ಶ್ರೀ ಡಿ. ಎಂ. ಚಂದ್ರಶೇಖರ್ ಅವರೂ, ಆ ಸಂಸ್ಥೆಯ ಜೀವಸ್ವರೂಪ ರಂತಿರುವ ಶ್ರೀ ಟಿ. ಎಸ್. ಕರಿಬಸವಯ್ಯನವರೂ ತಾವು ಹೋದೆಡೆಯಲ್ಲೆಲ್ಲ ಈ ಕಿರು ಹೊತ್ತಿಗೆಯ ಬಗ್ಗೆ ಸಹೃದಯರ ಮತ್ತು ಬಸವಾನುಯಾಯಿಗಳ ಗಮನ ಸೆಳೆಯಲಾಗಿ, ಅವರೇ ಇದರ ಪ್ರತಿಗಳನ್ನು ಕೊಂಡು ಹಂಚಲಾಗಿ, ಮೂರ್ನಾಲ್ಕು ತಿಂಗಳಲ್ಲಿಯೇ ಇದು ದ್ವಿತೀಯಾವೃತ್ತಿಯನ್ನು ಕಾಣುವಂತಾಗಿದೆ. ಅವರಿಗೆ ನನ್ನ ನಮನಗಳು.

ಜತೆಗೆ ಪ್ರಸಾರಾಂಗದ ಇಂದಿನ ನಿರ್ದೇಶಕರೂ ಗುಣಗ್ರಾಹಿಗಳೂ ಆದ ಡಾ. ಕೆ. ಮರುಳಸಿದ್ಧಪ್ಪನವರು ತರುಣ ಸಹಜವಾದ ಉತ್ಸಾಹಾಸಕ್ತಿಗಳನ್ನು ತೋರಿಸಿ ದುದರ ಪರಿಣಾಮವಾಗಿ ಇದು ಎರಡನೆಯ ಬಾರಿಗೆ ಬಹು ಬೇಗ ಹೊರಗೆ ಬರುವಂತಾಗಿದೆ. ಅಷ್ಟೇ ಅಲ್ಲ, ನಾನು ಕೆಲವು ದಿನ ಊರಲ್ಲಿರುವುದಿಲ್ಲವೆಂದು ಹೇಳಿದಾಗ, ತಾವೇ ಕರಡು ತಿದ್ದುವುದಾಗಿ ಹೇಳಿ, ಅವರು ವಿನಯೌ ದಾರ್ಯಗಳನ್ನು ಮೆರೆದಿದ್ದಾರೆ. ಅವರ ಈ ಉಪಕಾರ ವನ್ನು ನಾನೆಂದೂ ಮರೆಯಲಾರೆ.

ಇಂತೆಯೇ ಇದರ ಪ್ರಕಟಣೆ ಹಾಗೂ ಮುದ್ರಣ ಗಳ ವ್ಯವಸ್ಥೆಯಲ್ಲಿ ಸಹಾಯ ನೀಡಿರುವ ಪ್ರಸಾರಾಂಗದ ಮತ್ತು ಮುದ್ರಣಾಲಯದ ಎಲ್ಲ ಸಿಬ್ಬಂದಿವರ್ಗಕ್ಕೆ ಧನ್ಯವಾದ ಸಲ್ಲಿಸುತ್ತೇನೆ.

24-5-1985
ಮೈಸೂರು

ದೇಜಗೌ

೧. ಸಾಧನೆ

ಕರ್ನಾಟಕ ಸಂಸ್ಕೃತಿ ರಾಮಾಯಣ ಭಾರತಗಳಷ್ಟೇ ಹಳೆಯದು. ಅಶೋಕ ಬೌದ್ಧಮತ ಪ್ರಚಾರಕ್ಕಾಗಿ ತನ್ನ ಪ್ರತಿನಿಧಿಗಳನ್ನಿಲ್ಲಿಗೆ ಕಳಿಸುತ್ತಾನೆ. ಉತ್ತರದಲ್ಲಿ ಕ್ಷಾಮ ತಲೆದೋರಿದಾಗ ಭದ್ರಬಾಹುಮುನಿ ತನ್ನ ಶಿಷ್ಯರೊಡನೆ ಶ್ರವಣಬೆಳ್ಗೊಳಕ್ಕೆ ಬಂದು ನೆಲಸುತ್ತಾನೆ ; ಹಿಂದಿನಿಂದ ಅನೇಕ ರಾಜಮನೆತನಗಳು ಈ ನಾಡನ್ನು ಕಟ್ಟಿವೆ. ಇಲ್ಲಿಯ ರಾಜರು ದಕ್ಷಿಣದಲ್ಲಿ ಮಾತ್ರವಲ್ಲದೆ, ಉತ್ತರದಲ್ಲಿಯೂ ವಿಜಯಪತಾಕೆಯನ್ನು ಮೆರೆಸಿದ್ದುಂಟು. ಸಂಗೀತ ಶಿಲ್ಪ ಚಿತ್ರ ನೃತ್ಯ ಕಲೆಗಳಿಗೆ ಇವರು ನಾನಾ ರೀತಿಯಲ್ಲಿ ಪ್ರೋತ್ಸಾಹ ನೀಡುತ್ತಾರೆ.

ಜಗತ್ತಿನ ಎಲ್ಲ ಮತಗಳಿಗೂ ಕನ್ನಡ ನಾಡು ಆಸರೆ ಕೊಟ್ಟಿದೆ. ಹಿಂದೂ ಮತದ ಎಲ್ಲ ಕವಲುಗಳೂ ಇಲ್ಲಿ ಚಾಚಿಕೊಂಡಿವೆ. ಈ ಮತಗಳೊಳಗೆ ಆಗಾಗ್ಗೆ ಮೇಲಾಟ ನಡೆದಿದೆ : ಮತಾಂತರ ಜರುಗಿದೆ : ಅದು ವಿರಸದಲ್ಲಿ ಕೊನೆಗೊಂಡಿದೆ. ಈ ಮತಗಳ ಧಾರ್ಮಿಕಸತ್ವ ಸಂಸ್ಕೃತಿಯ ಪೋಷಣೆಗೆ ನೆರವಾಗಿದೆ, ನಿಜ. ಆದರೆ ಅದರ ಸುತ್ತ ಬೆಳೆದ ಮೌಢ್ಯ ಸಂಪ್ರದಾಯಗಳ ಕಳೆ ಅದನ್ನು ಮರೆಸಿದೆ. ಕಳೆಯನ್ನೇ ಬೆಳೆಯೆಂದು ಜನ ತಿಳಿಯುತ್ತಾರೆ. ಮತಗಳ ಒಡೆತನವನ್ನು ಪಡೆದ ಉತ್ತಮವರ್ಗಕ್ಕೆ ಸುಲಿಗೆಯೋ

ಜೀವನವೃತ್ತಿಯಾಗುತ್ತದೆ. ಬುದ್ಧಿಜೀವಿಗಳ ಸ್ವಾರ್ಥ ಪರತೆಯಿಂದಾಗಿ ಕಸಬುಗಳೇ ಜಾತಿ ವಿಂಗಡಣೆಗೆ ಮೂಲ ವಾಗುತ್ತವೆ. ಜಾತಿ ಕುಲಗೋತ್ರಗಳು ರಕ್ತಬೀಜಾಸುರನ ವಂಶದಂತೆ ಹೆಚ್ಚುತ್ತವೆ. ಒಂದೊಂದು ಜಾತಿಯ ನಡುವೆಯೂ ಗೋಡೆಗಳೇಳುತ್ತವೆ. ಒಂದೊಂದೂ ಮುಟ್ಟದ ಸೇರದ ತರದ ಕೊಡದ ಗುಂಪುಗಳಾಗುತ್ತವೆ. ಒಂದೊಂದು ಗುಂಪಿಗೂ ಒಂದೊಂದು ದೇವತೆ. ಮಾರಿ ಮಸಣಿ ದುರ್ಗಿ ಮಾರಯ್ಯ, ಜೀರಯ್ಯ ಮೊದಲಾದ ಕಿರುಕುಳ ದೇವತೆಗಳ ಸಂಖ್ಯೆ ಬೆಳೆಯುತ್ತದೆ. ಜಾತಿಪ್ರಜ್ಞೆ ಹೊರತಾಗಿ ಯಾರಲ್ಲಿಯೂ ರಾಷ್ಟ್ರಪ್ರಜ್ಞೆಯಿಲ್ಲ. ಮೌಢ್ಯ ಅಜ್ಞಾನ ದಾರಿದ್ರ್ಯ ಹಾಗೂ ಜಾತೀಯತೆ ಬುದ್ಧಿಜೀವಿಗಳ ಪೀಳ್ಗೆಗೆ ಬಂಡವಾಳವಾಗುತ್ತವೆ. ದೇಶ ಬಲಶಾಲಿಗಳ ಸ್ವತ್ತಾಗಿ ಅವರವರಲ್ಲಿಯೇ ಕಾಳಗಗಳು ನಿರಂತರವಾಗಿ ಜರುಗುತ್ತವೆ. ಹೀಗಾಗಿ ನಾಡಿನಲ್ಲಿ ಅನಾಯಕತ್ವ ನರ್ತಿಸು ತ್ತದೆ. ಧರ್ಮಕ್ಕೆ ವನವಾಸವೇ ಗತಿಯಾಗುತ್ತದೆ.

ಮತಾಚಾರ್ಯರು, ದಾರ್ಶನಿಕರು, ಸಾಧುಸಂತರು, ಭಕ್ತಾಗ್ರಣಿಗಳು ಬಂದು ಹೋಗುತ್ತಾರೆ; ಲೆಕ್ಕವಿಲ್ಲದಷ್ಟು ದರ್ಶನಗಳು, ಭಕ್ತಿಕಾವ್ಯಗಳು, ಮಠಗಳು, ದೇವಾಲಯ ಗಳು ಹುಟ್ಟಿಕೊಳ್ಳುತ್ತವೆ. ಆದರೆ ಯಾರೂ ದೀನದಲಿತರ ಕಣ್ಣೀರೊರೆಸುವುದಿಲ್ಲ, ಅವರಿಗಾಗಿ ಮರುಗುವುದಿಲ್ಲ; ಅವರನ್ನು ಮೇಲೆತ್ತುವುದಿಲ್ಲ; ಅವರಿಗಾಗಿ ಯಾವ ಗ್ರಂಥ ಗಳೂ ಹುಟ್ಟುವುದಿಲ್ಲ. ಅವರ ಕಷ್ಟಕ್ಕೆ ಪರಿಹಾರ ಸೂಚಿ ಸುವುದಿಲ್ಲ; ದೇವಾಲಯ ಸಹ ಅವರ ಬಿಂದಿಗೆಗೆ ತಂಪೆರೆ ಯುವುದಿಲ್ಲ. ಪುರೋಹಿತರ ಸಂಕುಚಿತ ದೃಷ್ಟಿಯಿಂದಾಗಿ ಮತ ಜನ್ಮಗಟ್ಟಿದ ಸಂಪ್ರದಾಯವಾಗುತ್ತದೆ. ಸಮಾಜ

ಚಲನೆಯಿಲ್ಲದ ಮಡುವಾಗುತ್ತದೆ. ಹೀಗೆ ಪರಿಸ್ಥಿತಿ ವಿಷಮಾವಸ್ಥೆಯನ್ನು ಮುಟ್ಟಿದಾಗ ದೈವೇಚ್ಛೆ ಅಥವಾ ನೈಸರ್ಗಿಕ ಅಗತ್ಯವೆಂಬಂತೆ ಧರ್ಮಸಂರಕ್ಷಕನೊಬ್ಬನ ಉದಯವಾಗುತ್ತದೆ.

ಅವರೇ ಬಸವಣ್ಣನವರು. ಅವರು ಹುಟ್ಟಿದ್ದು 1131ರಲ್ಲಿ, ಬಿಜಾಪುರ ಜಿಲ್ಲೆಯ ಬಾಗೆವಾಡಿಯಲ್ಲಿ. ಇದು ಮತ್ತು ಆರೇಳು ಮೈಲಿ ದೂರದಲ್ಲಿರುವ ಇಂಗಳೇಶ್ವರ ಆ ಕಾಲದಲ್ಲಿ ವಿದ್ಯೆ ಮತ್ತು ಸಂಸ್ಕೃತಿಗಳ ಬೀಡಾಗಿದ್ದುವು; ಶೈವ ಜೈನ ಧರ್ಮಗಳ ಕೇಂದ್ರವಾಗಿದ್ದುವು. ರೇವಣಸಿದ್ಧೇಶ್ವರರ ಕರ್ಮಭೂಮಿಯೂ ಅಹುದು. ವೇದ ಪುರಾಣಗಳಲ್ಲಿ ಕೋವಿದರಾದ ಮಹಾಜನರಿಗೆ ಎಲ್ಲೆಡೆಯೂ ಗೌರವ. ಅಂಥ ಮಹಾಜನರಲ್ಲಿ ಪ್ರಮುಖ ವ್ಯಕ್ತಿ ಮಾದಿರಾಜ. ಅವನು ಶಾಸ್ತ್ರಪಾರಂಗತ, ಸಜ್ಜನ, ಸದ್ಗೃಹಸ್ಥ. ಅವನಿಗೆ ಅನುರೂಪಳಾದ ಮಡದಿ ಮಾದಲಾಂಬೆ. ಇಬ್ಬರೂ ನಂದಿನಾಥನ ಉಪಾಸಕರು. ಆ ಉಪಾಸನೆಯ ಫಲವೆಂಬಂತೆ, ನಂದೀಶ್ವರನ ಕೃಪೆಯೆಂಬಂತೆ ಬಸವಣ್ಣನವರು ಆ ದಂಪತಿಗಳಿಗೆ ಮಗನಾಗಿ ಜನಿಸುತ್ತಾರೆ. ಅವರಿಗೆ ನಾಗಮ್ಮನೆಂಬ ಅಕ್ಕನೂ ದೇವರಾಜಮುನಿಪ ಎಂಬ ಅಣ್ಣನೂ ಇದ್ದರು.

ಹುಟ್ಟಿದ ಮಗು ಕೈಕಾಲು ಅಲ್ಲಾಡಿಸದೆ, ಅಳದೆ, ಎವೆಯಿಕ್ಕದೆ ಇದ್ದುದನ್ನು ಕಂಡು ತಂದೆತಾಯಿಯರು ಗಾಬರಿಗೊಳ್ಳುತ್ತಾರೆ, ನಂದಿನಾಥನನ್ನು ನೆನೆನೆನೆದು ಗೋಳಾಡುತ್ತಾರೆ. ಆ ಸಮಯಕ್ಕೆ ಸರಿಯಾಗಿ, ಶಿವನ ಕೃಪೆಯೋ ಮೈವೆತ್ತಂತೆ ಜಾತವೇದ ಮುನಿಗಳು ಬಾಗೆವಾಡಿಗೆ ಬರುತ್ತಾರೆ. ಅವರು ಮಹಾ ತಪಸ್ವಿಗಳು.

ಕಾರಣ ಪುರುಷನೊಬ್ಬನ ಅವತಾರದ ಸೂಚನೆ ಅವರ ಒಳಗಣ್ಣಿಗೆ ಹೊಳೆಯಿತೆಂದು ತೋರುತ್ತದೆ. ಮಾದಿರಾಜ ಅವರನ್ನು ತಮ್ಮ ಮನೆಗೆ ಕರೆತಂದು, ಮಗುವನ್ನು ತೋರಿಸುತ್ತಾನೆ. ಮುನಿಗಳು ಮಗುವಿನ ಕಿವಿಯಲ್ಲಿ ಶಿವ ಮಂತ್ರವನ್ನುಚ್ಚರಿಸಿ, ಹಣೆಗೆ ವಿಭೂತಿ ಹಚ್ಚುತ್ತಾರೆ. ಮಗು ಒಡನೆಯೇ ಕಣ್ಣುಬಿಟ್ಟು ಕಿಲಕಿಲನೆ ನಗುತ್ತ, ಕೈಕಾಲು ಅಲ್ಲಾಡಿಸುತ್ತದೆ. ಮುನಿಗಳು ಆತನ ಕಣ್ಮುಂದೆ ಲಿಂಗ ಹಿಡಿದಾಗ, ಅವನು ಅದನ್ನೇ ಎವೆಯಿಕ್ಕದೆ ನೋಡುತ್ತಾನೆ. ಅವನ ಅಂಗಾಂಗಗಳನ್ನು ಅವಲೋಕಿಸಿದ ಗುರುಗಳು ಅವನು ಮುಂದೆ ಲೋಕದ ಬೆಳಕಾಗುತ್ತಾನೆಂದು ಹರಸಿ, ಮರಳುತ್ತಾರೆ.

ಮಾತು ಕಲಿಯುವ ಮುನ್ನವೇ ಬಸವ ಮಗುವಿನ ಕಿವಿಯ ಮೇಲೆ ಪುರಾಣ ಪ್ರವಚನ, ವೇದಪಾಠ ಹಾಗೂ ಉಪನಿಷತ್ ಶ್ಲೋಕಗಳು ಬೀಳುತ್ತವೆ. ತಿಪ್ಪ ತಿಪ್ಪ ಹೆಜ್ಜೆ ಇಡುವಾಗಲೇ ತಂದೆತಾಯಿಯರೊಡನೆ ನಂದಿನಾಥನ ಗುಡಿಗೆ ಹೋಗುತ್ತಾನೆ. ಪೂಜಾರಿ ಆರತಿಯೆತ್ತುವಾಗ ಅವನು ಲಿಂಗವನ್ನೇ ಮೈಯೆಲ್ಲ ಕಣ್ಣಾಗಿ ನೋಡುತ್ತಾನೆ. ತಂದೆತಾಯಿಯರ ತೋಳಿನಲ್ಲಿದ್ದರೂ ಲಿಂಗ ಕಂಡೆಡೆ ಕೆಳಗಿಳಿಯಲು ಹಾತೊರೆಯುತ್ತಾನೆ. ಲಿಂಗವ ಮುಂದೆ ಕುಳಿತು ಏನೇನೊ ತೊದಲುತ್ತಾನೆ; ಅದನ್ನು ಮುಟ್ಟಿ ಕಣ್ಣಿಗೊತ್ತಿಕೊಳ್ಳುತ್ತಾನೆ. ಮಾತು ಬರುತ್ತಿದ್ದಂತೆ 'ಓಂ ನಮಶ್ಶಿವಾಯ' ಎಂಬ ಮಂತ್ರ ಅವನ ನಾಲಗೆಯ ಮೇಲೆ ಆಗಾಗ್ಗೆ ಕುಣಿಯುತ್ತದೆ. ತಂದೆಯೊಡನೆ ಅವನೂ ವಿಭೂತಿ ಹಚ್ಚಿಕೊಳ್ಳುತ್ತಾನೆ. ತಂದೆ ಹೇಳಿಕೊಳ್ಳುತ್ತಿದ್ದ ವೇದ ಮಂತ್ರಗಳನ್ನೂ ಉಪನಿಷತ್ತಿನ ಶ್ಲೋಕಗಳನ್ನೂ

ಅವನೂ ಕೇಳಿಸಿಕೊಂಡು, ಹೃದ್ಗತ ಮಾಡಿಕೊಳ್ಳುತ್ತಾನೆ. ಹಬ್ಬ ಹರಿದಿನಗಳಲ್ಲಿ, ವಿಶೇಷ ಸಂದರ್ಭಗಳಲ್ಲಿ ಮನೆಯಲ್ಲಿಯೋ ದೇವಾಲಯದಲ್ಲಿಯೋ ನಡೆಯುತ್ತಿದ್ದ ವಿದ್ವಾಂಸರ ಚರ್ಚೆಯನ್ನು ಆಸಕ್ತಿಯಿಂದ ಆಲಿಸುತ್ತಾನೆ. ಮಗು ಮುದ್ದಾಗಿ ಚೆಲುವಾಗಿ ಚುರುಕಾಗಿ, ಊರ ಜನರ ಕಣ್ಮಣಿಯಾಗಿ, ಎತ್ತಿಕೊಂಡವರ ಎದೆಗೆ ಮಾಣಿಕ್ಯವಾಗಿ ಬೆಳೆಯುತ್ತಾನೆ. ಎಲ್ಲರೂ ಅವನನ್ನು 'ಅಣ್ಣ'ನೆಂದೇ ಕರೆಯುತ್ತಾರೆ.

ನೋಡ ನೋಡುತ್ತಿದ್ದಂತೆ ಬುದ್ಧಿಭಾವಗಳ ಮಿಲನವೇ ರೂಪುಗೊಂಡಂತೆ, ಜನ್ಮಜನ್ಮಾಂತರಗಳ ಸಂಸ್ಕಾರವೇ ಮೈವೆತ್ತಂತೆ, ಭಕ್ತಿಯೇ ಸಾಕಾರಗೊಂಡಂತೆ ಮಗು ಬೆಳೆಯುತ್ತಾನೆ. ಅವನ ಜ್ಞಾನ ದಾಹವನ್ನು ಕಂಡ ತಂದೆ ಅವನಿಗೆ ವೇದಾಗಮ ಪುರಾಣ ಉಪನಿಷತ್ ಸಾಹಿತ್ಯ ಸಂಗೀತ ಗಣಿತ ಕಲಿಸುತ್ತಾನೆ. ಅವನ ಬಾಲಪ್ರೌಢಿಮೆಗೆ ಕಂಡಕಂಡವರೆಲ್ಲ ಬೆರಗಾಗುತ್ತಾರೆ. ಆಟಕ್ಕಿಂತ ಪಾಠದಲ್ಲಿ ಅವನಿಗೆ ಆಸಕ್ತಿ. ಪೂಜಾಸಮಯದಲ್ಲಿ ಅವನು ಹೊರಗಣ ಪ್ರಪಂಚವನ್ನು ಮರೆಯುತ್ತಾನೆ; ತನ್ಮಯ ಸ್ಥಿತಿಯಲ್ಲಿದ್ದಾಗ ಅವನ ಕಣ್ಣುಗಳಲ್ಲಿ ನೀರು ಹರಿಯುತ್ತದೆ. ಜಾತವೇದ ಮುನಿಗಳಿಂದ ದೊರೆತಿದ್ದ ಶಿವಲಿಂಗವನ್ನು ಅವನು ಯಾವಾಗಲೂ ಕೊರಳಿಗೆ ಕಟ್ಟಿಕೊಂಡು, ನೆನಪಾದಾಗಲೆಲ್ಲ ಕೈಯಲ್ಲಿರಿಸಿಕೊಂಡು, ಷಡಕ್ಷರಿ ಮಂತ್ರವನ್ನು ಹೇಳಿಕೊಳ್ಳುತ್ತ, ಭಾವಾವೇಶಕ್ಕೊಳಗಾಗುತ್ತಾನೆ. ಮೊದಮೊದಲು ಅವನ ವಿಚಿತ್ರ ಚರ್ಯೆ ಚಾಳಿಗಳನ್ನು ಕಂಡ ತಂದೆತಾಯಿಯರು ಗಾಬರಿಗೊಳ್ಳುತ್ತಾರೆ.

ಊರಿನ ಜತೆಜತೆಗೆ ಅವನು ಲೋಕ ಜೀವನವನ್ನು ಸಹ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ತಾಯಿಯ ಜತೆಯಲ್ಲಿ ಆಗಾಗ್ಗೆ ಇಂಗಳೇಶ್ವರಕ್ಕೂ ಅಕ್ಕಪಕ್ಕದ ಊರುಗಳಿಗೂ, ತಂದೆಯ ಜತೆಯಲ್ಲಿ ಸಂಗಮನಾಥನ ಜಾತ್ರೆಗೂ ಹೋಗಿ ಬರುತ್ತಾನೆ. ಅವನು ತೆರೆದ ಕಣ್ಣಿನಿಂದ ಸಾಮಾಜಿಕ ಸ್ಥಿತಿಗತಿಗಳನ್ನೂ, ಭೇದ ಪ್ರಭೇದಗಳನ್ನೂ ಸೂಕ್ಷ್ಮವಾಗಿ ಗಮನಿಸುತ್ತಾನೆ. ಒಳಗಣ್ಣಿನಿಂದ ಅವುಗಳ ಹಿನ್ನೆಲೆಯಲ್ಲಿ ಗುಪ್ತವಾಗಿ ಪ್ರವಹಿಸುತ್ತಿರುವ ಶಿವಶಕ್ತಿಯನ್ನು ಗುರುತಿಸುತ್ತಾನೆ. ಸಂವೇದನಾ ಶೀಲನಾದ ಅವನಿಗೆ ದೀನದಲಿತರ ಕಷ್ಟಕಾರ್ಪಣ್ಯಗಳು ಘೋರವಾಗಿ ಕಾಣಿಸುತ್ತವೆ; ಉಳ್ಳವರ ಇಲ್ಲದವರ, ವಿದ್ಯಾವಂತರ ಅವಿದ್ಯಾವಂತರ, ಒಡೆಯರ ಆಳುಗಳ, ಬ್ರಾಹ್ಮಣರ ಶೂದ್ರರ ನಡುವಣ ಭೇದಗಳು ಭೀಕರವಾಗಿ ತೋರುತ್ತವೆ. ವರ್ಣ ಜಾತಿ ಕುಲಗೋತ್ರಗಳ ಪರಿಣಾಮವಾಗಿ ಸಮಾಜ ಛಿದ್ರ ಛಿದ್ರವಾಗಿದೆ. ಉತ್ತಮ ವರ್ಣದವರಿಂದ ಶೂದ್ರರೂ ಪಂಚಮರೂ ಅನುಭವಿಸುತ್ತಿದ್ದ ಕಿರುಕುಳಗಳು ಅವರ್ಣನೀಯ. ಅವರ ಬಾಳು ಪಶುಗಳಿಗಿಂತ ಕಡೆ. ಅವರು ಬೆವರು ಸುರಿಸಿದರೂ ಮೈಗೆ ಬಟ್ಟೆಯಿಲ್ಲ, ಹೊಟ್ಟೆಗೆ ಕೂಳಿಲ್ಲ. ದೇಶದ ಸಂಪತ್ತು ಕೆಲವರಿಗೆ ಮಾತ್ರ ಮೀಸಲು. ಮೂಢ ಸಂಪ್ರದಾಯಗಳ ಬಲೆಯಲ್ಲಿ ಸಿಕ್ಕಿಕೊಂಡು ಸಾಮಾನ್ಯ ಜನ ನರಳುತ್ತಿದ್ದಾರೆ. ನೂರಾರು ಸಾವಿರಾರು ದೇವತೆಗಳ ಹೆಸರಿನಲ್ಲಿ ಪ್ರಾಣಿವಧೆ ನಡೆಯುತ್ತದೆ. ಶ್ರಮ ಜೀವನಕ್ಕೆ ಬೆಲೆ ಇಲ್ಲದ್ದರಿಂದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಹೆಂಗಸರು ಗುಲಾಮರಿಗಿಂತ ಕಡೆಯಾಗಿದ್ದಾರೆ. ಇಷ್ಟಕ್ಕೆಲ್ಲ ಅಜ್ಞಾನವೇ ಮೂಲವೆಂದು ಆ ಬಾಲಕನ ಮುಗ್ಧ ಮನಸ್ಸು ಕಳವಳಕ್ಕೀಡಾಗುತ್ತದೆ.

ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ ? ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ! ಎಂಬ ಅನುಭವ ಅವನನ್ನು ಅಂತರ್ಮುಖಿಯಾಗಿಸುತ್ತದೆ. ಪ್ರತಿಯೊಂದು ಜೀವಿಯೂ ಪರಮಾತ್ಮನ ಅಂಶವಾದರೆ ಜಾತಿ ವರ್ಣಗಳ ಭೇದವೇಕೆ ? ಸಮಾಜದ ಬಹು ಸಂಖ್ಯೆಯ ಜನರನ್ನು ಮುಟ್ಟಬಾರದವರೆಂದು ಊರ ಹೊರಗಿಡುವುದು ಸರಿಯೆ ? ಈ ಭೇದ ಪ್ರಭೇದಗಳನ್ನು ನಿರ್ನಾಮಗೊಳಿಸಲಾರದ ವೇದೋಪನಿಷತ್ತುಗಳಿಂದ ಆಗಬೇಕಾದ್ದೇನಿದೆ ? ಸಮಾಜದಲ್ಲಿ ಕೆಲವರಿಗೆ ಮಾತ್ರ ವಿಶೇಷ ಸ್ಥಾನಮಾನಗಳನ್ನು ನೀಡುವ, ದೀನದಲಿತರನ್ನು ಅಜ್ಞಾನ ದಾರಿದ್ರ್ಯಗಳಲ್ಲಿಡುವ, ಸುಲಿಗೆಯ ಸಂಕೇತವಾಗಿರುವ ಜನಿವಾರದ ಬಗ್ಗೆ ಅವನ ಮನಸ್ಸಿನಲ್ಲಿ ತಾತ್ಸಾರ ಮೂಡುತ್ತದೆ.

ಕುಶಾಗ್ರಮತಿಯೂ ಸಕಲ ಶಾಸ್ತ್ರ ಪಾರಂಗತನೂ ಭಕ್ತಾಗ್ರೇಸರನೂ ಆದ ಮಗನಿಗೆ ಉಪನಯನ ಮಾಡಲು ಮಾದಿರಾಜ ಸಜ್ಜುಗೆಯ್ಯುತ್ತಾನೆ. ಸಂಪ್ರದಾಯ ಬದ್ಧನಾದ ಬ್ರಾಹ್ಮಣ ತಂದೆಯ ಮೊದಲ ಕರ್ತವ್ಯ ಅದೆ ತಾನೆ. ಎಲ್ಲಿ ನೋಡಿದರೂ ಅಜ್ಞಾನದ ಕತ್ತಲೆ ಕವಿದಿದೆ. ಅನೀತಿ ಅನ್ಯಾಯ ಅಧರ್ಮಗಳು ಕೇಕೆ ಹಾಕುತ್ತಿವೆ. ಇಷ್ಟಕ್ಕೆಲ್ಲ ಉತ್ತಮ ವರ್ಣದವರೆ ಕಾರಣ. ಸಮಾಜದ ಆಗುಹೋಗುಗಳಿಗೆಲ್ಲ ಅವರೆ ಹೊಣೆ. ದೀನದಲಿತರ ಅಜ್ಞಾನಕ್ಕೆಲ್ಲ ಅವರೆ ಕಾರಣ. ನಾಡಿನ ಸಕಲ ರೋಗಗಳಿಗೆ ಈ ಅಜ್ಞಾನವೇ ಮೂಲ. 'ಅನ್ಯಾಯ ಅಹಂಕಾರಗಳನ್ನು ಪೋಷಿಸುವ ಜನಿವಾರ ನನಗೆ ಬೇಡ' ಎಂದು ಬಸವಣ್ಣ ತಂದೆಗೆ ಕೈಮುಗಿದು ಬೇಡಿಕೊಳ್ಳುತ್ತಾನೆ. 'ಇಂದಿನಿಂದ

ಬಂದಿರುವ ಪದ್ಧತಿಯನ್ನು ಬಿಟ್ಟರೆ ಸದ್ಗತಿ ದೊರೆಯಲಾರದು, ಮಗನೆ. ಪ್ರತಿಯೊಬ್ಬರೂ ತಂತಮ್ಮ ಕರ್ಮದ ಫಲವನ್ನನುಭವಿಸಬೇಕಾಗುತ್ತದೆ. ಹುಟ್ಟಿನಿಂದಲೇ ಮೇಲುಕೀಳುಗಳು ನಿರ್ಣಯವಾಗುತ್ತವೆ. ಎಲ್ಲ ಬೆರಳು ಒಂದೇ ಸಮನಾಗಿರುವುದಿಲ್ಲ. ಜಾತಿ ಜಾತಿಗಳು ಬುದ್ಧಿ ವಿವೇಕಗಳು ಶಕ್ತಿ ಸಾಮರ್ಥ್ಯಗಳು ಮನುಷ್ಯನಿಂದ ಮನುಷ್ಯನಿಗೆ ವ್ಯತ್ಯಾಸವಾಗುತ್ತವೆ. ಆದ್ದರಿಂದ ನಿನ್ನ ಕನಸು ಕಲ್ಪನೆಗಳನ್ನು ಮರೆತು, ಕುಲದ ಪದ್ಧತಿಯನ್ನು ಬಿಡದೆ, ಮನೆತನದ ಗೌರವವನ್ನು ಕಾಪಾಡು' ಎಂದು ತಂದೆ ಮಗನಿಗೆ ವಿವೇಕ ಹೇಳುತ್ತಾನೆ. 'ಅಪ್ಪ, ಹಳೆ
ದ್ದರೂ ಹಳೆಯದೆಂದು ಊಣಲಾಗದು ಸಮಾಜದ ಏಳ್ಗೆಗೆ ಅನುವಾಗದ ಪದ್ಧತಿ ಹಳೆಯದಾದರೂ ಹೊಲ್ಲ. ಕೆಲವರಿಗೆ ಮಾತ್ರವೇ ಮೀಸಲಾದ, ಬಹುಜನರಿಗಲ್ಲದ ಪದ್ಧತಿ ಒಳ್ಳೆಯದಲ್ಲ. ಗುಣಕರ್ಮಗಳಿಂದ ಮನುಷ್ಯನ ಜಾತಿಯನ್ನು ನಿರ್ಣಯಿಸಬೇಕೇ ಹೊರತು ಹುಟ್ಟಿನಿಂದಲ್ಲ. ಜನ್ಮಾಂತರ ಕರ್ಮಫಲಗಳು ಸಹ ಕಲ್ಪನೆಗಳೇ. ಪಾತ್ರೆಗಳ ಆಕಾರ ಬೇರೆ ಬೇರೆಯಾದರೂ ಅವುಗಳಿಗೆ ಆಧಾರವಾದ ಮಣ್ಣು ಒಂದೇ ಅಲ್ಲವೇ ? ಎಲ್ಲರಲ್ಲಿಯೂ ಪರಶಿವನ ಅಂಶವೇ ಸೇರಿಕೊಂಡಿರುವಾಗ, ಇವನು ವಿಪ್ರ. ಅವನು ಶೂದ್ರ. ಮತ್ತೊಬ್ಬ ಹೊಲೆಯ ಎನ್ನಲಾದೀತೆ ? ಮೂರೆಳೆಯ ದಾರ ದೇಹವನ್ನು ಪವಿತ್ರಗೊಳಿಸುವುದಾದರೆ, ಹೊಲೆಯ ಶೂದ್ರರಿಗೂ ಅದನ್ನು ನೀಡಬಾರದೇಕೆ ? ಹೊಲಗೇರಿ ಶಿವಾಲಯಕ್ಕೆ ನೆಲ ಒಂದೆ ಅಲ್ಲವೇ ? ಹಸುಗಳ ಬಣ್ಣ ಬೇರೆ ಬೇರೆಯಾದರೂ ಹಾಲು ಬಿಳುಪಲ್ಲವೆ ? ಅಪ್ಪ, ಮೂಢ ಪದ್ಧತಿಗಳನ್ನು ತೊಡೆದು

ಬೇಕಾದ್ದು, ಆಚಾರವಿಚಾರಗಳ ನಡುವೆ ಸಂದು ಬಿಡದಂತೆ ನೋಡಿಕೊಳ್ಳ ಬೇಕಾದ್ದು, ದೀನದಲಿತರನ್ನು ಮೇಲೆತ್ತ ಬೇಕಾದ್ದು ಮುಂದುವರಿದವರ ಕರ್ತವ್ಯವಲ್ಲವೇ ? ಅಹಂಕಾರಕ್ಕೆ ಕೋಡುಮೂಡಿಸುವ ಜನಿವಾರ ನನಗೆ ಬೇಡ, ನನ್ನ ಎದೆಯ ವೇದನೆಯನ್ನು ಅರ್ಥ ಮಾಡಿ ಕೊಳ್ಳಿ; ನನ್ನಷ್ಟಕ್ಕೆ ನನ್ನನ್ನು ಬಿಟ್ಟು ಬಿಡಿ' ಎಂದು ಮಾಗ ಕೈಮುಗಿದು ಬೇಡಿಕೊಳ್ಳುತ್ತಾನೆ.

ಇಂಥದೇ ವಾದವಿವಾದಗಳಲ್ಲಿ ಹಲವು ತಿಂಗಳು ಗತಿಸುತ್ತವೆ. ಅಧ್ಯಯನ ಶಿವಾರಾಧನೆ ಸಾಧನೆ ಚಿಂತನ ಮಂಥನಗಳಲ್ಲಿ ಬಸವಣ್ಣನ ಕಾಲ ಸರಿಯುತ್ತದೆ. ನಿದ್ದೆ ಕನಸು ಎಚ್ಚರಗಳಲ್ಲೆಲ್ಲ ಸಂಗಮನಾಥನ ಸಾನ್ನಿಧ್ಯ ಸುಖ ವನ್ನನುಭವಿಸುತ್ತಾನೆ. ಆಗಾಗ್ಗೆ ಶೂದ್ರರ ಮನೆಗಳಿಗೆ ಹೋಗಿ, ಅವರ ಸ್ಥಿತಿಗತಿಗಳನ್ನು ವಿಚಾರಿಸಿಕೊಂಡು, ಅವರು ಕೊಟ್ಟ ತಿಂಡಿತೀರ್ಥಗಳನ್ನು ಶಿವನ ಪ್ರಸಾದ ವೆಂದು ಸ್ವೀಕರಿಸುತ್ತಾನೆ. ದಲಿತರ ಗುಡಿಸಲುಗಳಿಗೆ ಹೋಗಿ, ಅವರ ಗೋಳಿನ ಕತೆಯನ್ನು ಕೇಳಿ ಸಂಕಟ ಪಡುತ್ತಾನೆ. ಸಂಪ್ರದಾಯ ಶರಣರಾದ ವಿಪ್ರರಿಗೆ ಅವನ ನಡೆವಳಿ ಹಿಡಿಸುವುದಿಲ್ಲ. ಅವನಿಂದ ಕುಲಕ್ಕೆ ಕೇಡೊದ ಗುತ್ತದೆಂದು ಅವರು ಮಾದಿರಾಜನಿಗೆ ದೂರು ಹೇಳುತ್ತಾರೆ. ಅಷ್ಟೇ ಅಲ್ಲ, ಕುಲಹೀನನೆಂದು ಅವನನ್ನು ಕಂಡುದೆ ತಡ ಹೀಯಾಳಿಸುತ್ತಾರೆ. ಕುಲದಿಂದ ಹೊರಗೆ ಹಾಕುವು ದಾಗಿಯೂ ಹೆದರಿಸುತ್ತಾರೆ. ಮನೆತನಕ್ಕೊದಗಿರುವ ಕೆಟ್ಟಹೆಸರಿಂದ ಪಾರಾಗ ಬೇಕಾದರೆ ಉಪನಯನವೊಂದೆ ಮಾರ್ಗವೆಂದು ತಂದೆ ಮಗನ ಮುಂದೆ ತಮ್ಮ ಸಂಕಟ ತೋಡಿಕೊಳ್ಳುತ್ತಾರೆ. ಹೊರಗಿನಿಂದ ಬಡವಾಗುತ್ತಿರುವ

ತಂದೆಯ ಮಾತನ್ನು ಕೇಳುವಂತೆ ತಾಯಿ ಮಗನನ್ನು ಬೇಡಿಕೊಳ್ಳುತ್ತಾಳೆ. ಸಂಗಮನಾಥನ ಚಿತ್ತವಿದ್ದಂತಾಗಲಿ ಎಂದು ಮೆಲ್ಲೆದೆಯ ಬಸವಣ್ಣ ಒಲ್ಲದ ಮನಸ್ಸಿನಿಂದ, ತಂದೆತಾಯಿಯರ ಮನಸ್ಸಿಗೆ ತನ್ನಿಂದ ನೋವಾಗಬಾರದೆಂಬ ಕಾರಣದಿಂದ, ಉಪನಯನಕ್ಕೆ ಒಪ್ಪಿಕೊಳ್ಳುತ್ತಾನೆ. ಮಂಗಳವಾಡದಿಂದ ಸೋದರಮಾವ ಬಲದೇವನೂ ಬಂದು, ಉಪನಯನದಲ್ಲಿ ಭಾಗಿಯಾಗಿ, ಸೋದರಳಿಯನ ಪ್ರತಿಭೆಗೆ ಮಾರು ಹೋಗುತ್ತಾನೆ

ಉಪನಯನವಾದ ನಂತರ ಬಸವಣ್ಣ ಅಂತರ್ಮುಖಿಯಾಗುತ್ತಾರೆ; ಲೌಕಿಕ ವಿಷಯಗಳಲ್ಲಿ ನಿರಾಸಕ್ತರಾಗುತ್ತಾರೆ. ನಂದೀಶ್ವರನ ಮುಂದೆ ಕುಳಿತರೆ ಸಾಕು ಮೈಮೇಲೆ ಪರಿವೆಯೇ ಇರುವುದಿಲ್ಲ. ಬಡವರನ್ನು ಕಂಡಾಗ ಅವರ ಕಣ್ಣುಗಳಲ್ಲಿ ನೀರು ತುಳುಕುತ್ತದೆ. ಉತ್ತಮ ವರ್ಗದವರಿಂದ ಸಿರಿವಂತರಿಂದ ಅವರನುಭವಿಸುತ್ತಿದ್ದ ಹಿಂಸೆಯನ್ನು ನೋಡಿದಾಗ ಅವರು ಚಿಂತಾಮಗ್ನರಾಗಿ ನಿಟ್ಟುಸಿರು ಬಿಡುತ್ತಾರೆ. ಇಂಗಳೇಶ್ವರದ ಅಜ್ಜಿಯ ಮನೆಗೆ ಆಗಾಗ್ಗೆ ಹೋಗಿ ಸಮಾಧಾನ ಪಡೆಯುತ್ತಾರೆ. ಒಮ್ಮೊಮ್ಮೆ ರೇವಣಸಿದ್ಧೇಶ್ವರರ ಗವಿಗೂ ಹೋಗಿ ಬಹು ಹೊತ್ತು ಧ್ಯಾನಮಗ್ನರಾಗುತ್ತಾರೆ. ಸಮಾಜದ ಸಕಲ ರೋಗ ರುಜಿನಗಳಿಗೆ, ವೈಷಮ್ಯ ವೈಪರೀತ್ಯಗಳಿಗೆ ನೈತಿಕ ಮೌಲ್ಯಗಳ ಹಾಗೂ ಧಾರ್ಮಿಕ ಪ್ರವೃತ್ತಿಯ ಅಭಾವವೇ ಕಾರಣವೆಂದು ನಿಶ್ಚಯಿಸಿಕೊಳ್ಳುತ್ತಾರೆ. ಧರ್ಮದ ಊರೆಯಿಲ್ಲದ ಆರ್ಥಿಕ ಕ್ಷೇತ್ರವಾಗಲಿ, ರಾಜಕೀಯ ಕ್ಷೇತ್ರವಾಗಲಿ ದಾರಿ ತಪ್ಪುತ್ತವೆ ಮಾತ್ರವಲ್ಲ, ಸಾಮಾನ್ಯ ಜನರಿಗೆ ಕಂಟಕವಾಗಿ ಪರಿಣಮಿಸುತ್ತವೆಂದು ತಿಳಿಯುತ್ತಾರೆ.

ಉಪನಯನವಾದ ಒಂದೆರಡು ವರ್ಷಗಳಲ್ಲಿಯೆ ತಂದೆ ತಾಯಿಯರು ಕೈಲಾಸವಾಸಿಗಳಾಗುತ್ತಾರೆ. ಅವರಿಗೆ ಬಹು ಪ್ರಿಯವಾದ ವ್ಯಕ್ತಿಗಳೆಂದರೆ ಮುತ್ತಬ್ಬೆ ಮತ್ತು ಅಕ್ಕ ನಾಗಮ್ಮ. ಅವರ ಮನಸ್ಸನ್ನು ಸರಿಯಾಗಿ ಅರಿತುಕೊಂಡಿದ್ದವರು ಅಕ್ಕ ಒಬ್ಬರೇ. ತಮ್ಮ ಮನಸ್ಸಿನ ತೊಳಲನ್ನು ಅಕ್ಕನೊಡನೆ ಹಂಚಿಕೊಳ್ಳುತ್ತಾರೆ. ಮಾನವ ಕೋಟಿಯನ್ನು ಸಮನಾಗಿ ಕಾಣದ, ಶ್ರೀಸಾಮಾನ್ಯನ ಉದ್ಧಾರಕ್ಕೆ ನೆರವಾಗದ ಮತ ಇದ್ದರೂ ಇಲ್ಲದಂತೆಯೇ ಎಂದು ಪರಿಪರಿಯಾಗಿ ವಾದಿಸುತ್ತಾರೆ. ದಿನದಿನವೂ ಸಂಗಮನಾಥ ತಮ್ಮನ್ನು ಕರೆಯುತ್ತಿದ್ದಾನೆಂದು ತಿಳಿಸುತ್ತಾರೆ. ಗೊಡ್ಡು ಸಂಪ್ರದಾಯದ ಹಾರುವರ ನಡುವಣ ಬಾಳು ಅವರಿಗೆ ಕಷ್ಟವಾಗುತ್ತದೆ. ಬಾಗೆವಾಡಿಯಲ್ಲಿರುವ ತನಕ ತಮ್ಮನಿಗೆ ಸುಖವಿಲ್ಲವೆಂದು ಅಕ್ಕನಿಗೆ ಮನವರಿಕೆಯಾಗುತ್ತದೆ. ತಮ್ಮನೊಡನೆ ಕಪ್ಪಡಿ ಸಂಗಮಕ್ಕೆ ಹೋಗಲು ಅವರೂ ಸಿದ್ಧರಾಗುತ್ತಾರೆ. ಮಾವ ಶಿವಸ್ವಾಮಿಯೂ ಅವರನ್ನು ಹಿಂಬಾಲಿಸುತ್ತಾರೆ.

ಸಂಗಮ ಕ್ಷೇತ್ರದ ಎಲ್ಲೆಯಲ್ಲಿ ಕಾಲಿಡುತ್ತಿದ್ದಂತೆ ಬಸವಣ್ಣನವರಿಗೆ ರೋಮಾಂಚನವಾಗುತ್ತದೆ. ಉಸಿರು ಬಂದಂತೆ, ಕಣ್ಣು ಬಂದಂತೆ, ನಡೆನುಡಿ ಬಂದಂತೆ, ಓಡೋಡಿ ದೇವಾಲಯದ ಮುಂದೆ ಬಿದ್ದು ಬಿಡುತ್ತಾರೆ. 'ನೀನೆ ತಾಯಿ, ನೀನೆ ತಂದೆ, ನೀನೆ ಬಳಗ; ತವರೇ ಕಣ್ಣೇ ಗತಿಯೇ ಮತಿಯೇ ಪುಣ್ಯವೇ, ಈ ತನಕ ನಾ ನಿನ್ನ ಮರೆತಿದ್ದೆ, ಕ್ಷಮಿಸು ತಂದೆ' ಎಂದು ಗದ್ಗದಿಸುತ್ತಾರೆ: ಪರಿಪರಿಯಾಗಿ ಹಂಬಲಿಸುತ್ತಾರೆ. ಹೊಸ ಬದುಕಿಗೆ ನಾಂದಿಯಾಗಲೆಂದು ಜನಿವಾರವನ್ನು

ಕಿತ್ತೆಸೆಯುತ್ತಾರೆ: ಕಟ್ಟಿದ್ದ ಲಿಂಗದಲ್ಲಿ ಪರಶಿವನ ಬೆಳಕನ್ನು ಕಾಣುತ್ತಾರೆ. ಆ ಬೆಳಕು ಅವರ ಅಂಗಾಂಗಗಳೆಲ್ಲೆಲ್ಲ ಹರಿದಂತಾಗಿ ಶಿವಮರುಳು ಅವರ ಚಿತ್ತ್ಯಾಶವನ್ನು ತುಂಬಿಕೊಳ್ಳುತ್ತದೆ.

ಈಶಾನ್ಯ ಗುರುಗಳೆಂದು ಪ್ರಸಿದ್ಧರಾದ ಜಾತ ವೇದ ಮುನಿಗಳು ಅಲ್ಲಿಯ ಕ್ಷೇತ್ರಪಾಲಕರು, ಪರಮ ತಪೋಧನರು ; ಬಸವಣ್ಣನವರು ಹುಟ್ಟಿದಾಗ ಇಷ್ಟಲಿಂಗ ವನ್ನು ಕಟ್ಟಿ, ಕಣ್ತೆರೆಯಿಸಿದ ಮಹಾನುಭಾವರು. ಬಸವಣ್ಣ ಬಳಿ ಸಾರಿ ದಿಂಡುರುಳಿದ ಕೂಡಲೆ ಅವರನ್ನು ಮೇಲೆತ್ತಿ ಅಪ್ಪಿಕೊಂಡು, 'ಬಾ, ಪರಶಿವನ ಕರುವೆ, ಲೋಕ ಗುರುವೆ, ಕಾರಣ ಪುರುಷನೆ, ನಿನ್ನಿಂದ ಧರ್ಮ ಉದ್ಧಾರವಾಗಲಿದೆ, ನಿನ್ನಿಂದ ಜಗಕೆ ಕಲ್ಯಾಣ ಮೊದಗಲಿದೆ: ಬಾ, ಕಂದ, ಇಲ್ಲಿದ್ದು ತಪೋನಿರತನಾಗು, ಸಕಲ ಸಿದ್ಧಿ ಗಳನ್ನು ಗಳಿಸು, ಲಿಂಗಾಂಗ ಸಾಮರಸ್ಯವನ್ನು ಸಂಪಾದಿಸು' ಎಂದು ಹರಸುತ್ತಾರೆ. 'ನಾನೀಗ ನಿಮ್ಮ ದಯೆಯಿಂದ ಹೊಸ ಹುಟ್ಟು ಪಡೆದಿದ್ದೇನೆ, ಗುರುವೆ. ತಬ್ಬಲಿಯಾದ ನನಗೆ ನೀವೆ ತಾಯಿ, ತಂದೆ. ನಿಮ್ಮನ್ನು ನೋಡಿದ ಕಣ್ಣು ಧನ್ಯ, ನಿಮ್ಮ ಆಶೀರ್ವಚನ ಕೇಳಿದ ಕಿವಿ ಧನ್ಯ, ನಿಮ್ಮ ಪಾದವನ್ನು ಮುಟ್ಟಿದ ನನ್ನ ಮೈ ಪಾವನ. ನೀವೆನಗೆ ದಾರಿ ತೋರಿಸಿ, ಕಾಪಾಡಿ ಓ ನನ್ನ ಪ್ರಾಣವೆ!' ಎಂದು ಬಸವಣ್ಣ ಕೈಮುಗಿಯುತ್ತಾರೆ. 'ನಿನಗೆ ನೀನೇ ಗುರು, ಗುರಿ, ಕಂದ. ನೀನು ಮಹಾ ಜ್ಞಾನಿ. ನೀನು ಭಕ್ತಿ ಭಂಡಾರಿಯಾಗಿ ಶಿವನನ್ನೊಲಿಸಿಕೊಂಡಿರುವೆ. ಶಿವ ನಿನ್ನ ಹೃದಯದಲ್ಲಿ ನೆಲಸಿರುವಾಗ ನಿನಗೆ ಬೇರೆಯವರ ಹಂಗು ಬೇಕಿಲ್ಲ. ನೀನು ಧ್ಯಾನಲೀನನಾಗಿರುವಾಗ

ಶಿವನೇ ನಿನ್ನೊಡನೆ ಮಾತನಾಡುತ್ತಾನೆ. ನಿನ್ನ ಸಾಧನೆ ನಿರ್ವಿಘ್ನವಾಗಿ ಸಾಗಲಿ. ಮುಂದೆ ನೀನು ಜಗಕ್ಕೆ ಕಣ್ಣಾಗು, ಬೆಳಕಾಗು, ಕುರುಬನಾಗು' ಎಂದು ಈಶಾನ್ಯ ಗುರುಗಳು ಹರಸುತ್ತಾರೆ.

ಅಕ್ಕ ನಾಗಾಂಬಿಕೆ ಮತ್ತು ಮಾವ ಶಿವಸ್ವಾಮಿ ಬಸವಣ್ಣನವರ ಪೋಷಣೆಯ ಭಾರವನ್ನು ಹೊರುತ್ತಾರೆ. ಬಸವಣ್ಣ ಹಗಲಿರುಳೆಲ್ಲ ಸಂಗಮನಾಥನ ಧ್ಯಾನದಲ್ಲಿ ಮುಳುಗಿರುತ್ತಾರೆ. ಬೆಳಗ್ಗೆ ನಸುಬೆಳಕಿರುವಾಗಲೇ ಮಲಾಪಹಾರಿ ಕೃಷ್ಣೆಯರು ಸೇರುವೆಡೆ ಮಿಂದು, ಮಡಿಯುಟ್ಟು ಹೂದೋಟದಲ್ಲಿ ಮೀಸಲಳಿಯದ ಹೂಗಳನ್ನು ಕಿತ್ತುತಂದು ಸಂಗಮನಿಗರ್ಪಿಸಿ, ಪೂಜಿಸಿ, ಹಾಡಿ, ಹೊಗಳಿ, ಉಬ್ಬಿ ಕುಣಿದಾಡಿ, ಮೈಮರೆಯುತ್ತಾರೆ. ಕಣ್ಣು ಹರಿದೆಡೆಯೆಲ್ಲ ಶಿವನನ್ನೇ ದರ್ಶಿಸುತ್ತಾರೆ.

ಸಾಧನೆಯ ಸಮಯದಲ್ಲಿ ಸಾಧಕ ಕಾಳರಾತ್ರಿಯಿಂದ ಪಾರಾಗಬೇಕಾಗುತ್ತದೆ, ನಾನಾರೀತಿಯ ಯಾತನೆಗಳನ್ನನುಭವಿಸಬೇಕಾಗುತ್ತದೆ. ಹೆಜ್ಜೆಹೆಜ್ಜೆಗೂ ಆತ್ಮಶೋಧನೆ ಮಾಡಿಕೊಳ್ಳಬೇಕಾಗುತ್ತದೆ, ಮನೋವಿಕಾರವನ್ನು ಗೆಲ್ಲಬೇಕಾಗುತ್ತದೆ. 'ಅಯ್ಯಾ, ಅಯ್ಯಾ ಎಂದು ಕರೆಯುತ್ತಲಿದ್ದೇನೆ; ಓ ಎನ್ನಲಾಗದೇ, ಅಯ್ಯಾ ?' ಎಂದು ಬಸವಣ್ಣ ಹಂಬಲಿಸುತ್ತಾರೆ. 'ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ; ಒರೆಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ'; ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು ಕೃಪೆಯ ಮಾಡಯ್ಯಾ', 'ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ ಎನ್ನ ;' 'ಕಿಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ ಬೆಳುಗಾರದಂತೆ ಮಾಡು ?' 'ಏಕೋಭಾವವೆನಗು,

ಳ್ಳೊಡೆ, ಏಕೆ ನೀ ಕರುಣಿಸೆ'; 'ಹೊರಗೆ ಹೂಸಿ, ಏವೆನಯ್ಯಾ, ಒಳಗೆ ಶುದ್ಧವಾಗದನ್ನಕ್ಕ'; 'ನೀನೊಲಿಯಿತ್ತೆ ಪುಣ್ಯ, ನೀನೊಲ್ಲದುದೆ ಪಾಪ'; 'ಒಡಲೊಡವೆ ಹಡೆದರ್ಥ ನಿಮ್ಮದೆಂದರಿಯದೆ ಕೆಮ್ಮನೆ ಕೆಟ್ಟೆ' ; 'ಎನ್ನ ತಪ್ಪು ಅನಂತ ಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲ, ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೇ ದಿವ್ಯ'- ಎಂದು ಶಿವನ ಮುಂದೆ ತಮ್ಮ ತಪ್ಪೊಪ್ಪುಗಳನ್ನೆಲ್ಲ ಮುಚ್ಚುಮರೆಯಿಲ್ಲದೆ ಬಿಚ್ಚಿಡುತ್ತಾರೆ. ತಾವು ಎಡವಿದಾಗ ಶಿವನನ್ನಾಗಲಿ, ಹತ್ತಿರದ ಜನರನ್ನಾಗಲಿ ಹೊಣೆಮಾಡುವುದಿಲ್ಲ. 'ಎನಗೆ ನಾನೇ ಹಗೆ ನೋಡಯ್ಯಾ; ಎನಗೆ ನಾನೇ ಕೆಳೆ ನೋಡಯ್ಯಾ' ಎಂದು ನುಡಿಯುತ್ತಾರೆ. 'ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ' ಎನ್ನುವಾಗ ಅವರ ಮನಸ್ಸಿನ ವೇದನೆ ಯಾರಿಗಾದರೂ ಅರ್ಥವಾಗದಿರದು.

'ವಿಷಯವೆಂಬ ಹಸುರನೆನ್ನ ಮುಂದೆ ಪಸರಿಸಿದೆಯಯ್ಯ:
ಪಶುವೇನಬಲ್ಲುದು? ಹಸುರೆಂದೆಳಸುವುದು. ವಿಷಯರಹಿತನ
ಮಾಡಿ ಸಲಹಯ್ಯಾ'

ಎಂದು ಪ್ರತಿಕ್ಷಣವೂ ಹಂಬಲಿಸುತ್ತಾರೆ.

'ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ ತಂದೆ; ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ; ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ' ಎಂಬುದಾಗಿ ಏಕಾಗ್ರತೆಗೆ ಭಂಗ ಬಂದಾಗ ಸಿಡಿಮಿಡಿಗೊಳ್ಳುತ್ತಾರೆ. ಅಡಿಗಡಿಗೆ ಲಿಂಗವನಡರಿಯುಡರಿ ನೋಡುತ್ತಿರುವಾಗ ಅವರ ಕಣ್ಣೀರು ಕೋಡಿವರಿಯುತ್ತದೆ. 'ಎನಗೆ ನಿಮ್ಮ ನೆನಹಾದಾಗಲೆ ಉದಯ, ಎನಗೆ ನಿಮ್ಮ ನೆನಹೆ ಜೀವನು' 'ನಿಮ್ಮ ನೋಟವನಂತ ಸುಖ, ನಿಮ್ಮ ಕೂಟವನಂತ ಸುಖ' ಎಂದವರು ಗಳಿಗೆಗಳಿಗೆಗೂ ಕಾತರಿಸುತ್ತಾರೆ. ಅಂತರಂಗ

ಬಹಿರಂಗ ಆತ್ಮಸಂಗ ಒಂದೆಯಾಗುವತನಕ, ಸ್ವಯಲಿಂಗದನುಭಾವ ದೊರೆ ಕೊಳ್ಳುವ ತನಕ, ಸಮರತಿ ಸಮಕಳೆ ಸಮಸುಖ ಸ್ವಾನುಭಾವ ಸಮನಿಸುವ ತನಕ ಅವರು ನಿರಂತರವಾಗಿ ಸಾಧನೆಮಾಡಿ, ಅಧ್ಯಾತ್ಮಸಿದ್ಧಿಯ ತುತ್ತತುದಿಯನ್ನು ತಲುಪುತ್ತಾರೆ.

ಅಷ್ಟು ಹೊತ್ತಿಗೆ ಅವರು ಸಂಗಮಕ್ಷೇತ್ರವನ್ನು ಸೇರಿ ನಾಲ್ಕೈದು ವರ್ಷವಾಗಿರುತ್ತವೆ. ಒಂದು ದಿನವಾದರೂ ಅವರು ಆ ಕ್ಷೇತ್ರದಿಂದ ಹೊರಗೆ ಅಡ್ಡಾಡುವುದಿಲ್ಲ. ಅವರು ಪಡೆದ ಸಿದ್ಧಿಯಿಂದ ಈಶಾನ್ಯಗುರುಗಳು ಸಂತೃಪ್ತರಾಗುತ್ತಾರೆ. ಅಕ್ಕ ನಾಗಾಂಬಿಕೆಗಂತು ಹಿಡಿಸಲಾರದ ಸಂತೋಷ. ಅವರ ಇಷ್ಟಲಿಂಗ ಪೂಜೆಯ ಓಜೆ, ಅಷ್ಟಾವರಣಗಳ ಆಚರಣೆ, ಷಟ್ಸ್ಥಲಾರೋಹಣ, ಅವರ ವಚನ ಪ್ರತಿಭೆ-ಇವುಗಳನ್ನು ಗಮನಿಸಿದ ಜನ ಅವರ ದಿವ್ಯ ತೇಜಸ್ಸಿಗೆ ಬೆರಗಾಗುತ್ತಾರೆ. ಅವರೊಬ್ಬ ಸಿದ್ಧಪುರುಷರೆಂಬ ಕೀರ್ತಿ ಮನೆಯಿಂದ ಮನೆಗೆ, ಕೇರಿಯಿಂದ ಕೇರಿಗೆ, ಊರಿಂದೂರಿಗೆ ನಾಡಿನಲ್ಲೆಲ್ಲ ಹರಡುತ್ತದೆ. ಅವರನ್ನು ದರ್ಶಿಸುವ ಸಲುವಾಗಿಯೇ ಸಂಗಮೇಶ್ವರ ಜಾತ್ರೆಯ ನೆವದಿಂದ ಜನ ಕಿಕ್ಕಿರಿಯುತ್ತಾರೆ; ಅವರು ಯಾತ್ರಾರ್ಥಿಗಳ ದೃಷ್ಟಿ ಕೇಂದ್ರವಾಗುತ್ತಾರೆ. ತಮ್ಮ ಬಳಿ ಬಂದವರನ್ನು ಮಾತಾಡಿಸಿ, ಅವರ ಬದುಕಿನ ಹಾಗೂ ಸಂಸಾರದ ಸುಖದುಃಖಗಳನ್ನು ವಿಚಾರಿಸುತ್ತಾರೆ. ಸುತ್ತಮುತ್ತಣ ಜನ ಕಣ್ಣೀರಿನ ಕಡಲಲ್ಲಿ ಮುಳುಗಿರುವಾಗ, ನೆಲೆಯಿಲ್ಲದೆ ಗುರಿಯಿಲ್ಲದೆ ಕಂಗೆಟ್ಟಿರುವಾಗ, ತಾವೊಬ್ಬರು ಸುಖಿವಾಗಿದ್ದರೆ, ಸಿದ್ಧಿ ಪಡೆದರೆ ಸಾಲದು ಎಂಬ ಚಿಂತೆ ಅವರನ್ನು ಪ್ರತಿಕ್ಷಣವೂ ಕಾಡುತ್ತದೆ. ಸಕಲ ಜೀವಾ

ವಳಿಗೆ ಲೋಕಸನ್ನೊದಗಿಸುವ ಪರಿಯನ್ನು ಕುರಿತ ಚಿಂತನೆ ಯಲ್ಲಿ ಮಗ್ನರಾಗುತ್ತಾರೆ. ನೀತಿ ಧರ್ಮಗಳ ಚೌಕಟ್ಟಿ ನಲ್ಲಿ ನವ ಸಮಾಜವನ್ನು ನಿರ್ಮಿಸಿದರೆ ಮಾತ್ರ ಈ ನತ ದೃಷ್ಟರ ಸ್ಥಿತಿಗತಿ ಉತ್ತಮವಾಗಬಹುದೆಂದು ತೀರ್ಮಾನಿಸಿ ಕೊಳ್ಳುತ್ತಾರೆ.

ಹೀಗಿರುವಾಗ ಬಲದೇವ ತನ್ನ ಮಗಳು ಗಂಗಾಂಬಿಕೆಗೆ ಸೋದರಳಿಯ ಬಸವಣ್ಣನೇ ತಕ್ಕ ವರನೆಂದು ನಿಶ್ಚಯಿಸಿ ಕೊಂಡು, ಕಪ್ಪಡಿಗೆ ಬಂದು, ಮದುವೆಯ ಪ್ರಸ್ತಾಪವೆತ್ತು ತ್ತಾನೆ. ಕಾವಿ ತೊಟ್ಟು ಗುಹೆಯಲ್ಲಿ ಕುಳಿತುಕೊಳ್ಳುವುದ ಕ್ಕಿಂತ ಸಾಮಾನ್ಯ ಜನರ ಉದ್ಧಾರ ಕಾರ್ಯ ತಮ್ಮ ಆದ್ಯ ಕರ್ತವ್ಯವೆಂದು ಬಸವಣ್ಣ ಬಗೆಯುತ್ತಾರೆ. ಇಂದ್ರಿಯ ನಿಗ್ರಹವ ಮಾಡಿದರೆ ದೋಷಗಳು ಹೋದುತ್ತವೆಂಬ, ಸತಿಪತಿಗಳೊಂದಾದ ಭಕ್ತಿಯೇ ಲಿಂಗಕ್ಕೆ ಹಿತವೆಂಬ ಸತ್ಯ ವನ್ನು ಅವರು ಬಲ್ಲರು. ಆದರೆ ಅಷ್ಟು ಬೇಗ ವೈವಾಹಿಕ ಜೀವನಕ್ಕೆ ತಲೆಯೊಡ್ಡಬೇಕಾಗಬಹುದೆಂದು ಅವರು ನಿರೀಕ್ಷಿಸಿರಲಿಲ್ಲ. ಅಕ್ಕನ ಒತ್ತಾಯಕ್ಕೆ ಮಣಿದು, ಗುರು ಗಳ ಆಶೀರ್ವಾದವನ್ನು ಪಡೆದು, ಸಂಸಾರ ಯೋಗಕ್ಕೆ ಅಣಿಗೊಳ್ಳುತ್ತಾರೆ. ಸಂಗಮೇಶ್ವರ ಕ್ಷೇತ್ರ ಅವರ ಸಕಲ ಸಾಧನೆ ಸಿದ್ಧಿಗಳಿಗೆ ಸ್ಫೂರ್ತಿಕೇಂದ್ರವಾಗಿತ್ತು; ತಾಯಿ ಮಡಿ ಲಂತಿತ್ತು: ಭೂಕೈಲಾಸದಂತಿತ್ತು. ಸಂಗಮೇಶ್ವರನ ಸನ್ನಿಧಿಯಿಂದ ದೂರ ಸರಿಯಬೇಕಾಗುತ್ತದೆಂಬ ನಿರೀಕ್ಷೆಯೇ ಅವರ ಮನಸ್ಸಿನ ಕಳವಳಕ್ಕೆ ಕಾರಣವಾಗುತ್ತದೆ.

> ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ
> 'ಅಂಬೆ ಅಂಬೆ' ಎಂದು ಕರೆವುತ್ತಲಿದ್ದೇನೆ;
> ಅಂಬೆ ಅಂಬೆ ಎಂದು ಒರಲುತ್ತಲಿದ್ದೇನೆ.
> ಕೂಡಲ ಸಂಗಮದೇವ ಬಾಳು ಬಾಳೆಂಬನ್ನಕ್ಕ

ಎಂದವರು ಪಶುವಿನಂತೆ ಪಶುಪತಿಯಲ್ಲಿ ಮೊರೆಯಿಡುತ್ತಾರೆ. ತಮ್ಮ ಯೋಗಕ್ಷೇಮವನ್ನು ನೋಡಿಕೊಂಡಿದ್ದ, ತಮ್ಮ ಆತ್ಮದೊಡನೆ ಬೆಸೆದುಕೊಂಡಿದ್ದ ಸಚರಾಚರ ವಸ್ತುಗಳಲ್ಲಿ ತಮ್ಮ ಗೋಳನ್ನು ನಿವೇದಿಸಿಕೊಳ್ಳುತ್ತಾರೆ; ಒಂದೊಂದು ವಸ್ತುವೂ ಆ ಗೋಳನ್ನು ಮಾರ್ದನಿಸುತ್ತವೆ. 'ಮಗನೆ, ಇಲ್ಲಿ ಪಡೆಯಬೇಕಾದ ಸಿದ್ಧಿ ನಿನಗಾಗಲೆ ಲಭಿಸಿದೆ. ನಿನ್ನ ಚಿಂತೆಗೆ ಕಾರಣವಿಲ್ಲ. ನೀನಿದ್ದಲ್ಲಿ ನಾನಿರುತ್ತೇನೆ. ನಿನ್ನ ಸಿದ್ಧಿಯ ಫಲವನ್ನು ಲೋಕಕ್ಕೆ ಹಂಚಬೇಕಾಗಿದೆ. ನಿನ್ನ ಜೀವನೋದ್ದೇಶ ಈಡೇರಬೇಕಾದರೆ ನೀನು ಈ ಜಾಗ ಬಿಡಬೇಕು. ಉದ್ದೇಶ ಈಡೇರಿದ ನಂತರ ಇಲ್ಲಿಗೆ ಮತ್ತೆ ಬರುವೆಯಂತೆ', ಎಂದು ಸಂಗಮನಾಥನೇ ಅವರ ಕನಸಿನಲ್ಲಿ ಎಚ್ಚರಿಸುತ್ತಾನೆ.

> ನೀ ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೆ
> ಎನ್ನ ವಶವೇ ಅಯ್ಯ ?
> ನೀ ಇರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯ ?
> ಅಕಟಕಟಾ ! ಎನ್ನವ ನೆನ್ನವ ನೆನ್ನಯ್ಯ

ಎಂದು ಹೇಳಿಕೊಳ್ಳುತ್ತ ಅವರು ಮಂಗಳವಾಡದ ಕಡೆಗೆ ನಡೆಯುತ್ತಾರೆ.

ಕಳಚೂರ್ಯ ವಂಶದ ಬಿಜ್ಜಳ ಮಂಗಳವಾಡದಲ್ಲಿ ಕಲ್ಯಾಣದ ಚಾಲುಕ್ಯರ ಮಾಂಡಲಿಕನಾಗಿ ಆಡಳಿತ ನಡೆಸುತ್ತಿದ್ದ. ಆದರೆ ಅವನ ಕಣ್ಣೆಲ್ಲ ಕಲ್ಯಾಣದ ಗದ್ದುಗೆಯ ಮೇಲೆ. ತ್ರೈಲಪ ಚಕ್ರವರ್ತಿಯನ್ನು ಕೆಳಗಿಳಿಸುವ ಮುನ್ನ ಜನ ತನ್ನ ಮೇಲೆ ಎದುರು ಬೀಳದಂತೆ ಜಾಗರೂಕನಾಗಿರಬೇಕಾಗಿತ್ತು. ಅದಲ್ಲದೆ, ತನ್ನಂತೆಯೇ ಮಹತ್ವಾಕಾಂಕ್ಷಿ

ಗಳಾದ ಇತರ ಮಾಂಡಲಿಕರನ್ನು ದೂರವಿಡಬೇಕಾಗಿತ್ತು. ಬಸವಣ್ಣನವರ ಜನಪ್ರಿಯತೆಯನ್ನು ತನ್ನ ಅನುಕೂಲಕ್ಕಾಗಿ ಬಳಸಿಕೊಳ್ಳುವ ಬಯಕೆ ಅವನ ಮನಸ್ಸಿನಲ್ಲಿತ್ತು. ಬಸವಣ್ಣ ತನ್ನ ಮಂತ್ರಿ ಬಲದೇವನ ಅಳಿಯನಾಗಲೊಪ್ಪಿದಾಗ ಅವನಿಗೆ ಅಪಾರ ಆನಂದವಾಗುತ್ತದೆ. ಬಯಸಿದ ಬಳ್ಳಿ ತನ್ನ ಮನೆತನಕ ಕುಡಿವರಿದಂತಾಗಿ, ಹಿಗ್ಗುತ್ತಾನೆ. ಬಸವಣ್ಣನವರ ಹೆಸರು ಮುಂದಿಟ್ಟುಕೊಂಡು, ತನ್ನ ಪಾಪ ಕರ್ಮಗಳನ್ನು ಮರೆಸಿ, ಜನತೆಯ ಸಹಾನುಭೂತಿಯನ್ನು ಸಂಪಾದಿಸುವುದೇ ಅವನು ಆಲೋಚಿಸಿದ ಉಪಾಯ.

ಮದುವೆಯಾದ ನಂತರ ಬಸವಣ್ಣ ಹೆಚ್ಚು ದಿನ ಮಾವನ ಮನೆಯ ಹಂಗಿನಲ್ಲಿರಲು ಇಷ್ಟಪಡುವುದಿಲ್ಲ. ಕಾಯಕದಿಂದಲ್ಲದೆ, ಪರರ ಗಳಿಕೆಯಿಂದ ಸಾಗಿಸುವ ಜೀವನ ಹೇಯವಾದದ್ದೆಂಬುದು ಅವರ ಅಚಲ ನಿಲವು. ಅವರಿಗೆ ಗಳಿಕೆ ಬೇಕಾದ್ದು ಹಸಿವು ನೀಗಲಿಕ್ಕಾಗಿಯೇ ಹೊರತು ಶೋಕಿಯ ಹವ್ಯಾಸಗಳಿಗಾಗಿಯಲ್ಲ. ಗುರುಪೂಜೆ, ಲಿಂಗಾರ್ಚನೆ ಮತ್ತು ಜಂಗಮ ದಾಸೋಹಕ್ಕಾಗಿ ಆರಂಭ ಮಾಡಲು, ವ್ಯವಹಾರ ನಡಸಲು, ಕೊನೆಗೆ ಪರಸೇವೆ ಮಾಡಲು ಅವರು ಸಿದ್ಧ. ತಮ್ಮ ಒಡಲಿಗಾಗಿ, ಮಡದಿಗಾಗಿ, ಅಥವಾ ಸಂಗ್ರಹಕ್ಕಾಗಿ ಅವರೆಂದೂ ದುಡಿದವರಲ್ಲ. ಕಾಯಕದ ಮೂಲಕ ಸಂಪಾದಿಸಿದ ಹಣ ಮಾತ್ರ ದಾಸೋಹಕ್ಕೆ ಸಲ್ಲುತ್ತದೆಯೇ ಹೊರತು, ಅನ್ಯಾಯವಾಗಿ ಪಡೆದದ್ದಲ್ಲವೆಂಬುದನ್ನು ಅವರು ಬಲ್ಲರು. ಅನ್ಯಮಾರ್ಗದಿಂದ, ಅನ್ಯಾಯದಿಂದ ಗಳಿಸಿದ ಹಣ ದೇವರಿಗೂ ಮೆಚ್ಚುಗೆಯಾಗುವುದಿಲ್ಲವೆಂದು ಅವರು ಮೇಲಿಂದ ಮೇಲೆ ಘೋಷಿ

ಸಿದ್ದುಂಟು. ಈ ಕಾರಣಕ್ಕಾಗಿ ಅವರು ಬಿಜ್ಜಳನ ಆಸ್ಥಾನದಲ್ಲಿ ಕರಣಿಕವೃತ್ತಿಯನ್ನು ಕೈಗೊಳ್ಳುತ್ತಾರೆ.

ಅವರು ಆಸ್ಥಾನವನ್ನು ಪ್ರವೇಶಿಸುವ ತನಕ ಅಲ್ಲಿಯ ತಂತ್ರ ಕುತಂತ್ರಗಳ ಹಿಂಸೆ ವಂಚನೆಗಳ, ಅನಾಚಾರ ಅತ್ಯಾಚಾರಗಳ ಕಡೆಗೆ ಅವರ ಲಕ್ಷ್ಯವಿರಲಿಲ್ಲ. ಎಲ್ಲರೂ ತಮ್ಮಂತೆಯೇ ಎಂದು ಬಗೆದಿದ್ದವರು.

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ ;
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮ ದೇವ.

ಎಂದು ತಮ್ಮಷ್ಟಕ್ಕೆ ತಾವೆ ತಮ್ಮ ನಡೆ ನುಡಿಯನ್ನು ತಿದ್ದಿಕೊಂಡು, ತಮ್ಮ ಕಾಯಕದಲ್ಲಿ ಏಕಾಗ್ರತೆಯನ್ನು ಸಾಧಿಸುತ್ತಾರೆ. 'ಪರಚಿಂತೆ ಎನಗೇಕಯ್ಯ ? ನಮ್ಮ ಚಿಂತೆ ನಮಗೆ ಸಾಲದೆ ? ಕೂಡಲ ಸಂಗಯ್ಯ ಒಲಿದಾನೊ ಒಲಿಯನೊ ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು !' ಎಂಬೊಂದು ತೊಳಕೆಯಲ್ಲಿ ಮನವಿರಿಸಿಕೊಂಡು, ಅನ್ಯವಿಷಯಕ್ಕೆಳಸದಂತೆ ಎಚ್ಚರವಾಗಿರುತ್ತಾರೆ. ಕರಣಿಕ ಹುದ್ದೆಗೆ ಸೇರಿದ ತರುಣದಲ್ಲಿಯೇ ಆಸ್ಥಾನದ ಲೆಕ್ಕಪತ್ರಗಳೊಳಗಿನ ತಪ್ಪುಗಳನ್ನು ಕಂಡು ಹಿಡಿದದ್ದು ಮಂತ್ರಿ ಮಾನ್ಯರ ಹಾಗೂ ಮಾಂಡಲಿಕರ ಗಮನವನ್ನು ಸೆಳೆಯುತ್ತದೆ. ದಕ್ಷತೆ, ಪ್ರಾಮಾಣಿಕತೆ, ನಿಷ್ಠಾಪಟ್ಯ ಮತ್ತು ಪರಿಶುದ್ಧ ವರ್ತನೆಗಳಿಂದಾಗಿ ಅವರು ಬಿಜ್ಜಳನ ಮೆಚ್ಚುಗೆಗೆ ಪಾತ್ರರಾಗುತ್ತಾರೆ. ದಂಡಾಧಿಪ ಸಿದ್ಧರಸ ಕೈಲಾಸವಾಸಿಯಾದಾಗ ಬಿಜ್ಜಳ ತನ್ನ ಮೆಚ್ಚುಗೆಯ ಸಂಕೇತವಾಗಿ

ಅವನ ಮಗಳು ನೀಲಲೋಚನೆಯನ್ನು ಬಸವಣ್ಣನವರಿಗೆ ಮದುವೆ ಮಾಡಿಸಿ, ದಂಡಾಧಿಪತಿ ಪದವಿಯನ್ನು ಸಹ ವಹಿಸಿಕೊಡುತ್ತಾನೆ. ಆದರೆ ಮರೆ ಮೋಸ ಸಂಚು ಹೊಂಚು ಲಂಚುಗುಳಿತನಗಳಿಗೆ ಪ್ರಸಿದ್ಧರಾಗಿದ್ದ ಸಹೋದ್ಯೋಗಿಗಳು ಒಳಗೊಳಗೆ ಕತ್ತಿ ಮಸೆಯಲು ಪ್ರಾರಂಭಿಸುತ್ತಾರೆ.

ಬಿಜ್ಜಳ ಚಾಲುಕ್ಯ ಚಕ್ರವರ್ತಿ ತೈಲಪನನ್ನು ಮೂಲೆಗೆ ತಳ್ಳಿ, ಕಲ್ಯಾಣದ ಸಿಂಹಾಸನವನ್ನು ಆಕ್ರಮಿಸಿಕೊಂಡ ನಂತರ, ಬಸವಣ್ಣನೂ ತನ್ನ ಸಂಸಾರದೊಡನೆ ಕಲ್ಯಾಣ ಸೇರುತ್ತಾರೆ. ಅಕ್ಕ ನಾಗಮ್ಮನೂ, ಅವರ ಎಳೆವಯಸ್ಸಿನ ಚೆನ್ನಬಸವಣ್ಣನೂ ಅವರೊಡನೆ ತೆರಳುತ್ತಾರೆ. ಸೋದರ ಮಾವನ ಅಕ್ಕರೆಯ ರಕ್ಷೆಯಲ್ಲಿ ಅವನು ಜ್ಞಾನಯೋಗಿಯಾಗಿ ಬೆಳೆಯುತ್ತಾನೆ, ಅವರ ಎಲ್ಲ ಕಾರ್ಯಗಳಲ್ಲಿಯೂ ಅವರಿಗೆ ಬೆಂಬಲವಾಗಿ ನಿಲ್ಲುತ್ತಾನೆ. ಅವರು ಭಂಡಾರಾಧಿಕಾರಿಯಾಗಿ, ದಂಡಾಧಿಪರಾಗಿ ದೊಡ್ಡ ಹೊಣೆಯನ್ನು ಹೊತ್ತುಕೊಂಡಾಗ, ಸಂಸಾರದ, ಮುಖ್ಯವಾಗಿ ಶರಣ ಸಂಸಾರದ ಎಲ್ಲ ಭಾರವನ್ನು ಚೆನ್ನಬಸವಣ್ಣನೇ ಭರಿಸಬೇಕಾಗುತ್ತದೆ. ಬಲದೇವ ಮಂತ್ರಿ ತೀರಿಕೊಂಡನಂತರ ಬಸವಣ್ಣನೇ ಆ ಪದವಿಗೆ ನಿಯುಕ್ತರಾಗುತ್ತಾರೆ.

ಬಸವಣ್ಣನವರು ತಮ್ಮ ಪಾಲಿಗೆ ಬಂದ ಹೊಣೆಯನ್ನು ಶ್ರದ್ಧೋತ್ಸಾಹಗಳಿಂದ, ಶಿವನ ಸೇವೆಯೆಂದರಿತು ನಿರ್ವಹಿಸುತ್ತಾರೆ. ದಿನೇ ದಿನೇ ಬಸವ ಬಿಜ್ಜಳರ ಸ್ನೇಹ ನಿಕಟವಾಗುತ್ತದೆ.

ಎನ್ನ ರಾಜ್ಯದ ಶಿಕ್ಷೆ ರಕ್ಷೆ ನಿನ್ನದು ಬಸವ
ಎನ್ನ ತೇಜೋಭಿಮಾನಂ ನಿನ್ನದೆಲೆ ಬಸವ
ನಿನ್ನಂತೆ ಇನ್ನುಂಟೆ ಭಂಡಾರಿ ಬಸವಣ್ಣ
ನಿನ್ನ ಬರವಿಂದ ಭಂಡಾರಂಪೊದಗಿತು ಬಸವ

ಎಂದು ಚಕ್ರವರ್ತಿ ಅವರನ್ನು ಹೊಗಳುತ್ತಾನೆ. ಈ ಹೊಗಳಿಕೆ ತಮಗೆ ಶೂಲವಾಯಿತೆಂದು ಬಸವೇಶ್ವರರು ಗೋಣಗಿಕೊಂಡದ್ದುಂಟು. ಅವರ ಏಳ್ಗೆಯನ್ನು ಕಂಡು ಕಸಿವಿಸಿಗೊಂಡ ಅಸೂಯೆಯ ಜನ ದೊರೆಗೆ ಚಾಡಿ ಚುಚ್ಚಲು ಸಮಯ ಕಾಯುತ್ತಾರೆ.

ಕೈ ತುಂಬ ಲೌಕಿಕ ವ್ಯವಹಾರಗಳಿದ್ದರೂ ಅವರ ದೃಷ್ಟಿ ಮಾತ್ರ ಸದಾ ಶಿವಪಥದಲ್ಲಿ ನೆಟ್ಟಿರುತ್ತದೆ. ದಿನೇ ದಿನೇ ಕಾರ್ಯ ಕ್ಷೇತ್ರ ವಿಶಾಲವಾಗುತ್ತಿದ್ದರೂ ಗುರುಲಿಂಗ ಜಂಗಮ ಪೂಜೆ ಮಾತ್ರ ನಿರಂತರವಾಗಿ ನಡೆಯಲೇಬೇಕು. ತಮ್ಮ ಕಾಯಕದಲ್ಲಿ ಬಂದ ಆದಾಯದ ಬಹುಭಾಗ ದಾಸೋಹದ ಮೂಲಕ ಶರಣರಿಗೆ ಸಲ್ಲಬೇಕು. ದಿನವೂ ಧರ್ಮದ ಬಗ್ಗೆ, ಆಚಾರ ವಿಚಾರಗಳ ಬಗ್ಗೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ, ಅಧ್ಯಾತ್ಮಿಕ ಸಾಧನೆಯ ಬಗ್ಗೆ ಶರಣರೊಡನೆ ಚರ್ಚಿಸಿ, ವಿಚಾರವಿನಿಮಯ ಮಾಡಿಕೊಳ್ಳಬೇಕು. ವಾದವಿವಾದ ವಿಚಾರಾನುಭವಗಳ ಫಲವಾಗಿ ಸಂಭವಿಸಿದ ಧಾರ್ಮಿಕ ಕ್ರಾಂತಿಯಿಂದ ಹೊಸ ಧರ್ಮಕ್ಕೆ ವಿಶಿಷ್ಟ ಕಾಂತಿಯೂ ಭದ್ರತೆಯೂ ದೊರೆಕೊಳ್ಳುತ್ತವೆ. ಬಸವಣ್ಣನವರ ಭಕ್ತಿನಿಷ್ಠೆಯನ್ನೂ ಪವಾಡ ಸದೃಶವಾದ ಧಾರ್ಮಿಕ ಕಾರ್ಯಗಳ ವಿವರವನ್ನೂ ಕೇಳಿ ತಿಳಿದುಕೊಂಡ ಜನ ಸಾವಿರಾರು ಸಂಖ್ಯೆಯಲ್ಲಿ ಕಲ್ಯಾಣಕ್ಕೆ ಬರುತ್ತಾರೆ. ಜಾತಿ ಕುಲ ವೃತ್ತಿ ಅಥವಾ ಯಾವುದೇ ವಿಧವಾದ

ಭೇದಕ್ಕೆ ಅವಕಾಶವಿಲ್ಲದ್ದರಿಂದ ಸಾಮಾನ್ಯರು ಅಸಾಮಾನ್ಯರು, ಬಡವ ಬಲ್ಲಿದರು ದೊರೆಗಳು ಸೇವಕರು ಕಮ್ಮಾರ ಮಡಿವಾಳರು ಒಕ್ಕಲಿಗರು ಮೋಚಿಗಳು ಎಲ್ಲ ಬಗೆಯ ಕಾಯಕಗಳ ಜನ ಅಲ್ಲಿ ನೆರೆಯುತ್ತಾರೆ. ಬಸವಣ್ಣನವರ ಮನೆಯೇ ಮಹಾಮನೆಯಾಗುತ್ತದೆ. ಪ್ರಸಾದ ನಿಲಯವಾಗುತ್ತದೆ. ಅಲ್ಲಿ ಉತ್ತಮ ವರ್ಣದವರ ಅಟ್ಟಹಾಸವಿಲ್ಲ, ಸಿರಿವಂತರ ಕಿರುಕುಳವಿಲ್ಲ, ಸೂತಕದ ಪಾತಕವಿಲ್ಲ. ಶಿವನ ಸಂಕೇತವಾದ, ಆತ್ಮಜ್ಯೋತಿಯ ಕುರುಹಾದ ಲಿಂಗವನ್ನು ಧರಿಸಿದರೆ ಸಾಕು, ಎಲ್ಲರೂ ಸಮಾನರು, ಸ್ವತಂತ್ರರು. ಏಕಾಗ್ರತೆಯನ್ನು ಸಾಧಿಸಲು, ಶಿವಪಥದ ಕಡೆಗೆ ಮನಸ್ಸು ತಿರುಗಿಸಲು, ಸಾಕಾರದ ಮೂಲಕ ನಿರಾಕಾರವನ್ನು ಗ್ರಹಿಸಲು, ಅರುಹಿನ ಮೂಲಕ ಕುರುಹನ್ನು ಮರೆಯಲು ಲಿಂಗವೊಂದು ಸಾಧನವೆಂಬುದನ್ನು ಮಹಾಮನೆಗೆ ಬಂದ ಪ್ರತಿಯೊಬ್ಬರೂ ಅರಿಯುತ್ತಾರೆ. ಲೌಕಿಕ ಕ್ಷೇಮಕ್ಕೆಂತೋ ಅಂತೆಯೇ ಅಲೌಕಿಕ ಸಿದ್ಧಿಗೂ ಲಿಂಗಧಾರಣೆ ಅತ್ಯಗತ್ಯವಾಗುತ್ತದೆ.

ಸರ್ವೋದಯವನ್ನು ಮರೆತ ಮೇಲು ಕೀಳುಗಳನ್ನು ಬೆಳೆಸುವ ಮತ ಯಾರಿಗೂ ಬೇಡ. ಜಾತೀಯತೆಯನ್ನೂ ಅಸ್ಪೃಶ್ಯತೆಯನ್ನೂ ಪೋಷಿಸುವ ಮತ ನಾಡಿನ ಹಾಗೂ ಸಮಾಜದ ಐಕ್ಯಕ್ಕೆ ಹಾಗೂ ಸಾಮರಸ್ಯಕ್ಕೆ ಮುಳ್ಳಾಗುತ್ತದೆ. ಈ ಅನೈಕ್ಯವೇ ನಾಡಿನ ಒಡಕಿಗೆ ಮತ್ತು ದಾಸ್ಯಕ್ಕೆ ಕಾರಣವಾಗುತ್ತದೆ. ಇದು ಬಸವಣ್ಣನವರ ಮುಂಗಾಣ್ಕೆ. ಈ ಅನಿಷ್ಟವನ್ನು ತಡೆಗಟ್ಟಲೆಂದೇ ಅವರು ಹೊಸ ಮತದ ಉದಯಕ್ಕೆ ಮುಂದಾಗುತ್ತಾರೆ. ಹೊಸ ಮತಕ್ಕೆ ಸೇರಿದ ಜನರಲ್ಲಿ ಯಾವುದೇ ಭೇದಭಾವವಿರಬಾರದು, ಯಾವ

ಕಾರಣಕ್ಕೂ ಅವರಲ್ಲಿ ಬಿರುಕು ಕಾಣಕೂಡದು ಎಂಬ ಕಾರಣಕ್ಕಾಗಿ ಅವರು ಅದಕ್ಕೊಂದು ನೀತಿ ಸಂಹಿತೆಯ ನೆಲಗಟ್ಟನ್ನು ರೂಪಿಸುತ್ತಾರೆ; ಅಷ್ಟಾವರಣದ ಚೌಕಟ್ಟನ್ನು ನಿರ್ಮಿಸುತ್ತಾರೆ. ಆದರೂ ಹಲವರು ಹಳೆಯ ವಾಸನೆಗಳನ್ನು ಬಿಡಲಾರದೆ, ಮಾರಿಮಸಣಿಯರ ಪೂಜೆಯನ್ನು ಮುಂದುವರಿಸಿರಬೇಕು, ಹಾರುವ ಹೊಲೆಯ ಎಂಬ ಭೇದವನ್ನು ಮರೆಯದಿರಬೇಕು. ಆದ್ದರಿಂದಲೇ ಬಸವಣ್ಣನವರು ತುಂಬ ಸಂಕಟದಿಂದ 'ಹೋಗೆಂದಡೆ ಹೋಗವು ಕೆಲವು ದೈವಂಗಳು,' 'ಅಂದಣವನೇರಿದ ಸೊಣಗನಂತೆ ಕಂಡೊಡೆ ಬಿಡದು ಮುನ್ನಿನ ಸ್ವಭಾವವನು,' 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರ ನೆಲ್ಲರನೊಂದೆ ಎಂಬೆ' 'ದೇವಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡಡೆ, ನಿಮ್ಮಾಣೆ' ಎಂದು ಉದ್ಗಾರ ತೆಗೆಯುತ್ತಾರೆ. ಅವರ ದೃಷ್ಟಿ ಬಹು ಸೂಕ್ಷ್ಮ. ಮೇಲು ಜಾತಿಯವರು ಪಂಚಮರೊಡನೆ ನಡೆದುಕೊಳ್ಳುತ್ತಿದ್ದ ರೀತಿಯನ್ನು ಗಮನಿಸುತ್ತಾರೆ; ಅವರನ್ನು ತುಚ್ಛವಾಗಿ ಕಂಡಿದ್ದಾರೆ, ಮರೆಯಲ್ಲಿ ಬಯ್ದಿದ್ದಾರೆ; ಅವರೊಡನೆ ಕಟಕಿಯಾಡಿದ್ದಾರೆ. ಪಂಚಮರು ಮೂಕರಂತೆ ತಲೆ ತಗ್ಗಿಸಿಕೊಂಡು ಮೂದಲಿಕೆಗಳನ್ನು ಸಹಿಸಿಕೊಳ್ಳುತ್ತಾರೆ. ಇದನ್ನೆಲ್ಲ ನೋಡಿದ ಬಸವಣ್ಣನವರ ಹೃದಯ ಮರುಕದಿಂದ ಕರಗುತ್ತದೆ. 'ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ? ಲಿಂಗದೇವನ ಪೂಜಿಸಿ ಕುಲವನರಸುವರೆ?' ಎಂದು ಉತ್ತಮ ವರ್ಗದವರನ್ನು ಪ್ರಶ್ನಿಸುತ್ತಾರೆ.

ಕಾಲಾನುಗುಣವಾಗಿ ವಿಕಾಸ ಹೊಂದುತ್ತ, ಸಮಾಜದ ಸರ್ವಾಂಗೀಣ ಪ್ರಗತಿಯನ್ನು ಸಾಧಿಸುತ್ತ, ಲೋಕ

ಕ್ಷೇಮವನ್ನು ಭದ್ರಗೊಳಿಸುವ ಮತ ಮಾತ್ರ ಜೀವಂತ ವಾದದ್ದೆಂದೂ, ಗ್ರಾಹ್ಯವಾದದ್ದೆಂದೂ ಬಸವಣ್ಣ ಜಗತ್ತಿಗೆ ತೋರಿಸಿಕೊಡುತ್ತಾರೆ. ಹೊಸ ಹೊಸ ಭಾವನೆ ಆಲೋಚನೆಗಳನ್ನು ಅಳವಡಿಸಿಕೊಳ್ಳಲಾರದ ಮತ ಸೃಜನಶೀಲತೆಯನ್ನು ಕಳೆದುಕೊಂಡು ಜಡವಾಗುತ್ತದೆಂಬುದನ್ನು ಅವರು ಸ್ಪಷ್ಟಪಡಿಸುತ್ತಾರೆ. ತಮ್ಮ ಕ್ರಾಂತಿಕಾರಕ ಮಾರ್ಗ ದರ್ಶನದಿಂದಾಗಿ ಅವರು ಸೂಜಿಗಲ್ಲಿನಂತೆ ಶಿಷ್ಯಕೋಟಿಯನ್ನು ಆಕರ್ಷಿಸುತ್ತಾರೆ. ಕಲ್ಯಾಣ ಭರತ ಖಂಡದ ಸಾಂಸ್ಕೃತಿಕ ರಾಜಧಾನಿಯಾಗುತ್ತದೆ. ಮತೀಯ ಕ್ರಾಂತಿ, ಸಾಮಾಜಿಕ ಪರಿವರ್ತನೆ ಹಾಗೂ ಅವರ ವೈಯಕ್ತಿಕ ಸಿದ್ಧಿಯ ಯಶಸ್ಸು ಪಟ್ಟಭದ್ರ ಹಿತಾಸಕ್ತಿಯ ಸಂಪ್ರದಾಯ ಜಡರ ಅಸೂಯೆಯನ್ನು ಕೆರಳಿಸುತ್ತವೆ. ಎಚ್ಚತ್ತ ಸಾಮಾನ್ಯ ಜನ ತಮ್ಮ ಭೋಗ ವಿಲಾಸಗಳಿಗೆ ಅಡಚಣೆಯಾಗುತ್ತಾರೆಂಬ, ಜೀವಂತ ಹೆಣದಂತಿದ್ದ ಮತಗಳು ಕೊಚ್ಚಿಕೊಂಡು ಹೋಗುತ್ತವೆಂಬ ಭೀತಿಯೇ ಅವರ ಕೆಗಳಿಕೆಗೆ ಕಾರಣ. ಅಧಿಕಾರವಿದ್ದೆಡೆ ಕೊಂಡೆಯರ ತಂಡ ಇದ್ದದ್ದೇ. ಅವರು ಸಮಯ ನೋಡಿ, ಬಸವಣ್ಣ ಶಿವ ಶರಣರಿಗಾಗಿ ಭಂಡಾರವನ್ನು ಬರಿದುಮಾಡುತ್ತಿದ್ದುದಾಗಿಯೂ, ವರ್ಣಾಶ್ರಮ ಧರ್ಮವನ್ನು ವಿರೋಧಿಸುವ ಮೂಲಕ ಜನತೆಯಲ್ಲಿ ಕಲಹದ ಬೀಜವನ್ನು ಬಿತ್ತುತ್ತಿದ್ದುದಾಗಿಯೂ ಬಿಜ್ಜಳನ ಕಿವಿಗೆ ಚಾಡಿಯನ್ನು ಬೆಸೆಯುತ್ತಾರೆ. ಬಸವಣ್ಣನವರ ಧರ್ಮಶ್ರದ್ಧೆ, ಸತ್ಯಸಂಧತೆ, ಮತ್ತು ಚಟುವಟಿಕೆಗಳ ಬಗ್ಗೆ ಅವನೆಂದೂ ಶಂಕೆ ಹೊಂದಿದ್ದಿಲ್ಲ. ಆದರೆ ರಾಜನಾಗಿ ಯಾರೊಡನೆಯೂ ವೈರ ಕಟ್ಟಿಕೊಳ್ಳುವಂತಿಲ್ಲ. ಮೊದಮೊದಲು ಚಾಡಿಯನ್ನು ಕೇಳಿ ಮರೆ

ಯುತ್ತಾನೆ ; ಅನಂತರ ಮುಗುಳು ನಗೆಯಿಂದ ಸಿಪಾರಿಸುತ್ತಾನೆ ; ಅಪಪ್ರಚಾರ ತೀವ್ರವಾದಾಗ ಭಂಡಾರದ ಲೆಕ್ಕವನ್ನು ತನಿಖೆಗೊಳಪಡಿಸುತ್ತಾನೆ. ಕೊರತೆ ಕಾಣದಿರಲು ತೆಪ್ಪಗಾಗುತ್ತಾನೆ. ಎಂದಿನಂತೆ ಬಸವಣ್ಣನವರನ್ನು ಗೌರವಿಸುತ್ತಾನೆ. ಆದರೂ ಭಂಡಾರದ ತನಿಖೆಯಿಂದಾಗಿ, ಚಾಡಿಕೋರರ ಮಾತಿಗೆ ಬೆಲೆ ಕೊಟ್ಟಿದ್ದಕ್ಕಾಗಿ ಬಸವಣ್ಣನವರ ಆತ್ಮಗೌರವಕ್ಕೆ ಭಂಗ ಬಂದಂತಾಗುತ್ತದೆ. 'ಕೂಡಲಸಂಗಮದೇವರುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯಾ' ಎಂದು ಖೇದವನ್ನು ವ್ಯಕ್ತಪಡಿಸುತ್ತಾರೆ. ಆದರೂ ರಾಜಕಾರಣ ಪಟುವಾದ ಬಿಜ್ಜಳ ಬಸವಣ್ಣನವರ ಧರ್ಮಕಾರ್ಯದಲ್ಲಿ ತಲೆ ಹಾಕುವುದಿಲ್ಲ.

ಕೊಂಡೆಯರ ಕಾಟದಿಂದ ಬಸವಣ್ಣ ಎದೆಗುಂದುವುದಿಲ್ಲ. 'ಹೊಯಿದವರೆನ್ನ ಹೊರೆದವರೆಂಬೆನು : ಬಯ್ದವರೆನ್ನ ಬಂಧುಗಳೆಂಬೆನು ; ನಿಂದಿಸಿದವರೆನ್ನ ತಾಯಿತಂದೆಗಳೆಂಬೆ' ಎಂದು ತಮ್ಮ ಔದಾರ್ಯವನ್ನು ಮೆರೆಯುತ್ತಾರೆ. ಮಂದಿ ನಿಂದಿಸಿತೆಂದು ಕುಗ್ಗುವುದಿಲ್ಲ, ಹೊಗಳಿತೆಂದು ಹಿಗ್ಗುವುದಿಲ್ಲ. ನಿಂದಕರನ್ನು ಗೌರವದಿಂದಲೇ ಕಾಣುತ್ತಾರೆ. ಇದು ಸ್ಥಿತಪ್ರಜ್ಞನ ಲಕ್ಷಣ, ಸಂತನ ನಿಲುವು. ಅಸ್ಪೃಶ್ಯತೆಯ ನಿರ್ಮೂಲನ, ಜಾತಿವಿನಾಶ, ಕಾಯಕ ದಾಸೋಹ ತತ್ತ್ವಗಳ ಅನುಷ್ಠಾನ, ವಿಚಾರ ಸ್ವಾತಂತ್ರ್ಯ, ಸರ್ವಸಮಾನತೆಗಳ ಸಾಧನೆ, ಸ್ತ್ರೀಪುರುಷ ಭೇದನಿವಾರಣೆ –ಇವುಗಳ ಪೂರೈಕೆಯೇ ಅವರ ಜನ್ಮೋದ್ದೇಶ. ಅವುಗಳನ್ನು ಬಿಟ್ಟು ಬೇರೆ ಕಡೆ ಅವರ ಚಿಂತೆ ಹರಿಯುವುದಿಲ್ಲ. ಹಗಲೆಲ್ಲ ಉದರಂಭರಣಕ್ಕಾಗಿ ಕೈಕೊಂಡ ಕಾಯಕ ; ಉಳಿದ ವೇಳೆಯಲ್ಲಿ ತ್ರಿವಿಧ ದಾಸೋಹ, ಅನುಭವ

ಮಂಟಪದಲ್ಲಿ ಶರಣರೊಡನೆ ಧಾರ್ಮಿಕಚರ್ಚೆ, ಅಧ್ಯಯನ ಮತ್ತು ಅಧ್ಯಾತ್ಮ ಸಾಧನೆ. ಹೀಗಿರುವಾಗ ಪರಚಿಂತೆಗೆ ಬಿಡುವೆಲ್ಲಿದೆ ? ಇತರರಿಗೆ ಹೆದರಿಕೊಂಡು ತಾವು ಕಂಡ ಸತ್ಯದಿಂದ ವಿಮುಖರಾಗುವ ಹೇಡಿಯಲ್ಲ ಅವರು. 'ನ್ಯಾಯ ನಿಷ್ಠುರಿ, ದಾಕ್ಷಿಣ್ಯಪರನು ನಾನಲ್ಲ ; ಲೋಕವಿರೋಧಿ, ಶರಣನಾರಿಗಂಜುವನಲ್ಲ' ಎಂಬ ಸಾತ್ತ್ವಿಕ ಛಲ ಅವರದು. ತಮ್ಮ ಸಂಚು ಹೊಂಚುಗಳು ವಿಫಲಗೊಂಡಾಗ ಚಾಡಿಕೋರರು ತಣ್ಣಗಾಗುವುದಿಲ್ಲ. ಮತ್ತಷ್ಟು ಗರಿಗಟ್ಟಿಕೊಂಡು ತಮ್ಮ ಪ್ರಯತ್ನವನ್ನು ತೀವ್ರಗೊಳಿಸುತ್ತಾರೆ. ಆಸ್ಥಾನದ ಒಳಗೆ ಮಾತ್ರವಲ್ಲ, ಹೊರಗೂ ಅವರ ಅಪಪ್ರಚಾರ ಮುಗಿಲು ಮುಟ್ಟುತ್ತದೆ. 'ಆರು ಮುನಿದು ನಮ್ಮನೇನು ಮಾಡುವರು ? ನಮ್ಮ ಕುನ್ನಿಗೆ ಕೂಸ ಕೊಡಬೇಡ ; ನಮ್ಮ ಸೊಣಗಂಗೆ ತಳಿಗೆಯಲಿಕ್ಕಬೇಡ,' ಎಂದು ಬಸವಣ್ಣನವರು ಬೇಸರದಿಂದ ಗುಡುಗುತ್ತಾರೆ.

ಆಗದವರು ಹೂಡಿದ ಹೂಟವೋ ಏನೋ, ಅವರನ್ನು ಪರೀಕ್ಷಿಸುವ ಸಂದರ್ಭಗಳು ಮೇಲಿಂದ ಮೇಲೆ ಒದಗುತ್ತವೆ. ಒಮ್ಮೆ ಕಳ್ಳರು ಗೋಶಾಲೆಯಲ್ಲಿದ್ದ ಆಕಳನ್ನು ಕೊಂಡೊಯ್ಯುತ್ತಾರೆ. ಕದ್ದರೆಂದು ಹೇಳಲು ಬಸವಣ್ಣನವರಿಗೆ ಮನಸ್ಸು ಬರುವುದಿಲ್ಲ. ಹೊಟ್ಟೆಬಟ್ಟೆಗಿಲ್ಲದ ಜನ ಉಳ್ಳವರ ಕಡೆಯಿಂದ ತಮಗೆ ಬೇಕಾದ್ದನ್ನು ಒಯ್ದರೆ ಅವರಿಗೆ ಕಳ್ಳರೆಂದು ನಾಮಕರಣಮಾಡುತ್ತೇವೆ; ಅವಶ್ಯಕತೆಗಿಂತ ಹೆಚ್ಚಾಗಿ ಸಂಗ್ರಹಿಸಿದವರನ್ನು ಕಳ್ಳರೆಂದು ಕರೆಯುವುದಿಲ್ಲವೆಂಬುದು ಅವರ ವಾದ. 'ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ. ಬೊಬ್ಬಿಡದಿರಿಂ. ಆರಡದಿರಿಂ.

ನಿಮ್ಮ ಧರ್ಮ' ಎಂದು ಆಳುಗಳಿಗೆ ಬೆಸಸುತ್ತಾರೆ. ಕಳ್ಳರು ಹಾಲುಂಡರೂ ಸಂಗನಿಗೆ ಸಂದಂತಾಗುತ್ತದೆಂದು ಅವರು ಭಾವಿಸುತ್ತಾರೆ.

ತಾಯ್ಗಳುಮ್ಮಳಿಸಲಾಗದು ಕರುಗಳಂ ಬಿಡಿರೆ ।
ಬೇಗ ಮೊಲೆ ತೊರೆದು ಮರುಗುವವು ಕರುಗಳಂ ಬಿಡಿರೆ ।
ಮಕ್ಕಳುಗಳವ್ವೆಗಳು ನೋಯಲಾಗದು ಬಿಡಿರೆ ।

ಎಂದು ಕರುಗಳನ್ನು ಸಹ ಬಿಡಿಸಿ, ತಾಯಿಗಳ ಹಿಂದೆ ಅಟ್ಟುತ್ತಾರೆ.

ಮತ್ತೊಮ್ಮೆ ಕಳ್ಳರು ರಾತ್ರಿಯ ವೇಳೆ ಮಲಗಿದ್ದ ಸತಿಯ ಕರ್ಣಾಭರಣಕ್ಕೆ ಕೈಹಾಕುತ್ತಾರೆ. ಸತಿ ಎಚ್ಚೆತ್ತು ಕೂಗಿಕೊಳ್ಳುತ್ತಾಳೆ. ಪಕ್ಕದಲ್ಲಿ ಪತಿ ಕಣ್ತೆರೆದು ನೋಡುತ್ತಾರೆ. ಒಡವೆಗಾಗಿ ಬಂದವರು ಕಳ್ಳರೇ ? ಅಲ್ಲ, ಹಸಿದವರು, ನಿರ್ಗತಿಕರು ! ಅವರು ಹಸಿವಿನಿಂದ ನರಳುತ್ತಿದ್ದರೂ ತಮ್ಮವರು ಆಭರಣ ತೊಟ್ಟು ನಲಿದಾಡುವುದು ತರವಲ್ಲವೆಂಬ ಭಾವನೆ ಅವರ ಮನಸ್ಸಿನಲ್ಲಿ ಮೂಡುತ್ತದೆ.

ಒಡವಿರ್ದ ಸತಿಯೆಂದು ಮಚ್ಚಿರ್ದೆನಯ್ಯ
ಕೈಪಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯ
ಅಯ್ಯೋ, ನಮ್ಮಯ್ಯನ ಕೈ ನೊಂದಿತು
ತೆಗೆದುಕೊಡಾ ಎಲೆ ಚಂಡಾಲಗಿತ್ತೀ ।
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
ಕೂಡಲ ಸಂಗಮದೇವನಲ್ಲದೆ ಆರೂ ಇಲ್ಲಾ

ಕಳ್ಳನಲ್ಲಿಯೂ ಶಿವನಿದ್ದಾನೆ. ಇಲ್ಲದವರ ಮನೆಗೆ ಅವನು ಹೋಗುತ್ತಾನೆಯೇ ? ಅವನ ಕಳ್ಳತನದ ಚಾಳಿಗೆ ಯಾರು ಕಾರಣ ? ಸಮಾಜ ತಾನೆ ! ಎಲ್ಲರಿಗೂ ಅನ್ನ ಬಟ್ಟೆ

ಸಿಗುವಂಥ ಸನ್ನಿವೇಶವನ್ನು ಸಮಾಜ ಕಲ್ಪಿಸಿದ್ದರೆ ಕಳ್ಳತನವೇ ಇರುತ್ತಿರಲಿಲ್ಲ. ನೀಲಮ್ಮನವರು ಸದ್ದಿಲ್ಲದೆ ತನ್ನ ಆಭರಣಗಳನ್ನು ಬಿಚ್ಚಿ ಕಳ್ಳನಿಗೆ ಸಮರ್ಪಿಸುತ್ತಾರೆ: 'ಎನಗೆ ಪ್ರಾಣವು ನೀವೆ ಬಸವಯ್ಯಾ, ಎನಗೆ ಪ್ರಸಾದವು ನೀವೆ ಬಸವಯ್ಯ' ಎಂದು ಪತಿಯ ಪಾದದಲ್ಲಿ ಮಣಿಯುತ್ತಾರೆ.

ಬಸವಣ್ಣನವರ ಲೋಕ ಸಂಗ್ರಹ ಕಾರ್ಯ ಪರಿಪೂರ್ಣವಾಗಬೇಕಾದರೆ ಹಲವು ವ್ಯಕ್ತಿಗಳು ಅವರ ನೆರವಿಗೆ ನಿಂತದ್ದುಂಟು. ಅವರಲ್ಲಿ ಬಳ್ಳಿಗಾವೆಯ ಅಲ್ಲಮಪ್ರಭು ಒಬ್ಬರು. ಅವರು ಬಸವಣ್ಣನವರಿಗೆ ಗುರುಸ್ಥಾನದಲ್ಲಿದ್ದಾರೆ. ಅನಿಮಿಷಯ್ಯನ ಶಿಷ್ಯರೂ ನಿರಂಜನಸ್ವರೂಪರೂ ವೈರಾಗ್ಯಮೂರ್ತಿಯೂ ಆದ ಪ್ರಭುದೇವರು ಪಾದಯಾತ್ರೆಯ ಕಾಲದಲ್ಲಿ ಭಕ್ತರಿಗೆ ಶಿವತತ್ತ್ವವನ್ನು ಬೋಧಿಸುತ್ತ, ಕಲ್ಯಾಣದ ಕಡೆಗೆ ನಡೆಯುತ್ತಾರೆ. ಬಸವಣ್ಣನವರ ಭಕ್ತಿಮಹಿಮೆಯ ಹಾಗೂ ಧರ್ಮಕಾರ್ಯದ ಯಶಸ್ಸಿನ ಸಂಗತಿ ಆ ಮೊದಲೇ ಅವರ ಕಿವಿಗೆ ಬಿದ್ದಿತ್ತು. ಕಿವಿಯಾರೆ ಕೇಳಿದ್ದನ್ನು ಕಣ್ಣಾರೆ ಕಂಡು ಆನಂದಿಸುವ, ಅವರಿಗೆ ಉತ್ತೇಜನ ನೀಡುವ ಸಲುವಾಗಿ ಪ್ರಭುದೇವರು ಕಲ್ಯಾಣವನ್ನು ಪ್ರವೇಶಿಸುತ್ತಾರೆ. ಅವರ ಜತೆಯಲ್ಲಿ ಸಿದ್ಧರಾಮೇಶ್ವರರೂ ಇದ್ದಾರೆ. ಕಲ್ಯಾಣವೆಂಬ ಪಣತೆಯಲ್ಲಿ ಭಕ್ತಿರಸವೆಂಬ ತೈಲ, ಆಚಾರವೆಂಬ ಬತ್ತಿ: ಬಸವಣ್ಣನೆಂಬ ಜ್ಯೋತಿ ಅದನ್ನು ಮುಟ್ಟಲಾಗಿ ಎಲ್ಲೆಲ್ಲೂ ಶಿವತತ್ತ್ವವೇ ಬೆಳಗುತ್ತಿದೆ; ಅವರಿರುವ ಕ್ಷೇತ್ರ ಪಾವನ ಎಂದು ಪ್ರಭುದೇವರು ಸಿದ್ಧರಾಮೇಶ್ವರರಿಗೆ ಹೇಳುತ್ತಾರೆ. ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರ

ದೆಂದು ಕರ್ತ ಅಟ್ಟಿದನಯ್ಯ ಒಬ್ಬ ಶಿವಶರಣನ: ಆ ಶರಣ ಬಂದು, ಕಲ್ಯಾಣವೆಂಬ ಶಿವಪುರವ ಕೈಲಾಸವ ಮಾಡಿದ: ಲೋಕದಲ್ಲೆಲ್ಲ ಶಿವಾಚಾರದ ಧ್ವಜವನ್ನು ಮೆರೆಸಿದ: ಮರ್ತ್ಯಲೋಕ ದೇವಲೋಕಗಳಿಗೆ ತಾನೇ ನಿಚ್ಚಣಿಗೆಯಾದ: ಆ ಶರಣನ ಮನೆಯೊಳಗಿಪ್ಪ ಶಿವ ಗಣಂಗಳ ವಿಷಯ ತಿಳಿದು ನನ್ನ ಮನ ಉಬ್ಬಿ ಕೊಬ್ಬಿದೆ ಯಯ್ಯ ಎಂದು ಕೊಂಡಾಡುತ್ತಾರೆ: ಅವರಿರುವ ಪುರಕ್ಕೆ ಇಬ್ಬರೂ ನಮಸ್ಕರಿಸುತ್ತಾರೆ.

ಮಹಾಮನೆಯ ವೈಭವವನ್ನು ನೋಡುತ್ತ, ಹಿಗ್ಗುತ್ತ ಬಾಗಿಲಲ್ಲಿ ಇಬ್ಬರೂ ಕಾಯುತ್ತಾರೆ. ಆಗ ಬಸವರಾಜರು ಲಿಂಗಾರ್ಚನೆಯಲ್ಲಿ ಮಗ್ನರಾಗಿರುತ್ತಾರೆ. ಬಂದ ಪೂಜ್ಯರನ್ನು ಬಿಜಯ ಮಾಡಿಸುವಂತೆ ಪರಿಚಾರಕ ನನ್ನಟ್ಟುತ್ತಾರೆ. ಜಂಗಮವೆ ಮನೆ ಮುಂದೆ ನಿಂತಿರುವಾಗ ಆಳನ್ನಟ್ಟುವುದೆ ? ಅವರು ಜಗ್ಗುವುದಿಲ್ಲ. ಹಡಪದಪ್ಪಣ ಗಳು ಬಂದರೂ ಅವರು ಕದಲುವುದಿಲ್ಲ. ಚನ್ನಬಸವಣ್ಣನ ಸಲಹೆಯ ಮೇರೆಗೆ ಬಸವಣ್ಣನವರೇ ಓಡೋಡಿ ಬಂದು, ಅಲ್ಲಮನ ಪಾದಗಳ ಮೇಲೆ ಕುಸಿದು, ತಮ್ಮಿಂದ ಅಪಚಾರ ವಾಯಿತೆಂದು ನಡುಗುತ್ತ ಕುಗ್ಗುತ್ತ ಕ್ಷಮೆ ಯಾಚಿಸು ತ್ತಾರೆ. ಅವರೇ ದಾರಿಯಲ್ಲಿ ನಡೆಮುಡಿ ಹಾಸಿ ಒಳಗೆ ಕರೆದೊಯ್ಯುತ್ತಾರೆ. 'ಬಸವಣ್ಣನು ಗುರುರೂಪದಲ್ಲಿ, ಚೆನ್ನಬಸವಣ್ಣನು ಲಿಂಗರೂಪದಲ್ಲಿ, ಪ್ರಭುದೇವನು ಜಂಗಮರೂಪದಲ್ಲಿ ಇಳೆಯಲ್ಲಿ ಅವತರಿಸಿದ್ದಾರೆ. ಅವ ರಿಂದ ಭಕ್ತಿ ಜ್ಞಾನ ಚೈತನ್ಯಗಳು ಬೆಳೆಯುತ್ತಿವೆ: ಕಾಯಕ ಯೋಗ ಫಲಿಸುತ್ತಿದೆ' ಎಂದು ಮಡಿವಾಳ ಮಾಚಯ್ಯ ಹೊಗಳುತ್ತಾನೆ. 'ಬಸವಣ್ಣ ಬರಿಯ ಭಕ್ತರಲ್ಲ, ಸಿದ್ಧರಲ್ಲ

ಸಂತರಲ್ಲ, ಅಪಾರ ಲೋಕಾನುಭವವುಳ್ಳವರು : ಲೋಕದ ಸಕಲ ಸಮಸ್ಯೆಗಳನ್ನು ಬಗೆಹರಿಸಬಲ್ಲ ಮಹಾ ಜ್ಞಾನಿ : ಲೌಕಿಕ ಪಾರಮಾರ್ಥಿಕಗಳೆರಡನ್ನೂ ಏಕಕಾಲದಲ್ಲಿ ಸಾಧಿಸ ಬಲ್ಲ ಕಾರಣಪುರುಷರವರು' ಎಂದು ಪ್ರಭುದೇವರು ಮನ ಸಾರೆ ಕೊಂಡಾಡುತ್ತಾರೆ; 'ಪೂರ್ಣವ್ಯಕ್ತಿಯೆಂದರೆ ಅವರೊ ಬ್ಬರೇ; ಅವರ ಸಿದ್ಧಿಗಳನ್ನು ತಿಳಿಯಬಲ್ಲವರು ಬೆರಗಾಗು ತ್ತಾರೆ' ಎನ್ನುತ್ತ ಅವರಿಗೆ ನಮಸ್ಕರಿಸುತ್ತಾರೆ.

ತಮ್ಮ ಕಲ್ಪನೆಯ ವೀರಶೈವಮತದ ವಿವರಗಳನ್ನು ಬಸವಣ್ಣನವರು ಪ್ರಭುದೇವರ ಮುಂದಾಳುತನದಲ್ಲಿ ನಡೆದ ಅನುಭವ ಮಂಟಪದಲ್ಲಿ ಚರ್ಚಿಸುತ್ತಾರೆ. ನಾಡಿನ ನಾನಾ ಭಾಗಗಳಿಂದ ಬಂದಿದ್ದ ಮೋಳಿಗೆ ಮಾರಯ್ಯ ಮಹದೇವಿಯಮ್ಮ ಮೊದಲಾದ ಶಿವಶರಣರು ತಮ್ಮ ಅಭಿಪ್ರಾಯಗಳನ್ನು ಸೂಚಿಸುತ್ತಾರೆ. ಚೆನ್ನಬಸವಣ್ಣ ಸೂಚಿಸಿದ ತಾತ್ತ್ವಿಕ ಸಂಗತಿಗಳು ಎಲ್ಲರಿಗೂ ಮೆಚ್ಚುಗೆ ಯಾಗುತ್ತವೆ. ವೀರಶೈವ ಮತ ಕೇವಲ ಕೆಲವರ ಹಿತಾಸಕ್ತಿಗಳನ್ನು ಕಾಪಾಡುವ ಒಂದು ಪಂಥವಾಗ ಬಾರದು ; ಅದು ದೀನದಲಿತರ ಶ್ರೀಸಾಮಾನ್ಯರ ಸರ್ವರ ಉದಯವನ್ನು ಸಾಧಿಸುವ ವಿಶ್ವಮತವಾಗಬೇಕು ; ಎಲ್ಲ ಭೇದಗಳನ್ನೂ ಅಸಮಾನತೆಗಳನ್ನೂ ಅದು ಹೋಗಲಾಡಿಸ ಬೇಕು ಎಂದು ಅಣ್ಣ ವಿಶದಪಡಿಸುತ್ತಾರೆ. 'ಅಂಥ ಮತದ ಪ್ರಚಾರ ಕಾರ್ಯದಲ್ಲಿ ಸಿದ್ಧರಾಮೇಶ್ವರರು ಬಸವಣ್ಣ ನವರಿಗೆ ಬೆಂಬಲವಾಗಿ ನಿಲ್ಲಬೇಕು. ಈ ಇಬ್ಬರು ಮಹಾಶರಣರು ಸಾಧಿಸುವ ಸಂಘಟನೆಯಿಂದ ಲೋಕಶಾಂತಿ ಸಾಧ್ಯ' ಎಂದು ಪ್ರಭುದೇವರು ನುಡಿಯುತ್ತಾರೆ.

ಹೀಗೆ ಮಾತುಕತೆಗಳಾಗುತ್ತಿರುವಾಗ, ಉಡುತಡಿಯ ಮಹಾದೇವಿಯಕ್ಕ ಶರಣ ಸಂದರ್ಶನಕ್ಕಾಗಿ ಕಲ್ಯಾಣಕ್ಕೆ ಬರುತ್ತಾಳೆ. ಬಸವಣ್ಣನಿದ್ದ ಕಲ್ಯಾಣವೇ ಕೈಲಾಸವೆಂದು ತಿಳಿದವಳು ಅವಳು

ಕಲ್ಯಾಣವೆಂಬುದನಾರಿಗೆಯು ಹೊಗಬಾರದು,
ಹೊಗಬಾರದು, ಅಸಾಧ್ಯವಯ್ಯ !
ಆಶೆಯಾಮಿಷವಳಿದಂಗಲ್ಲದೆ ಕಲ್ಯಾಣದತ್ತಲಡಿ
ಯಿಡಬಾರದು.
ಒಳಹೊರಗು ಶುದ್ಧವಾದಂಗಲ್ಲದೆ ಕಲ್ಯಾಣವ
ಹೊಗಬಾರದು.
ನೀನಾನೆಂಬುದ ಹರಿದಂಗಲ್ಲದೆ ಕಲ್ಯಾಣದ
ಒಳಗು ತಿಳಿಯದು.
ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯ
ಲಜ್ಜೆಯಳಿದೆನಾಗಿ ಕಲ್ಯಾಣವ ಕಂಡು
ನಮೋ ನಮೋ ಎನುತಿದ್ದೆನು.

ಎಂದು ಕೊಂಡಾಡುತ್ತಾಳೆ. ಅಂತೆಯೇ ಬಸವರಾಜ ದೇವರ ಮಹಿಮೆಯನ್ನು ಹೊಗಳುತ್ತ, ಮಹಾಮನೆ ಯನ್ನು ಹೊಕ್ಕು,'ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ' ಎಂದು ಸಾಷ್ಟಾಂಗ ನಮಸ್ಕಾರ ಮಾಡು ತ್ತಾಳೆ. 'ನನ್ನ ಹೆತ್ತತಾಯಿ ಮಹಾದೇವಿಯ ನಿಲವನ್ನು ನೋಡು' ಎಂದು ಬಸವಣ್ಣ ಪ್ರಭುದೇವರ ಕಡೆಗೆ ತಿರುಗಿ, ಅವಳ ಹಿರಿಮೆಯನ್ನು ಹೊಗಳುತ್ತಾರೆ. ಪ್ರಭುದೇವರಿಗೂ ಅಕ್ಕನಿಗೂ ಅಧ್ಯಾತ್ಮದ ಬಗ್ಗೆ ಚರ್ಚೆ ನಡೆಯುತ್ತದೆ. ಚನ್ನಮಲ್ಲಿಕಾರ್ಜುನನೇ ತನ್ನ ಪತಿ ಯೆಂಬುದನ್ನು ಅಕ್ಕ ಸಮರ್ಥಿಸಿಕೊಳ್ಳುತ್ತಾಳೆ. ಶ್ರೀಶೈಲದ ಕದಳಿವನದಲ್ಲಿ ತನ್ನ ಕೊನೆಯ ನೆಲೆಯೆಂಬು

ದನ್ನು ಅವಳು ಅಲ್ಲಮನಿಂದ ಅರಿಯುತ್ತಾಳೆ. ಬಸವಣ್ಣ ಮೊದಲಾಗಿ ಎಲ್ಲ ಶರಣ ಶರಣೆಯರ ಅಪ್ಪಣೆಯನ್ನು ಪಡೆದುಕೊಂಡು, ಅವಳು ಶ್ರೀಶೈಲದ ಹಾದಿ ಹಿಡಿಯು ತ್ತಾಳೆ.

ಒಂದು ದಿನ ಪ್ರಭು ಪರ್ಯಟನಕ್ಕಾಗಿ ತೆರಳುವ ಇಚ್ಛೆಯನ್ನು ಅನುಭವ ಮಂಟಪದಲ್ಲಿ ತಿಳಿಸುತ್ತಾರೆ. ಅವರ ಅಗಲಿಕೆಯಿಂದಾಗಿ ಶರಣರು ಚಿಂತೆಗೊಳಗಾಗುತ್ತಾರೆ. 'ಈ ಲೋಕದಲ್ಲಿರುವ ತನಕ ನಿಮ್ಮ ನಿಮ್ಮ ಕರ್ತವ್ಯಗಳನ್ನು ಮುಗಿಸಿ. ನಾನು ಮತ್ತೊಮ್ಮೆ ಬರುತ್ತೇನೆ' ಎಂದು ನುಡಿದು ಪ್ರಭು ಶರಣರಿಂದ ಕಳಿಸಿಕೊಳ್ಳುತ್ತಾರೆ. ಅವರ ಸಲಹೆಯ ಮೇರೆಗೆ ಸಿದ್ಧರಾಮ ಸೊನ್ನಲಿಗೆಗೆ ಹೋಗು ತ್ತಾನೆ.

ಲಿಂಗ ಧರಿಸಿದನಂತರವೂ ಅಂತ್ಯಜರು ತಮ್ಮ ಹಿಂದಿನ ಸಂಕೋಚವನ್ನು ಬಿಡುವುದಿಲ್ಲ. ಉತ್ತಮ ಕುಲ ದಿಂದ ಬಂದವರೊಡನೆ ಅವರು ಸಲುಗೆಯಿಂದ ವರ್ತಿಸುವು ದಿಲ್ಲ. ಅವರಿಗೆ ಏನೋ ಅಳುಕು, ಏನೋ ಶಂಕೆ. ಅವರಲ್ಲಿ ಧೈರ್ಯ ತುಂಬಲು ಬಸವಣ್ಣ ಬಹು ವಿಧವಾಗಿ ಪ್ರಯತ್ನಿಸುತ್ತಾರೆ. ತಮ್ಮನ್ನು ನೋಡಲು ಬಂದ ಅಂತ್ಯಜರನ್ನು ಅಪ್ಪಿಕೊಂಡು ಕೈಹಿಡಿದು ತಮ್ಮ ಬಳಿ ಕೂರಿಸಿಕೊಳ್ಳುತ್ತಾರೆ. ಪ್ರಸಾದ ತೆಗೆದುಕೊಳ್ಳುವಾಗಲೂ ಅವರು ತಮ್ಮ ಪಕ್ಕದಲ್ಲಿಯೇ ಕುಳಿತುಕೊಳ್ಳಬೇಕು. ಆಗೊಮ್ಮೆ ಈಗೊಮ್ಮೆ ಅಂತ್ಯಜರ ಮನೆಗಳಿಗೆ ಹೋಗಿ ಅವರ ಮನೆವಾರ್ತೆಯನ್ನು ವಿಚಾರಿಸಿಕೊಂಡು ಬರುತ್ತಾರೆ. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರೆಲ್ಲರನ್ನು ಬಸವಣ್ಣನವರು ಒಂದೆ ಮಟ್ಟದಲ್ಲಿ ಕಾಣುತ್ತಾರೆ.

ದೋಹರ ಕಕ್ಕಯ್ಯನೇ ತಮ್ಮ ಅಪ್ಪ, ಚೆನ್ನಯ್ಯನೇ ತಮ್ಮ ಮುತ್ತಯ್ಯ ಎಂದವರು ಸಾರುತ್ತಾರೆ.

ಹೀಗಿರುವಾಗ ಒಮ್ಮೆ ಕಂಬಳಿಯ ನಾಗಿದೇವನೆಂಬ ಹಿರಿಯ ಮಾಹೇಶ್ವರ ಅಣ್ಣನವರನ್ನು ಪ್ರಸಾದಕ್ಕಾಗಿ ಆಹ್ವಾನಿಸುತ್ತಾನೆ. ಅಣ್ಣ ಹಿಂದು ಮುಂದು ನೋಡದೆ ಅವರ ಮನೆಗೆ ಹೋಗಿ, ಅವರು ಕೊಟ್ಟದ್ದೇ ಪ್ರಸಾದವೆಂದು ಉಂಡು ತಣಿಯುತ್ತಾರೆ. ಅಂಥ ಸಮಯವನ್ನೆ ಕಾಯುತ್ತಿದ್ದವರಿಗೆ ಹಿಗ್ಗು. 'ನಿಮ್ಮ ಮಂತ್ರಿ ಹೊಲೆಯರ ಮನೆಗೆ ಹೋಗಿ, ಅವರೊಡನೆ ಉಂಡು ಬಂದಿದ್ದಾನೆ. ಕುಲಾಚಾರವೆಲ್ಲ ಹಾಳಾಯ್ತು. ವರ್ಣಸಂಕರವಾಯ್ತು. ಪಾಪ ಹೆಚ್ಚುತ್ತಿದೆ. ಇನ್ನು ನಾಡಿಗೆ ಉಳಿಗಾಲವಿಲ್ಲ. ನಿಮ್ಮ ಓಲಗದಲ್ಲಿ ಅವನಿರುವಾಗ ನಾವಿರಲಾರೆವು' ಎಂದು ಚಾಡಿಕೋರರು ಬಿಜ್ಜಳನ ಮುಂದೆ ಒದರುತ್ತಾರೆ. ದೊರೆಗೆ ಉಭಯಸಂಕಟ. ಬಸವಣ್ಣನವರ ಕ್ರಾಂತಿಕಾರಕವಾದ ಯೋಜನೆಗಳ ಬಗ್ಗೆ ಅವರಿಗೆ ಮೆಚ್ಚುಗೆಯಿದೆ. ಆದರೆ ಜನ ಬದಲಾವಣೆಗೆ ಸಿದ್ಧರಾಗಿಲ್ಲ. ಅವರು ದಂಗೆಯೆದ್ದರೆ ಕಷ್ಟ. ಸುತ್ತಮುತ್ತ ಹಗೆಗಳಿರುವಾಗ, ಅವನ ಮನಸ್ಸಿನಲ್ಲಿ ಸಮಸ್ಯೆಗಳು ತುಂಬಿಕೊಂಡಿರುವಾಗ, ಅವನ ಮುಂದಿದ್ದ ದಾರಿ ಒಂದೇ. ಬಸವಣ್ಣನವರನು ಕರೆಸಿ, ಅವರ ವರ್ತನೆಯ ಬಗ್ಗೆ ಅಸಮಾಧಾನವನ್ನು ತೋರಿಸುವುದು.

ಬಸವಣ್ಣ ಓಲಗಶಾಲೆ ಹೊಕ್ಕರೆ ಅದು ಹೊಲಸಾಗುತ್ತದೆಂದು ಚಾಡಿಕೋರರ ಅಬ್ಬರ. ಅದರ ಮುಂದಣ ಬಯಲಲ್ಲಿ ಸಭೆ ಸೇರುತ್ತದೆ. ಬಸವಣ್ಣ

ಬಂದು ಕುಳಿತುಕೊಳ್ಳುತ್ತಿದ್ದಂತೆ, 'ಬಸವಣ್ಣ, ನೀವು ಹುಟ್ಟಿದ್ದು ಉತ್ತಮ ಕುಲದಲ್ಲಿ. ಕುಲಾಚಾರವನ್ನು ಬಿಟ್ಟು, ಭಕ್ತಿಯ ಅಮಲಿನಲ್ಲಿ, ಹೊಲೆಯರ ಮನೆಯಲ್ಲಿ ಉಣ್ಣುವುದು ತರವೆ ?' ಎಂದು ಬಿಜ್ಜಳ ಪ್ರಶ್ನಿಸುತ್ತಾನೆ. 'ಜಗತ್ತಿನಲ್ಲಿ ಕುಲವೊಂದೆ, ಅದು ಮನುಜಕುಲ. ಜಾತಿ ಯೊಂದೆ, ಅದು ಮನುಷ್ಯ ಜಾತಿ. ಜಾತಿ ಭೇದವಾಗಲಿ, ಅಸ್ಪೃಶ್ಯತೆಯಾಗಲಿ ಮನುಷ್ಯ ಮಾಡಿಕೊಂಡದ್ದೇ ಹೊರತು, ಸಹಜವಾದದ್ದಲ್ಲ. ಹಾರುವನ ಮೈಯಲ್ಲಿ ಹಾಲು, ಹೊಲೆಯನ ಮೈಯಲ್ಲಿ ರಕ್ತ ಇದೆಯೇನು ? ಅವರಿಬ್ಬರೂ ಉಣ್ಣುವ ಅನ್ನ, ಕುಡಿಯುವ ನೀರು, ಸೇವಿಸುವ ಗಾಳಿ, ನಡೆಯುವ ದಾರಿ ಒಂದೆಯಲ್ಲವೆ ?' ಎಂದು ಬಸವಣ್ಣ ಪ್ರಶ್ನೆ ಎಸೆಯುತ್ತಾರೆ. 'ವರ್ಣಾಶ್ರಮ ಧರ್ಮ ನಮ್ಮ ಸಮಾಜದ ತಳಹದಿಯಲ್ಲವೆ ? ಅದು ಸಡಿಲವಾದಂದು ನಾಡಿಗೆ ನಾಡೇ ಅಭದ್ರವಾಗುವುದಿಲ್ಲವೆ? 'ಜನರ ಐಕ್ಯವೆ ನಾಡಿನ ಭದ್ರತೆಗೆ ಮೂಲ. ಜಾತೀಯತೆ ಜನರನ್ನು ಗುಂಪುಗುಂಪಾಗಿ ಒಡೆದಿದೆ. ಒಡಕಿನಿಂದ ದೇಶಕ್ಕೆ ಹಾನಿ. ಅಂತೆಯೇ ಅಸ್ಪೃಶ್ಯತೆ ಸಮಾಜಕ್ಕೊಂದು ಕಳಂಕ. ಈ ಒಡಕು ಕಳಂಕಗಳನ್ನು ನಿವಾರಿಸುವುದೇ ನನ್ನ ಬಾಳಿನ ಗುರಿ. 'ನಿಮ್ಮ ಗುರಿ ನಿಮಗೆ ಸರಿಯೆಂದು ತೋರ ಬಹುದು. ಆದರೆ ಅದಕ್ಕೆ ಕಾಲ ಕೂಡಿಬಂದಿಲ್ಲ. ಅದಕ್ಕೆ ಜನರ ಅಸಹನೆಯೇ ನಿದರ್ಶನ. ಜತೆಗೆ ನೀವು ಅನುಸರಿಸು ತ್ತಿರುವ ಮಾರ್ಗ ಸರಿಯಲ್ಲ.' 'ಗುರಿ ಮಾರ್ಗ ಒಳ್ಳೆಯ ದಾದರೆ ಕಾಲ ಕೂಡಿಬಂದಂತೆಯೇ ಸರಿ. ಲೇಸನ್ನು ಮಾಡುವಾಗ ನಾಳೆ ನಾಡಿದ್ದು ಎನ್ನಲಾಗದು. ಲಿಂಗ ದೀಕ್ಷೆಯ ಮೂಲಕ ಎಲ್ಲ ಭೇದಗಳನ್ನು ತೊಡೆಯಬಹು

ದೆಂದು ನಾನು ನಂಬಿದ್ದೇನೆ. ಲಿಂಗಧಾರಣೆಯ ನಂತರ ಹೊಲೆ ಸೂತಕಗಳೆಲ್ಲ ಕಳಚಿಹೋಗುತ್ತವೆ. ಜನರ ಅಸಹನೆ ನಿದರ್ಶನವೆಂದಿರಿ, ಯಾರು ಆ ಜನ ? ಆಸ್ಥಾನ ದಲ್ಲಿರುವ ನಾಲ್ಕೈದು ಮಂದಿಯ ಮಾತು ಇಡೀ ನಾಡಿನ ಜನತೆಯ ಮಾತಾಗುವುದಿಲ್ಲ.' 'ಬಸವಣ್ಣ, ಈ ವಾದ ವಿವಾದಗಳಿಂದ ಪ್ರಯೋಜನವಿಲ್ಲ. ದೇಶಕ್ಕೆ ಯಾವುದು ಸರಿಯೆಂಬುದು ಆಳುವ ದೊರೆಗೆ ಗೊತ್ತು. ಇನ್ನು ಮುಂದಾದರೂ ಎಚ್ಚರಿಕೆಯಿಂದಿರಿ' ಎಂದು ನುಡಿದು ದೊರೆ ಓಲಗವನ್ನು ಮುಗಿಸುತ್ತಾನೆ.

ಅಂದಿನ ಓಲಗದಲ್ಲಿ ತಮಗೆ ಜಯ ದೊರೆತಂತೆ ಕೊಂಡೆಯರು ಹಿಗ್ಗುತ್ತ, ಬಸವಣ್ಣನವರನ್ನು ಅಣಕಿ ಸುತ್ತ ಹೋಗುತ್ತಾರೆ. ದೊರೆಯ ಪರಿಯನ್ನು ಕಂಡು, ತಮ್ಮ ಗುರಿಯನ್ನು ನೆನೆದು, ಚಿಂತೆಯಿಂದ ಬಸವಣ್ಣ ಮಹಾ ಮನೆಯನ್ನು ಸೇರುತ್ತಾರೆ. ಓಲಗದ ಸುದ್ದಿ ಕೇಳುವ ಸಲುವಾಗಿ ಶರಣರು ಅವರನ್ನು ಸುತ್ತುವರಿಯು ತ್ತಾರೆ. ಬಸವಣ್ಣ ನಡೆದದ್ದನ್ನೆಲ್ಲ ವಿವರಿಸಿ, ತುಸು ಹೊತ್ತು ಮೌನ ತಾಳುತ್ತಾರೆ. ಅನಂತರ ನಿಟ್ಟುಸಿರು ಬಿಟ್ಟು 'ನಾಳೆ ಬಪ್ಪುದು ನಮಗಿಂದೆ ಬರಲಿ; ಇಂದು ಬಪ್ಪುದು ನಮಗೀಗಲೆ ಬರಲಿ; ಇದಕಾರಂಜುವರು' ಎಂದು ಸಮಾಧಾನ ತಂದುಕೊಳ್ಳುತ್ತಾರೆ. ಕಕ್ಕಯ್ಯ ಮಧುವರಸ ಹರಳಯ್ಯ ಮೊದಲಾದವರ ಮನಸ್ಸಿನ ದುಗುಡ ಮುಖದಲ್ಲಿ ಸೂಸುತ್ತದೆ. ಕೊಂಡೆಯರನ್ನು ಕಡಿಖಂಡ ಮಾಡದಿದ್ದರೆ ಧರ್ಮದ ಉದ್ಧಾರ ಸಾಧ್ಯ ವಾಗದು ಎಂದು ಮಡಿವಾಳ ಮಾಚಯ್ಯ ಬೊಬ್ಬಿರಿಯು ತ್ತಾನೆ. 'ದಯೆಯೇ ಧರ್ಮದ ಮೂಲವಯ್ಯ' ಎಂಬ

ಅಣ್ಣನ ವಚನವನ್ನು ಚೆನ್ನಬಸವಣ್ಣ ಅವನ ಗಮನಕ್ಕೆ ತಂದು, ಸಮಾಧಾನ ಪಡಿಸುತ್ತಾನೆ. ಮುಂದಾಗುವ್ರ ದೆಲ್ಲ ಕಣ್ಣಿಗೆ ಕಟ್ಟಿದಂತಾಗಿ ಬಸವಣ್ಣ 'ಅರುಮುನಿದು ನಮ್ಮನೇನು ಮಾಡುವರು ?' : 'ಕರ್ತನಟ್ಟಿದಡೆ ಮರ್ತ್ಯ ದಲ್ಲಿ ಮಹಾ ಮನೆಯ ಕಟ್ಟಿದೆ; 'ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ ಕೂಡಲಸಂಗನ ನಿರೂಪಕ್ಕೆ ಮಹಾ ಪ್ರಸಾದವೆಂದೆನು' ; 'ಮರಣವೆ ಮಹಾನವಮಿ' 'ಆನೀ ಬಿಜ್ಜಳಂಗಂಜುವೆನೆ' ಎಂದು ತಮ್ಮ ನಿರ್ಧಾರವನ್ನು ಹೊರಗೆಡಹುತ್ತಾರೆ. 'ಬಸವಣ್ಣನವರ ಪಾದಕ್ಕೆ ಉಘೇ' ಎಂದು ಶರಣರೆಲ್ಲ ಜಯಕಾರ ಹಾಕುತ್ತಾರೆ.

ಒಳ್ಳೆಯ ಗುರಿ ಸಾಧಿಸುವಲ್ಲಿ ಛಲ ಬೇಕೆಂಬುದು ಬಸವಣ್ಣನವರ ಮತ. ಓಲಗದಲ್ಲಿ ನಡೆದದ್ದನ್ನೆಲ್ಲ ಮರೆತು, ಎಂದಿನಂತೆ ತಮ್ಮ ಕರ್ತವ್ಯದಲ್ಲಿ ನಿರತರಾಗು ತ್ತಾರೆ. ಸ್ತುತಿನಿಂದೆಗಳಲ್ಲಿ ಸಮಚಿತ್ತತೆಯನ್ನು ಕಳೆದು ಕೊಳ್ಳದೆ ತಮ್ಮ ಗುರಿಯ ಕಡೆಗೆ ಸಾಗುತ್ತಾರೆ. ಅಲ್ಲಮ ಪ್ರಭುವಿನ ಆಗಮನಕ್ಕಾಗಿ ಹಾತೊರೆಯುತ್ತಾರೆ. ಅಷ್ಟ ರಲ್ಲಿ ದೇಶಾಟನೆ ಮುಗಿಸಿ, ಹಿಂದೆ ಕೊಟ್ಟಿದ್ದ ವಚನದಂತೆ ಪ್ರಭುಗಳು ಕಲ್ಯಾಣಕ್ಕೆ ಆಗಮಿಸುತ್ತಾರೆ. ಅವರು ಹಿಂದಿನಂತಲ್ಲದೆ, ವಿಕಾರ ರೂಪಿನಲ್ಲಿ ಬರುತ್ತಾರೆ. ಅವರ ತಲೆ ಕೆದರಿದೆ, ಕಿವಿ ಹರಿದಿದೆ, ಹಣೆಯಲ್ಲಿ ಬುಗುಟಿದೆ. ಮೈಯೆಲ್ಲ ರಕ್ತ. ಪಕ್ಕೆಗಳು ಹತ್ತಿಕೊಂಡಿವೆ. ಹೆಜ್ಜೆ ತಪ್ಪುತ್ತದೆ. ಬಾಹ್ಯ ಪ್ರಜ್ಞೆ ಇಲ್ಲ. ಅಂಗೈಯ ಲಿಂಗದಲ್ಲಿ ದೃಷ್ಟಿ ನಾಟಿದೆ. ಆ ಭಯಂಕರ ರೂಪನ್ನು ಕಂಡು ಬಸವಾದಿ ಪ್ರಮಥರು ಚಕಿತರಾಗುತ್ತಾರೆ; ಒಬ್ಬರ ನ್ನೊಬ್ಬರು ನೋಡಿಕೊಳ್ಳುತ್ತಾರೆ. 'ಅವರಾರೆಂಬುನು

ನಿಮಗೆ ಗೊತ್ತಿದೆ ; ನೀವಾರೆಂಬುದು ಅವರಿಗೆ ಗೊತ್ತಿದೆ. ನಿಮ್ಮಿಬ್ಬರ ಮಹಿಮೆಯನು ನಾನೇನು ಎಲ್ಲ' ಎಂದು ಚೆನ್ನಬಸವಣ್ಣ ಮೆಲ್ಲಗೆ ಮಾತು ತೆಗೆಯುತ್ತಾನೆ. ಬಂದವರು ಪ್ರಭುವಿರಬಹುದೆ ಎಂದು ಬಸವಣ್ಣ ಶಂಕಿಸುತ್ತಾರೆ. 'ನಮ್ಮ ಪರೀಕ್ಷೆಗಾಗಿ ಅವರು ವಿಪರೀತ ವೇಷದಲ್ಲಿ ಬಂದಿದ್ದಾರೆ. ನನಗಂತು ಅನುಮಾನವಿಲ್ಲ' ಎನ್ನುತ್ತಾರೆ, ಚೆನ್ನ ಬಸವಣ್ಣ. 'ಅನುಭವ ಮಂಟಪದ ಅಗ್ರಭಾಗದಲ್ಲಿ ಶೂನ್ಯ ಸಿಂಹಾಸನವಿದೆ. ಅದು ಹನ್ನೆರಡು ವರ್ಷದಿಂದ ಅವರಿಗಾಗಿಯೇ ಮೀಸಲಾಗಿದೆ ಬಂದವರು ಪ್ರಭುವೇ ಆದ ಪಕ್ಷದಲ್ಲಿ ಅದರ ಮೇಲೆ ಕೂರಲಿ' ಎಂದು ಬಸವಣ್ಣ ನುಡಿಯುತ್ತಾರೆ. ಬಾಗಿಲಿಗೆ ಬಂದ ಪ್ರಭುಗಳು ನೇರವಾಗಿ ಶೂನ್ಯ ಪೀಠವನ್ನು ಸಮೀಪಿಸಿ, ಅದರ ಮೇಲೆ ಮಂಡಿಸುತ್ತಾರೆ. ಬಸವಣ್ಣನವರಿಗೆ ಪರಮಾನಂದವಾಗಿ, ಹಾಡಿ ಬೇಡಿ, ಕುಣಿದು ಕುಪ್ಪಳಿಸಿ, ಭಜಿಸಿ ಪೂಜಿಸಿ, ತಮ್ಮ ಆನಂದವನ್ನು ಹೊರಸೂಸುತ್ತಾರೆ. ಅಸಹ್ಯ ವೇಷದ ಅನಾಮಧೇಯನನ್ನು ಸತ್ಕರಿಸುತ್ತ, ತಮ್ಮನ್ನು ಅಸಡ್ಡೆ ಮಾಡಿದರೆಂದು, ಜಂಗಮ ಸಮೂಹ ಮಂಟಪದಿಂದ ಹೊರಗೆ ಹೋಗುತ್ತದೆ.

ಗುರು ಮುನಿದಡೆ ಒಂದು ದಿನ ತಾಳುವೆ,
ಲಿಂಗ ಮುನಿದಡೆ ದಿನವರೆ ತಾಳುವೆ,
ಜಂಗಮ ಮುನಿದಡೆ ಕ್ಷಣ ಮಾತ್ರ ತಾಳಿದೆನಾದೊಡೆ,
ಎನ್ನ ಪ್ರಾಣದ ಹೋಕು ಕೂಡಲಸಂಗಮದೇವಾ

ಎಂದು ಬಸವಣ್ಣ ಪರಿತಪಿಸುತ್ತಾರೆ, ವಿಲಪಿಸುತ್ತಾರೆ. ಸಮಸ್ಯೆಯೊದಗಿದಾಗಲೆಲ್ಲ ಅವರು ಸೋದರಳಿಯನ ಕಡೆಗೆ ನೋಡುತ್ತಾರೆ. 'ಪ್ರಭುದೇವರಿಗೆ ಆತ್ಮಾರ್ಪಣೆ

ಮಾಡಿಕೊಳ್ಳುವುದೊಂದೇ ಮಾರ್ಗ' ಎಂದು ಚೆನ್ನಬಸವಣ್ಣ ಸಲಹೆ ನೀಡುತ್ತಾನೆ.

'ನೀವೇ ನನಗೆ ಗತಿ ಮತಿ. ನಿಮ್ಮ ಕರುಣೆಯಿಂದಾಗಿ ನಾನು ಧನ್ಯ. ನಿಮ್ಮ ಶರಣರು ನನ್ನ ಮೇಲೆ ಮುನಿಸಿಕೊಂಡದ್ದರಿಂದ ನಾನು ಕಂಗೆಟ್ಟಿದ್ದೇನೆ. ನೀವೇ ನನಗೆ ಮುಂದಿನ ದಾರಿ ತೋರಿಸಿ' ಎಂದು ಬಸವಣ್ಣ ಪ್ರಭುದೇವರನ್ನು ಪ್ರಾರ್ಥಿಸುತ್ತಾರೆ. 'ಅವರನ್ನು ಸಂತೈಸಿ ಕರೆದು ತಾ' ಎಂದು ಪ್ರಭು ನುಡಿಯುತ್ತಾರೆ. ಬಸವಣ್ಣನವರು ಶಿವಗಣಗಳು ಇದ್ದೆಡೆಗೆ ಹೋಗಿ 'ನನ್ನ ತಪ್ಪನ್ನು ಮನ್ನಿಸಿ. ನಾನಿಮ್ಮ ಕರುಣೆಯ ಕಂದ' ಎಂದು ಸೆರಗೊಡ್ಡಿ ಬೇಡಿಕೊಳುತ್ತಾರೆ. ಶರಣರು ಹಿಂದಿರುಗಿ ಬಸವಣ್ಣನ ಆತಿಥ್ಯವನ್ನು ಸ್ವೀಕರಿಸುತ್ತಾರೆ. ಬಸವಣ್ಣನ ಭಕ್ತಿ ನಿಷ್ಠೆಯನ್ನು ಮೆಚ್ಚಿದ ಪ್ರಭು 'ಎತ್ತೆತ್ತ ನೋಡಿದರೆ ಬಸವನೆಂಬ ಬಳ್ಳಿ. ಆ ಬಳ್ಳಿಯ ಹಿಡಿದೆತ್ತಿದರೆ ಲಿಂಗವೆಂಬ ಗೊಂಚಲು. ಆ ಲಿಂಗವೆಂಬ ಗೊಂಚಲು ಹಿಡಿದೆತ್ತಿದರೆ ಭಕ್ತಿ ರಸಮಯವಾಯಿತ್ತು' ಎಂದು ಕೊಂಡಾಡುತ್ತಾರೆ. ಆ ಕೊಂಡಾಟದಿಂದ ಶರಣರಿಗಾದ ಆನಂದ ಅಷ್ಟಿಷ್ಟಲ್ಲ. ಲೋಕದ ನಿಜಸ್ಥಿತಿಯನ್ನರಿತ ಪ್ರಭುದೇವರು ಆದಿಶರಣರ ಕಾಲ ಮುಗಿಯಿತೆಂದು ಬಗೆದು, ನೂತನ ಧರ್ಮಕ್ಕೆ, ಸಮಗ್ರ ಕ್ರಾಂತಿಗೆ ಬಸವಣ್ಣ ಹಾಕಿದ ತಳಹದಿ ಸುಭದ್ರವಾಗಿರಲೆಂದು ಹಾರೈಸಿ, ಸಕಲ ಶರಣರಿಂದ ಬೀಳ್ಕೊಂಡು, ಕದಳಿವನದ ಕಡೆಗೆ ತೆರಳುತ್ತಾರೆ.

ಈ ಕಡೆ ಕಲ್ಯಾಣದ ಮಹಾಮನೆ ಮತ್ತು ಅನುಭವ ಮಂಟಪಗಳಲ್ಲಿ ಹಿಂದೆಂದೂ ಭಾರತೀಯ ಇತಿಹಾಸ ಕಾಣದ ಘಟನೆಗಳು ತೀವ್ರವಾಗಿ ಜರುಗುತ್ತವೆ. ಒಂದು ಕಡೆ

ಸಾಮಾನ್ಯರಲ್ಲಿಯೂ ಆಧ್ಯಾತ್ಮಿಕ ಜಾಗೃತಿ, ಹೊಸ ಮತದ ಹುಟ್ಟಿಗೆ ಭದ್ರ ತಳಹದಿಯ ಸ್ಥಾಪನೆ, ಮತ್ತೊಂದು ಕಡೆ ಜನವಾಣಿಯನ್ನು ದೇವವಾಣಿಯ ಮಟ್ಟಕ್ಕೇರಿಸಿ, ಸಾಹಿತ್ಯ ವಾಹಿನಿಯ ತಿರುವಿಗೆ ಕಾರಣವಾದ ಮಹಾಕ್ರಾಂತಿ, ಸರ್ವೋದಯ ಸಂಸ್ಕೃತಿಯನ್ನು ಪೋಷಿಸಿದ ಸಜೀವ ಸಾಹಿತ್ಯದ ಉಗಮ ; ಮಗುದೊಂದು ಕಡೆ ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಇಪ್ಪತ್ತನೆಯ ಶತಮಾನವೂ ಕನಸು ಕಾಣಲಾರದ ಕಾಯಕ ದಾಸೋಹ ತತ್ತ್ವಗಳ ಪ್ರಯೋಗ ; ಮೇಲಾಗಿ ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ಪ್ರಾಣವನ್ನೇ ಪಣವೊಡ್ಡಿ ನಡೆಸಿದ ಅಂತರ್ಜಾತೀಯ ವಿವಾಹ. ರೋಮಾಂಚನ ಕಾರಿಯಾದ ದಿವ್ಯ ಭವ್ಯ ಮಹದ್ಘಟನೆಯದು—ಈ ಎಲ್ಲ ಘಟನೆಗಳ ಪ್ರೇರಕ ಹಾಗೂ ಕೇಂದ್ರ ಶಕ್ತಿಯಾಗಿದ್ದವರು ರಾಜರ್ಷಿಯೆಂತಿದ್ದ ಬಸವೇಶ್ವರರು.

ಅಸ್ಪೃಶ್ಯತೆಯ ಬೇರನ್ನೇ ಸಂಪೂರ್ಣವಾಗಿ ಕಿತ್ತೊಗೆಯಲು ಪ್ರಯತ್ನಿಸಿದ ಜಗತ್ತಿನ ಸಮಾಜ ಸುಧಾರಕರಲ್ಲಿ ಬಸವಣ್ಣನವರಿಗೆ ಅಗ್ರಸ್ಥಾನ. ವಿಪ್ರ ಮಧುವರಸ ಅಂತ್ಯಜ ಹರಳಯ್ಯ ಇಬ್ಬರೂ ಹತ್ತಿರದ ಗೆಳೆಯರು. ಮಹಾಮನೆಯಲ್ಲಿರಲಿ ಅನುಭವ ಮಂಟಪದಲ್ಲಿರಲಿ, ಅವರಿಬ್ಬರನ್ನು ಒಟ್ಟಿಗೆ ಕಾಣಬಹುದಿತ್ತು. ಅದೇ ರೀತಿ ಮಧುವರಸನ ಮಗಳಿಗೂ ಹರಳಯ್ಯನ ಮಗನಿಗೂ ಕಂದು ಕುಂದಿಲ್ಲದ ಕೆಳೆತನ. ಅಸ್ಪೃಶ್ಯತಾ ನಿರ್ಮೂಲನದ ಯಜ್ಞ ಕಾರ್ಯದಲ್ಲಿ ಬಲಿಪಶುಗಳಾಗಲೆಂದೇ ಅವರನ್ನು ಸೃಷ್ಟಿಸಿದಂತಿದೆ. ಬಸವಣ್ಣನವರ ಆಶೀರ್ವಾದದ ರಕ್ಷೆಯಲ್ಲಿ, ಶರಣರ ಸಮ್ಮುಖದಲ್ಲಿ

ಅವರ ಮದುವೆ ನಡೆಯುತ್ತದೆ. ಬಸವಣ್ಣನವರ ಜೀವನದ ದುರಂತತೆಗೆ ಕಾರಣವಾದ ಆ ಘಟನೆ ಭರತ ಖಂಡದ ಸಾಂಸ್ಕೃತಿಕ ಇತಿಹಾಸದಲ್ಲೊಂದು ಮಹಾ ಕಳಂಕವಾಗಿ ಪರಿಣಮಿಸುತ್ತದೆ.

ಮಾತ್ಸರ್ಯದ ಮೊಟ್ಟೆಗಳಂತಿದ್ದ, ಸೇಡಿನ ಹುತ್ತ ದಂತಿದ್ದ ಚಾಡಿಕೋರರು ಅಂಥದೊಂದು ಸಂದರ್ಭಕ್ಕಾಗಿ ಕಾಯುತ್ತಿದ್ದರು. ಒಡನೆಯೇ ಆ ಸುದ್ದಿಯನ್ನು ಬಿಜ್ಜಳನ ಕಿವಿಗೆ ಮುಟ್ಟಿಸುತ್ತಾರೆ. ಊರೂರು ಕೇರಿಕೇರಿಗಳಲ್ಲಿ ಆ ಸುದ್ದಿ ಕಾಳ್ಗಿಚ್ಚಿನಂತೆ ಹರಡುತ್ತದೆ. ರಾಜನನ್ನು ಕಂಡರೆ ಆಗದಿದ್ದ ಸಾಮಂತರೆಲ್ಲ ಉರಿಯುವ ಬೆಂಕಿಗೆ ತುಪ್ಪ ಹುಯ್ಯುತ್ತಾರೆ. ರಾಜನ ಮಕ್ಕಳೇ ತಂದೆಯ ಮೇಲೆ ತಿರುಗಿ ಬೀಳುತ್ತಾರೆ. ಅತ್ಯಂತ ಸಾಮಾನ್ಯವಾದ ಕೌಟುಂಬಿಕ ಘಟನೆ ಉಗ್ರ ರಾಜಕೀಯ ಘಟನೆಯಾಗಿ ತಿರುಗುತ್ತದೆ. ದುರ್ಬಲನಾದ ದೊರೆ ತನ್ನ ಸ್ಥಾನವನ್ನು ಳಿಸಿಕೊಳ್ಳಲು ಚಾಡಿಕೋರರ ಮಾತಿಗೆ ಮಣಿಯುತ್ತಾನೆ. ಮಧುವರಸ ಹರಳಯ್ಯಗಳ ಕಣ್ಣು ಕೀಳಿಸುತ್ತಾನೆ. ಅಷ್ಟೇ ಸಾಲದೆಂದು ಎಳಹೂಟೆ ಎಳೆಸಿ ಕೊಲ್ಲಿಸುತ್ತಾನೆ. ರಾಜಧಾನಿಯಲ್ಲಿ ಅಲ್ಲೋಲ ಕಲ್ಲೋಲವಾಗುತ್ತದೆ. ದೂರದ ಊರುಗಳಿಂದ ಪುಂಡರು ಸಾಮಂತರು ಬಂದು ಜಮಾಯಿಸುತ್ತಾರೆ.

ದಂಗೆಯ ಸೂಚನೆಗಳನ್ನು ಕಂಡ ಬಸವಣ್ಣನವರು ಶರಣರಿಗೆ ವಿವೇಕ ಹೇಳಿ, ಸಂಗಮೇಶ್ವರ ಕ್ಷೇತ್ರದ ಹಾದಿ ಹಿಡಿಯುತ್ತಾರೆ. ಕೊಲೆ ರಕ್ತಪಾತಗಳನ್ನು ತಪ್ಪಿಸಬೇಕೆಂಬುದೇ ಅವರ ನಿರ್ಗಮನದ ಗುರಿ. ಶರಣರನ್ನು ಮಾತ್ರವಲ್ಲ, ಅವರ ಸಂದೇಶವಿದ್ದ ವಚನಗಳನ್ನು ಸುಟ್ಟು

ಹಾಕಬೇಕೆಂಬುದು ಕೊಂಡಯರ ಉದ್ದೇಶ. ವಚನಗಳ ಕಟ್ಟುಗಳನ್ನು ಭದ್ರಪಡಿಸಿಕೊಂಡು ಕೆಲವು ಶರಣರು ಚೆನ್ನ ಬಸವಣ್ಣನವರ ಹಿಂದೆ ಉಳಿವಿಯ ಕಡೆಗೆ ಓಡುತ್ತಾರೆ. ಹಲವರು ಚೆಲ್ಲಾಪಿಲ್ಲಿಯಾಗಿ ಮನ ಬಂದ ಕಡೆಗೆ ಹರಿಯುತ್ತಾರೆ. ಜಗದೇವ ಮಲ್ಲಿ ಬೊಮ್ಮಣ್ಣ ಮೊದಲಾದ ಗಣಾಚಾರಿಗಳು ಮಹಾಮನೆ ಅನುಭವಮಂಟಪಗಳನ್ನುಳಿಸಲು ಪ್ರಾಣವಿರುವ ತನಕ ಹೋರಾಡುತ್ತಾರೆ. ಸೈನಿಕರೊಡನೆ ಪುಂಡರೂ ಸೇರಿಕೊಂಡು ಶರಣರನ್ನು ಅಟ್ಟಾಡುತ್ತಾರೆ; ಸಿಕ್ಕಿದ್ದನ್ನೆಲ್ಲ ಕೊಳ್ಳೆ ಹೊಡೆಯುತ್ತಾರೆ; ಸಿಕ್ಕಿದವರನ್ನೆಲ್ಲ ಕೊಲ್ಲುತ್ತಾರೆ. ಆ ಗೊಂದಲದಲ್ಲಿ ಬಿಜ್ಜಳನೂ ಕೊಲೆಯಾಗುತ್ತಾನೆ.

ಕಲ್ಯಾಣಕ್ರಾಂತಿ ಭಾರತೀಯ ಇತಿಹಾಸದಲ್ಲಿಯೇ ಮರೆಯಲಾಗದ ಮಹಾದುರಂತ ಕಥೆಯಾಗುತ್ತದೆ. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಅದು ನಡೆದು ಹೋಗುತ್ತದೆ ಅದು ಬರಿಯ ರಾಜಕೀಯ ದುರಂತವಲ್ಲ; ಅದೊಂದು ಧ್ಯೇಯ ದುರಂತ, ಧಾರ್ಮಿಕ ದುರಂತ, ಸಾಮಾಜಿಕ ದುರಂತ. ಕೇವಲ ಹತ್ತು - ಹನ್ನೆರಡು ವರ್ಷಗಳಲ್ಲಿ ಮುಗಿಲು ಮುಟ್ಟಿದ ಕಲ್ಯಾಣ ಕೀರ್ತಿಯ ಕಳಶ ಇದ್ದಕ್ಕಿದ್ದಂತೆ ಹುಡಿಗೂಡುತ್ತದೆ. ಅದರ ಜತೆಯಲ್ಲಿ ಕರ್ನಾಟಕದ ಕೀರ್ತಿಯೂ ಮಸುಳುತ್ತದೆ. ಬಸವಣ್ಣನವರ ಕಲ್ಪನೆಯ ಸಮಗ್ರಕ್ರಾಂತಿ ಸಂದುತ್ತದೆ. ತಾವೇ ಹೊತ್ತಿಸಿದ ಕ್ರಾಂತಿಯ ಬೇಗೆಗೆ ಅವರೇ ತುತ್ತಾಗುತ್ತಾರೆ ಹುತಾತ್ಮರಾಗುತ್ತಾರೆ, ಅಂದಿನ ಯೇಸುವಿನಂತೆ, ಇಂದಿನ ಮಹಾತ್ಮ ಗಾಂಧೀಜಿಯಂತೆ.

ಅಕ್ಕ ನಾಗಾಂಬೆ ಗಂಗಾಂಬಿಕೆಯರು ಶರಣರ ಬೆಂಗಾವಲಿನಲ್ಲಿ ಉಳಿವಿ ಸೇರುತ್ತಾರೆ. ನೀಲಾಂಬಿಕೆ ಬೇರೊಂದು ಶರಣರ ಗುಂಪಿನೊಡನೆ ಊರು ಬಿಡುತ್ತಾರೆ. ಅವರನ್ನು ಹುಡುಕಿ ಕರೆತರುವಂತೆ ಬಸವಣ್ಣನವರು ತಮ್ಮ ಆಪ್ತ ಮಿತ್ರ ಅಪ್ಪಣ್ಣನನ್ನು ಕಳಿಸುತ್ತಾರೆ. ಅಪ್ಪಣ್ಣನ ಪತ್ನಿ ಲಿಂಗಮ್ಮನೂ ನೀಲಾಂಬಿಕೆಯ ಜತೆಯಲ್ಲಿರುತ್ತಾರೆ. ಬಸವಣ್ಣನವರ ಲೌಕಿಕ ಹಾಗೂ ಧಾರ್ಮಿಕ ಕಾರ್ಯಗಳಿಗಾಗಿ ತಮ್ಮನ್ನು ತಾವೇ ನಿವೇದಿಸಿಕೊಂಡವರು ನೀಲಾಂಬಿಕೆ. ಶಿವಶರಣರ ಯೋಗಕ್ಷೇಮಕ್ಕಾಗಿ ಮಹಾಮನೆಯಲ್ಲಿ ಸದ್ದಿಲ್ಲದೆ ದುಡಿದವರು. ಜತೆಗೆ ಅಧ್ಯಾತ್ಮ ಯಾತ್ರೆಯಲ್ಲಿ ಉತ್ತುಂಗ ತುದಿ ಮುಟ್ಟಿದವರು. ಅಪ್ಪಣ್ಣ ಬಸವಣ್ಣನವರ ಸಂದೇಶ ಮುಟ್ಟಿಸಿದಾಗ 'ನಾವಲ್ಲಿದ್ದರೇನು ? ಇಲ್ಲಿದ್ದರೇನು ? ಬಸವನಲ್ಲಿ ನಮಗೆ ತೆರಹಿಲ್ಲವಯ್ಯಾ ಅಪ್ಪಣ್ಣಾ. ಅಲ್ಲಿರುವ ಸಂಗಯ್ಯ ಇಲ್ಲಿಲ್ಲವೆ ? ನಮಗಾರ ಸಂಗವಿಲ್ಲ. ನಾನಾರ ಸೇರುವೆನೆಂದು ಚಿಂತಿಸಲೇತಕ್ಕಯ್ಯ? ಬಸವನ ಕಾಯುವಳಿದು ನಿರಾಕುಳವಾಗಲು ಆನು ಬಸವಾ ಬಸವಾ ಬಸವಾ ಎಂದು ಬಯಲಾದೆನಯ್ಯ 'ಸಂಗಯ್ಯ' ಎಂದು ನೀಲಮ್ಮ ಉತ್ತರ ನೀಡುತ್ತಾರೆ. ಆದರೆ ಅವರು ಅಪ್ಪಣ್ಣನ ಒತ್ತಾಯಕ್ಕೆ ಮಣಿದು, ಅವನನ್ನು ಹಿಂಬಾಲಿಸುತ್ತಾರೆ. ರಾಜಧಾನಿಯದಂಗೆ ಊರೂರುಗಳಿಗೂ ಹರಡಿದಾಗ ಅವರು ಸಂಗಮಕ್ಷೇತ್ರ ಸೇರುವುದು ಕಷ್ಟವಾಗುತ್ತದೆ. ತಂಗಡಿಗಿ ಸೇರುವಷ್ಟರಲ್ಲಿ ಬಸವಣ್ಣ ನಿರ್ವಾಯಲಾದ ಸುದ್ದಿ ಅವರನ್ನು ಕಂಗೆಡಿಸುತ್ತದೆ. ಅವರು ಮುಂದೆ ಹೆಜ್ಜೆ ಇಡಲಾರದೆ, ಅಲ್ಲಿಯೇ ತಂಗುತ್ತಾರೆ ; ಶಿವಧ್ಯಾನದಲ್ಲಿ ಹೊರಗಿನ ಪ್ರಪಂಚವನ್ನು ಮರೆಯುತ್ತಾರೆ ; ಶಿವನಲ್ಲಿ ಐಕ್ಯವಾಗುತ್ತಾರೆ.

ಬಸವಣ್ಣನವರ ಸಾವು ಇಂದಿಗೂ ನಿಗೂಢವಾಗಿದೆ. ಅದು ಹೇಗೆಯೇ ಸಂಭವಿಸಿರಲಿ, ಅವರು ಹುತಾತ್ಮರಾದದ್ದಂತೂ ನಿಜ. ಕೆಲವು ಕಾಲವಾದರೂ ಕಲ್ಯಾಣಕ್ಕೆ ಕೈಲಾಸವನ್ನು ತರುತ್ತಾರೆ: ನಿರ್ಜಾತೀಯ ಭೇದರಹಿತ ಪ್ರಜಾತಂತ್ರಾತ್ಮಕ ಸಮಾಜ ಎಂತಿರಬಹುದೆಂಬುದನ್ನು ಪ್ರಯೋಗದ ಮೂಲಕ ತೋರಿಸಿಕೊಡುತ್ತಾರೆ. ಸುಭದ್ರವಾದ ಆರ್ಥಿಕ ವ್ಯವಸ್ಥೆಯನ್ನು ರೂಪಿಸುತ್ತಾರೆ. ಭಾಷೆಗೆ ಕಾಯಕಲ್ಪವನ್ನು ಮಾಡಿ, ಸಾಹಿತ್ಯದ ಮೂಲಕ ಸ್ವರ್ಗ ಮರ್ತ್ಯಗಳನ್ನು ಬೆಸೆಯುತ್ತಾರೆ. ದೀನದಲಿತ ಸ್ತ್ರೀ ಸಾಮಾನ್ಯರಲ್ಲಿ ನವಚೇತನವನ್ನು ತುಂಬುತ್ತಾರೆ. ಯೋಜನೆಗಳು ಪ್ರಯೋಗದ ಹಂತದಲ್ಲಿರುವಾಗಲೇ, ಕ್ರಾಂತಿ ಪೂರ್ಣವಾಗುವ ಮೊದಲೇ ಅವರ ದುರಂತ ಸಂಭವಿಸಿದ್ದು ದುರ್ದೈವ. ತಮ್ಮ ಉದ್ದೇಶ ಪೂರ್ಣವಾಗಿ ಈಡೇರದೆ ಹಿಂಸೆ ಅನ್ಯಾಯ ಅಧರ್ಮಗಳು ತಲೆದೋರಿದ್ದರಿಂದ ಅವರು ತುಂಬ ಸಂಕಟಕ್ಕೊಳಗಾಗುತ್ತಾರೆ ; ಆ ಸಂಕಟವೇ ಅವರಿಗೆ ಮಾರಕವಾಗುತ್ತದೆ. 'ಅಯ್ಯೋ ಶಿವನೆ' ಎಂದವರು ನಿಟ್ಟುಸಿರುಗರೆಯುತ್ತಾರೆ. ಅವರ ನಿಟ್ಟುಸಿರು ಶಿವನಿಗೆ ಕೇಳಿಸುತ್ತದೆ.

> ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
> ಲಿಂಗವೆಂಬ ಎಲೆಯಾಯಿತ್ತು ; ಲಿಂಗವೆಂಬ
> ಎಲೆಯ ಮೇಲೆ ವಿಚಾರವೆಂಬ ಹೂವಾಯಿತ್ತು ;
> ಆಚಾರವೆಂಬ ಕಾಯಾಯಿತ್ತು ; ನಿಷ್ಪತ್ತಿಯೆಂಬ ಹಣ್ಣಾಯಿತ್ತು ;
> ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
> ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ

೨. ಸಿದ್ಧಿ

ಧಾರ್ಮಿಕ ಕ್ರಾಂತಿ

ಬುದ್ಧ ಯೇಸುಗಳ ನಂತರ ಜಗತ್ತಿನ ಮಹಾ ಮಾನವತಾ ಪ್ರವಾದಿ ಬಸವಣ್ಣ. ಸಾಮಾನ್ಯವಾಗಿ ಸಿರಿವಂತರ ಮನೆಯಲ್ಲಿ, ವಿಪ್ರಕುಲದಲ್ಲಿ ಹುಟ್ಟಿದವರಿಗೆ ಸಾಮಾನ್ಯರ ಕಷ್ಟನಷ್ಟಗಳು ನೋವು ಗೋಳುಗಳು ಅರ್ಥವಾಗುವುದಿಲ್ಲ. ಸುಖದ ಸುಪ್ಪತ್ತಿಗೆಯಲ್ಲಿ ಐಷಾರಾಮದ ಜೀವನ ನಡೆಸಿದವರಿಗೆ ದೀನದಲಿತರ ಆರ್ತನಾದ ಕೇಳಿಸುವುದಿಲ್ಲ. ಗರ್ವದ ಗಿರಿ ಶಿಖರದಿಂದಿಳಿದು, ಸಾಮಾನ್ಯರೊಡನೆ ಕಲೆತು, ಅವರ ಬಾಳಿನಲ್ಲಿ ಬೆರೆಸಿಕೊಂಡವರಿಗೆ ಮಾತ್ರ ಅವರ ಹೀನ ಸ್ಥಿತಿ ಮನವರಿಕೆಯಾಗುತ್ತದೆ ಜೀವ ದಯೆ ಇಲ್ಲದವರಿಗೆ ಅವರ ಬಗ್ಗೆ ಸಹಾನುಭೂತಿ ಇರುವುದಿಲ್ಲ.

ಬಾಲ್ಯದಲ್ಲಿಯೇ ಬಸವಣ್ಣನವರಿಗೆ ಸಾಮಾಜಿಕ ರೋಗರುಜಿನಗಳ ಪರಿಚಯವಾಗುತ್ತದೆ. ಸಿರಿವಂತರ ಮತ್ತು ಬಡವರ ನಡುವಣ ಕಂದಕ ಭಯಂಕರವಾಗಿ ಕಾಣುತ್ತದೆ. ವರ್ಣ ವ್ಯವಸ್ಥೆಯಲ್ಲಿ, ಜಾತಿಗಳ ವಿಂಗಡಣೆಯಲ್ಲಿ ಎಲ್ಲ ಅನಿಷ್ಟಗಳ ಮೂಲವನ್ನವರು ಗುರುತಿಸುತ್ತಾರೆ. ಎಲ್ಲ ಜನರನ್ನು ಒಂದುಗೂಡಿಸುವ ಒಂದು ಸೂತ್ರವಿಲ್ಲ. ದೇವರು ದಿಂಡರ ಲೆಕ್ಕ ಎಣಿಕೆಗೆ ಸಿಗುವಂತಿಲ್ಲ. ಒಂದೊಂದು ಕಾಲಕ್ಕೊ ಒಂದೊಂದು ಸಂಪ್ರ

ಪಾಯ. ಒಂದು ಕುಲದವರಿಗೆ ಮತ್ತೊಂದು ಕುಲದವರು ಪರಕೀಯರು. ಅಜ್ಞಾನ ಮೌಢ್ಯಗಳೇ ಹಲವು ಸಂಪ್ರದಾಯಗಳಿಗೆ ತಳಹದಿ. ಸಮಾಜದ ಬಡತನಕ್ಕೆ ಅಜ್ಞಾನಕ್ಕೆ ಅನೀತಿಗೆ ಸುಲಿಗೆಗೆ ಅಸಮಾನತೆಗೆ ಸಿರಿವಂತರು ಹಾಗೂ ಪುರೋಹಿತರು ಕಾರಣರೆಂಬುದು ಅಂಗೈನೆಲ್ಲಿಯಂತೆ ಬಸವಣ್ಣನವರಿಗೆ ಸ್ಪಷ್ಟವಾಗುತ್ತದೆ. ಅವರಿಗೆ ರಾಜರು ಸಾಮಿಲು. ತಮ್ಮ ಅಧಿಕಾರಕ್ಕೆ ಚ್ಯುತಿಯುಂಟಾಗದಿದ್ದರೆ ಸರಿ, ಸಿರಿವಂತರ ಮತ್ತು ಪುರೋಹಿತರ ಸುಲಿಗೆಗೆ ಅವರು ಅಡ್ಡ ಬರುವುದಿಲ್ಲ. ಅನೀತಿ ಅಧರ್ಮಗಳೇ ಅವರ ನೀತಿಯಾದ್ದರಿಂದ ಸಾಮಾನ್ಯರ ಗೋಳನ್ನು ಕೇಳುವವರಿಲ್ಲ. ಒಗ್ಗಟ್ಟಿಲ್ಲದೆ ದೇಶ ಅರಾಜಕತೆಯ ಕಡೆಗೆ ವಾಲುತ್ತದೆ.

ಆಧ್ಯಾತ್ಮಿಕ ಚಿಂತನೆಯ ಮೂಲಕವೇ ಬಸವಣ್ಣನವರು ಎಲ್ಲ ಲೌಕಿಕ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಪ್ರಯತ್ನಿಸುತ್ತಾರೆ. ಆ ಪರಿಹಾರ ತಾತ್ವಿಕ ನೆಲೆಯಲ್ಲಿ ನಿಲ್ಲದೆ ಕಾರ್ಯರೂಪ ಪಡೆಯಬೇಕು. ಅಹಿಂಸಾತ್ಮಕವಾಗಿಯೇ ಹಳೆಯ ವ್ಯವಸ್ಥೆ ಬದಲಾವಣೆಗೊಳ್ಳಬೇಕು; ಜನತೆಯಲ್ಲಿ ಧಾರ್ಮಿಕ ಜಾಗೃತಿಯುಂಟಾಗಬೇಕು; ಬಡತನಕ್ಕೆ ಸುಲಿಗೆಗೆ ಅಸಮಾನತೆಗೆ ಭೇದವಿಭೇದಗಳಿಗೆ ಕಾರಣವಾದ ವ್ಯವಸ್ಥೆಗಳು ನಿರ್ಮೂಲನವಾಗಬೇಕು; ಅವುಗಳ ಸ್ಥಾನದಲ್ಲಿ ನೂತನ ವ್ಯವಸ್ಥೆ ನಿಲ್ಲಬೇಕು. ಜೀರ್ಣ ವ್ಯವಸ್ಥೆಗೆ ರಕ್ಷೆಯಾಗಿರುವ ರಾಜರಿರುವಾಗ ಪುರೋಹಿತರಿರುವಾಗ ಹೊಸ ಕಟ್ಟುಪಾಡುಗಳನ್ನು ಕಾರ್ಯಗತಗೊಳಿಸುವುದಾದರೂ ಹೇಗೆ? ಅದಕ್ಕೆ ಅವರು ಮತದ ಮಾಧ್ಯಮವನ್ನು ಬಳಸಿಕೊಳ್ಳಬೇಕಾಗುತ್ತದೆ. ಸಮಗ್ರ ಸಾಂಸ್ಕೃತಿಕ

ಕ್ರಾಂತಿಯನ್ನು ಆಶ್ರಯಿಸಬೇಕಾಗುತ್ತದೆ. ಈ ಸಮಗ್ರ ಸಾಂಸ್ಕೃತಿಕ ಕ್ರಾಂತಿಯ ಪ್ರತಿಪಾದಕರೆಂದರೆ ಅವರೊಬ್ಬರೇ ಎಂದು ಹೇಳಬಹುದು.

ಅಹಿಂಸೆ ಸತ್ಯ ಅಸ್ತೇಯ ಧರ್ಮ ನೀತಿ ಇವೇ ಮೊದಲಾದ ಮೌಲ್ಯಗಳು ಸಂಸ್ಕೃತಿಯ ನೆಲಗಟ್ಟುಗಳು. ಇದ್ದಲ್ಲಿಂದ ಮೇಲ್ಮಟ್ಟಕ್ಕೇರುವ ಪ್ರಯತ್ನ, ಅಧ್ಯಾತ್ಮಸಿದ್ಧಿಗಾಗಿ ನಡಸುವ ಸಾಧನೆ, ನಿರಂತರವಾದ ಸತ್ಯಾನ್ವೇಷಣೆ, ಸಕಲ ಜೀವಿಗಳಿಗೂ ಲೇಸನ್ನು ಬಯಸುವ ಹಂಬಲ. ನಡೆ ನುಡಿ ಆಲೋಚನೆಗಳ ಶುದ್ಧಿ-ಇವು ಸಂಸ್ಕೃತಿ ಸಾಧಿಸಬೇಕಾದ ಗುರಿಗಳು. ಸಂಗಮ ಕ್ಷೇತ್ರದಲ್ಲಿ ಬಸವಣ್ಣನವರು ನಡೆಸಿದ ಆಧ್ಯಾತ್ಮ ಸಾಧನೆಯಿಂದ ಈ ಗುರಿ ಈಡೇರುತ್ತವೆ. ಅವರ ಮುಂದಿನ ಗುರಿ ನಿಚ್ಚಳವಾಗುತ್ತದೆ. ಧರ್ಮದ ನೆಲಗಟ್ಟಿಲ್ಲದ ಯಾವುದೇ ವ್ಯವಹಾರವಾಗಲಿ ಅಹಿತವಾಗುತ್ತದೆಂದು ಅವರು ಬಗೆಯುತ್ತಾರೆ. ತಮ್ಮ ಸುತ್ತಮುತ್ತ ಚಾಲ್ತಿಯಲ್ಲಿದ್ದ ಮತಗಳು ಜಡ ಸಂಪ್ರದಾಯಗಳೀದಾಗಿ ನಾರುತ್ತವೆ. ಅರ್ಥವಿಲ್ಲದ ವಿಧಿ ನಿಷೇಧಗಳ ಗೊಂದಲದಲ್ಲಿ ಧಾರ್ಮಿಕಾಂಶಗಳು ಮರೆಯಾಗುತ್ತವೆ. ವಿಚಾರ ಹೀನವಾದ ಆಚರಣೆಗಳ ಮರೆಯಲ್ಲಿ ಕೊಳ್ಳೆ ಸುಲಿಗೆಗಳು ಅನಾಚಾರ ಅತ್ಯಾಚಾರಗಳು ಸಮಾಜದ ಅಸ್ತಿತ್ವವನ್ನೇ ಅಲುಗಾಡಿಸುತ್ತವೆ. ದೇವತೆಗಳ ಬಾಹುಳ್ಯದಿಂದ ಸಮಾಜದ ಒಗ್ಗಟ್ಟಿಗೆ ಕೊಡಲಿ ಪೆಟ್ಟು ಬಿದ್ದಿದೆ; ಮಾನವನ ಹೃದಯ ಕಲುಷಿತಗೊಂಡಿದೆ; ಸೋದರ ಭಾವ ಸ್ನೇಹ ವಾತ್ಸಲ್ಯಗಳಿಗೆ ಗ್ರಹಣ ಹಿಡಿದಿದೆ ; ಇವು ಕಾರಣವಾಗಿ ಆಧ್ಯಾತ್ಮಿಕ ದೃಷ್ಟಿ ಮಂದವಾಗಿದೆ. ನೀತಿ ಮೀಮಾಂಸೆ ಮತ್ತು

ಅರ್ಥಶಾಸ್ತ್ರಗಳ, ಆಧ್ಯಾತ್ಮಿಕತೆ ಮತ್ತು ಪಾರಮಾರ್ಥಿಕತೆಗಳ, ಅಂತೆಯೇ ಆದರ್ಶತೆ ಮತ್ತು ವಾಸ್ತವತೆಗಳ ಸಮನ್ವಯದಿಂದಲೇ ನಾಡಿನ ಕ್ಷೇಮ ಸಾಧನೆ ಸಾಧ್ಯವೆಂದು ಬಸವಣ್ಣ ತೀರ್ಮಾನಿಸಿಕೊಳ್ಳುತ್ತಾರೆ. ಮನುಕುಲದ ವಿನಾಶಕ್ಕೆ ಮಾನವನ ಅಧಿಕಾರಲಾಲಸೆ, ಗರ್ವಾಂಧತೆ, ಅಶಿಸ್ತು ಮತ್ತು ಹಟಮಾರಿತನ ಕಾರಣವೆ ಹೊರತು ಪ್ರಾಕೃತಿಕ ವ್ಯಾಪಾರಗಳಲ್ಲವೆಂದು ಅವರು ಮನಕ್ಕೆ ತಂದು ಕೊಳ್ಳುತ್ತಾರೆ.

ಪ್ರತಿಯೊಬ್ಬ ವ್ಯಕ್ತಿಯೂ ಪರಮಾತ್ಮನ ಅಂಶವೆಂಬ ತಿಳಿವಳಿಕೆಯೇ ಮತದ ಹುಟ್ಟಿಗೆ ಕಾರಣವಾಗಿದೆಯಷ್ಟೆ ; ಆದ್ದರಿಂದ ಮಾನವ ಪ್ರೇಮವೇ ನಿಜವಾದ ಮತೀಯ ಜೀವನದ ಬೆಳಕಾಗಬೇಕು ; ಆಚಾರ ವಿಚಾರಗಳಲ್ಲಿ, ನಡೆ ನುಡಿಗಳಲ್ಲಿ ಅಗಾಧವಾದ ಅಂತರವಿರುವುದರಿಂದ ಸಮಾಜದಲ್ಲಿ ಬಿರುಕು ಮೂಡಿವೆ, ಅಶಾಂತಿ ನೆಲೆಗೊಂಡಿದೆಯೆಂಬ ಸಂಗತಿ ಅವರಿಗೆ ತಿಳಿದಿದೆ. ಹಳೆಯ ಮತಕ್ಕಂಟಿಕೊಂಡು ಬಂದಿರುವ ರೋಗವನ್ನು ಗುಣಪಡಿಸಬೇಕು. ನವಚೈತನ್ಯವನ್ನು ತುಂಬುವ ಮೂಲಕ ಅದನ್ನು ಜೀರ್ಣೋದ್ಧಾರ ಮಾಡಬೇಕು ; ಮತೀಯ ಕ್ಷೇತ್ರ ಹಸನಾದರೆ ಉಳಿದ ಕ್ಷೇತ್ರಗಳು ಸರಿಹೋಗುತ್ತವೆಯೆಂದು ಮೊದಲು ಖಚಿತ ಪಡಿಸಿಕೊಳ್ಳುತ್ತಾರೆ. ಅನಂತರ ಆ ದಿಶೆಯಲ್ಲಿ ಕಾರ್ಯನಿರತರಾಗುತ್ತಾರೆ. ಹೊಸ ಹೊಸ ಸವಾಲುಗಳಿಗೆ ಜವಾಬು ನೀಡಲಾರದ, ಹೊಸ ಸನ್ನಿವೇಶಗಳಿಗನುಗುಣವಾಗಿ ತನ್ನ ಪಾತ್ರವನ್ನು ಬದಲಾಯಿಸಿಕೊಳ್ಳಲಾರದ, ಹೊಸಹೊಸ ಅಗತ್ಯಗಳನ್ನು ಪೂರೈಸಲಾರದ ಮತ ನಿರ್ಜೀವವಾಗುತ್ತದೆಂಬುದನ್ನು ಅವರು ಬಲ್ಲರು. ಹಳೆಯ

ದೆಲ್ಲ ಸತ್ತು ಹೊಸ ಹುಟ್ಟಿಗೆ ದಾರಿ ಮಾಡಿಕೊಟ್ಟಾಗ ಮಾತ್ರ ಪ್ರಗತಿ ಸಾಧ್ಯವೆಂಬ ಸತ್ಯದ ಬೆಳಕಿನಲ್ಲಿ ಅವರು ಮುಂಬರಿಯುತ್ತಾರೆ. ಜನತೆಯ ನಾಡಿಯನ್ನು ಹಿಡಿಯುವ ಕಲೆ ಅವರಿಗೆ ವಶವಾಗಿದೆ. ಮತದ ಮೂಲಕವಲ್ಲದೆ ಅನ್ಯವಿಧಾನದಲ್ಲಿ ಜನರನ್ನು ತಿದ್ದಲಾಗದೆಂಬ ಸಂಗತಿಯೂ ಆ ವೈದ್ಯರಿಗೆ ವೇದ್ಯ.

ಆ ಕಾಲಕ್ಕೆ ಶೈವಮತ ಕರ್ಣಾಟಕದಲ್ಲೆಲ್ಲ ಬಹು ಜನಪ್ರಿಯವಾಗಿತ್ತು. ಬಸವಣ್ಣನವರ ಹಿರಿಯರು ಅನುಸರಿಸುತ್ತಿದ್ದ ಮತವೂ ಅದೇ ಆದ್ದರಿಂದ ಅದರ ಪರಿಚಯವೂ ಅವರಿಗಿತ್ತು. ಅವರೇನೇ ಕಾರ್ಯಕ್ರಮ ರೂಪಿಸಿ ಕೊಂಡರೂ ಸಾಮಾನ್ಯ ಜನತೆಯ ಹಿತ ಅವರ ದೃಷ್ಟಿಯಲ್ಲಿರುತ್ತದೆ. ಸಾಮಾನ್ಯರಿಗೆ ಎಟಕುವಂಥ ಧರ್ಮ ಸೂತ್ರಗಳನ್ನು ರೂಪಿಸಬೇಕು; ವಿಚಾರ ಸಮ್ಮತವಾದ ಕಾಲಾನುಗುಣವಾದ ವಿಧಿನಿಷೇಧ ಆಚಾರ ಲಾಂಛನಗಳನ್ನು ರೂಢಿಯಲ್ಲಿ ತರಬೇಕು; ನಿರಾಕಾರದ ಕಲ್ಪನೆ ಸಾಧ್ಯವಿಲ್ಲದಿರುವಾಗ ಸಾಕಾರದ ಅನುಕೂಲವನ್ನು ಕಲ್ಪಿಸಬೇಕು; ಆದರೆ ಸಾಕಾರದ ಸಂಕೇತ ವಿಗ್ರಹವಾಗಬಾರದು; ಕುಲ ಗೋತ್ರಗಳ ಭೇದವನ್ನಳಿಸಿ, ಸಮಾನತೆಯ ಆಧಾರದ ಮೇಲೆ ಎಲ್ಲ ಕೋಮಿನ ಜನರನ್ನು ಒಂದುಗೂಡಿಸುವ ಒಂದು ದೈವ, ಒಂದು ತತ್ತ್ವ, ಒಂದು ವ್ಯವಸ್ಥೆ ಅನಿವಾರ್ಯವೆಂಬುದು ಅವರ ಗಮನಕ್ಕೆ ಬರುತ್ತದೆ. ಈ ನಿಟ್ಟಿನಲ್ಲಿ ಅವರು ನಡೆಸಿದ ಪ್ರಯತ್ನದಿಂದಾಗಿ ಇಷ್ಟಲಿಂಗ ಪೂಜೆ, ಅಷ್ಟಾವರಣ ಪಂಚಾಚಾರಗಳ ಅನುಷ್ಠಾನ ಹಾಗೂ ಷಟ್ಸ್ಥಲಮಾರ್ಗದ ಅನುಸರಣೆ ಕಾರ್ಯ ರೂಪಕ್ಕೆ ಬರುತ್ತವೆ.

ಸ್ಥಾವರಲಿಂಗಪೂಜೆ ಐದು ಸಾವಿರ ವರ್ಷಗಳಷ್ಟು ಹಳೆಯದು. ಆದರೆ ಅದು ಕಾಲಕ್ರಮೇಣ ಕೆಲವರಿಗೆ ಮಾತ್ರ ಮೀಸಲಾಗುತ್ತದೆ; ಪುರೋಹಿತಶಾಹಿಯಲ್ಲಿ ಕೊನೆಗೊಳ್ಳುತ್ತದೆ. ಮುಟ್ಟಬಹುದಾದವರು ಮುಟ್ಟಬಾರದವರು ಎಂಬ ಭೇದಭಾವಕ್ಕೆ ಆಸರೆಯಾಗುತ್ತದೆ. ಜನಿವಾರದ ಸಂಸ್ಕೃತಿಗೆ ಉತ್ತೇಜನ ನೀಡುತ್ತದೆ. ವರ್ಣಾಶ್ರಮ ಜಾತಿವ್ಯವಸ್ಥೆಗಳ ಮೂಲಕ ಸಮಾಜದ ಬಹುಭಾಗವನ್ನು ಅಜ್ಞಾನ ದಾರಿದ್ರ್ಯಗಳ ನರಕಕ್ಕೆ ನೂಕುತ್ತದೆ. ವ್ಯಕ್ತಿಸ್ವಾತಂತ್ರ್ಯ ವಿಚಾರಸ್ವಾತಂತ್ರ್ಯಗಳನ್ನು ನಿರ್ಬಂಧಿಸುತ್ತದೆ. ದೇವರ ಹೆಸರಿನಲ್ಲಿ ನಡೆಯುತ್ತಿದ್ದ ಸಕಲ ಅನಿಷ್ಟಗಳನ್ನೂ ಶೋಷಣೆಯನ್ನೂ ತಪ್ಪಿಸಬೇಕಾದ್ದು ಅವರ ಆದ್ಯ ಕರ್ತವ್ಯವಾಗುತ್ತದೆ. ಅವರು ಜನಪ್ರಿಯಗೊಳಿಸಿದ ಇಷ್ಟಲಿಂಗಪೂಜೆ ಒಂದೇ ಏಟಿನಲ್ಲಿ ಈ ಅನಿಷ್ಟಗಳನ್ನೆಲ್ಲ ತೊಡೆದುಹಾಕುತ್ತದೆ; ಸುಲಿಗೆಗೆ ಬರಿ ಹಾಕುತ್ತದೆ; ದೇವರ ಮತ್ತು ಭಕ್ತರ ನಡುವಣ ದಳ್ಳಾಳಿಗಳ ಹಾವಳಿಯನ್ನು ತಪ್ಪಿಸುತ್ತದೆ, ಪುರೋಹಿತ ಶಾಹಿಯನ್ನು ಅಳಿಸುವ ಮೂಲಕ ಅದರ ಶನಿಸಂತಾನವನ್ನು ನಿರ್ನಾಮಗೊಳಿಸುತ್ತದೆ.

ಜನಿವಾರ ದೇವರ ಪ್ರತೀಕವೂ ಅಲ್ಲ, ಸಂಕೇತವೂ ಅಲ್ಲ; ಸಾಮಾನ್ಯರಿಂದ 'ಅಸಾಮಾನ್ಯ'ರನ್ನು ಬೇರ್ಪಡಿಸುವ ಕುಲಚಿಹ್ನೆ, ಸಮವೇಷ. ಲಿಂಗವಾದರೋ ಪರಂಜ್ಯೋತಿಯ, ವಿಶ್ವಚೈತನ್ಯದ, ಸಚ್ಚಿದಾನಂದಗಳ ದಿವ್ಯ ಸಂಕೇತ. ಧ್ಯಾನಮಗ್ನನಾದ ಭಕ್ತ ಅಂಗೈಯೊಳಗಣ ಲಿಂಗದಲ್ಲಿ ಆತ್ಮಜ್ಯೋತಿಯನ್ನು ದರ್ಶಿಸುತ್ತಾನೆ.

ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮಕುಟ
ಅಪ್ರಮಾಣ ಅಗಮ್ಯ ಅಗೋಚರ ಅಪ್ರತಿಮಲಿಂಗವೆ
ಕೂಡಲ ಸಂಗಮದೇವಯ್ಯ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯಾ

ಎನ್ನುವಲ್ಲಿ ಲಿಂಗದ ಸ್ವರೂಪವೇನೆಂಬುದು ಸ್ಪಷ್ಟವಾಗುತ್ತದೆ. ಅದು ಕಣ್ಣೆದುರಿಗಿದ್ದಾಗ ನೆನೆಯುವ, ಕಣ್ಣ ಹೊರಗಿರುವಾಗ ಮರೆಯುವ ವಸ್ತುವಲ್ಲ. ಶಬ್ದದ ಮೂಲಕ ನಿಶ್ಶಬ್ದವನ್ನು ಸಾಕಾರದ ಮೂಲಕ ನಿರಾಕಾರವನ್ನು ಕಾಣಿಸುವುದು ಬಸವಣ್ಣನವರ ಉದ್ದೇಶ. ನಿರಕ್ಷರಿಗಳ ಕಲ್ಪನೆಗೊಂದು ಊರೆ ಬೇಕು, ಅವರ ಶ್ರದ್ಧೆ ಉತ್ಸಾಹಗಳನ್ನು ಚಿಮ್ಮಿಸುವ ಸಾಧನವೊಂದು ಬೇಕು, ಸಾಧನೆಯ ಮೊದಲ ಹಂತದಲ್ಲಿ ಸಾಧಕರ ಏಕಾಗ್ರತೆಗೂ ಒಂದು ನೆಮ್ಮು ಬೇಕು. ಸಾಧನೆಯ ಆರು ಹಂತಗಳಲ್ಲಿ ಮೊದಲ ನಾಲ್ಕನ್ನು ದಾಟುವ ತನಕ ಜ್ಯೋತಿಸ್ವರೂಪದ ಒಂದು ಸಂಕೇತ ಬೇಕಾಗುತ್ತದೆ. ಅನಂತರ ಅವನಿಗೆ ಯಾವ ಸಂಕೇತದ ಆವಶ್ಯಕತೆಯೂ ಇರುವುದಿಲ್ಲ. ಏಕೆಂದರೆ ಬಯಲರೂಪ ಮಾಡಬಲ್ಲ, ರೂಪ ಬಯಲು ಮಾಡಬಲ್ಲ ಸಾಮರ್ಥ್ಯ ಲಿಂಗಾನುಭಾವಿಗಿರುತ್ತದೆ. 'ಕಂಗಳು ತುಂಬಿದ ಬಳಿಕ ನೋಡಲಿಲ್ಲ; ಮನ ತುಂಬಿದ ಬಳಿಕ ನೆನೆಯಲಿಲ್ಲ' ಎಂಬುದು ಶರಣನ ಅನುಭಾವ.

ಅರಿವನ್ನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ,
ಅರಿವನ್ನಕ್ಕರ ಹಾಡಿ ಹೊಗಳಿದೆ.
ಅರಿವುಗೆಟ್ಟು ಮರಹು ನಷ್ಟವಾಗಿ
ಭಾವ ನಿರ್ಭಾವವಾಗಿ ನಿಜವೊಳಕೊಂಡಿತ್ತಾಗಿ,
ಕೂಡಲ ಸಂಗಯ್ಯನಲ್ಲಿ ಸರ್ವ ನಿವಾಸಿಯಾಗಿರ್ದೆನು

ಸರ್ವತತ್ತ್ವಗಳು, ಸಕಲ ದೇವತೆಗಳು ಒಂದು ಬಿಂದುವಿನಲ್ಲಿ ಸೇರಿದಾಗ, ಜೀವಾತ್ಮ ಪರಮಾತ್ಮ ಕೂಡಿಕೊಂಡಾಗ ಸಂಗಮನಾಥನೇ ಎಲ್ಲ ಕಡೆಯೂ ಕಾಣುತ್ತಾನೆ; ಹೃದಯ ಸಂಗಮಕ್ಷೇತ್ರವಾಗುತ್ತದೆ; ಆಗ ಕುರುಹಳಿದು ಬಯಲಾಗುತ್ತದೆ, ಲಿಂಗಾಂಗ ಸಾಮರಸ್ಯ ಉಂಟಾಗುತ್ತದೆ.

ಲಿಂಗಪೂಜೆಯ ಈ ಅಂತರ್ದೃಷ್ಟಿಯ ಜತೆಗೆ, ಅದರ ಸಾಮಾಜಿಕ ದೃಷ್ಟಿಯ ಹಿರಿಮೆಯನ್ನು ಮರೆಯುವಂತಿಲ್ಲ. ತಮ್ಮ ನೂತನ ಮತವನ್ನು ಯಾರಾದರೂ ಸೇರಬಹುದು ಎಂದು ಬಸವಣ್ಣ ಕರೆ ಕೊಟ್ಟಾಗ ಹಲವು ಮತ ಜಾತಿ ಕುಲಗೋತ್ರ ವೃತ್ತಿಗಳ ಜನ ಲಿಂಗದೀಕ್ಷೆ ಪಡೆಯುತ್ತಾರೆ. ಲಿಂಗ ಭೇದ ಮೊದಲುಗೊಂಡು ಸರ್ವ ಭೇದಗಳನ್ನು ತೊಡೆಯಬಲ್ಲ, ಹೃದಯಗಳನ್ನು ಬೆಸೆಯಬಲ್ಲ, ಸಮಾನತೆ ಸ್ವಾತಂತ್ರ್ಯ ಭ್ರಾತೃತ್ವಗಳನ್ನು ಕುದುರಿಸಬಲ್ಲ, ಧೈರ್ಯ ಸ್ಥೈರ್ಯ ಉತ್ಸಾಹ ಆತ್ಮವಿಶ್ವಾಸ ಆತ್ಮಗೌರವಗಳನ್ನು ತುಂಬಬಲ್ಲ ಒಂದು ಸಂಕೇತ ಶಕ್ತಿಯನ್ನು ಅವರು ಲಿಂಗದಲ್ಲಿ ಕಾಣುತ್ತಾರೆ. ಏಕಕಾಲದಲ್ಲಿ ಅದು ಲಿಂಗಾಂಗ ಸಾಮರಸ್ಯಕ್ಕೂ ಲೌಕಿಕ ಶ್ರೇಯಸ್ಸಿಗೂ ದಾರಿಯಾಗುತ್ತದೆಂಬುದನ್ನು ಅವರು ಬಲ್ಲರು. 'ಶ್ವಪಚನಾದಡೇನು ಲಿಂಗ ಭಕ್ತನೇ ಕುಲಜನು.' 'ಲಿಂಗವಿದ್ದವರ ಮನೆ ಕೈಲಾಸವೆಂದು ನಂಬಬೇಕು' ಅಂಗದ ಮೇಲೆ ಲಿಂಗವುಳ್ಳುದೆಲ್ಲವೂ ಸಂಗಮನಾಥನಲ್ಲದೆ ಮತ್ತಾರನೂ ಕಾಣೆ' ಎಂಬ ಅವರ ಈ ನುಡಿ ಮುತ್ತುಗಳಲ್ಲಿ ಮಾನವೀಯತೆಯನ್ನು, ಸರ್ವ ಸಮಾನತೆಯ ಕಲ್ಪನೆಯನ್ನು ಕಾಣಬಹುದು. ಪ್ರತಿಯೊಬ್ಬರು ತಮ ತಮಗೆ ಬೇಕಾದಂತೆ ಇಷ್ಟಲಿಂಗವನ್ನು ಪೂಜಿಸಬಹುದಾದ್ದರಿಂದ, ಕುವೆಂಪು ಅವರು ಹೇಳುವಂತೆ ಮತ ವೈಯಕ್ತಿಕವಾಗುತ್ತದೆ.

ಬಸವಣ್ಣನವರ ಮತ ನೀತಿ ಪ್ರಧಾನವಾದದ್ದು. ಅಂತರಂಗ ಶುದ್ಧಿಗೆ ಅವರು ಒತ್ತುಕೊಡುತ್ತಾರೆ.

> ಕಳಬೇಡ ಕೊಲಬೇಡ; ಹುಸಿಯ ನುಡಿಯಲು ಬೇಡ;
> ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ;
> ತನ್ನ ಬಣ್ಣಿಸ ಬೇಡ, ಇದಿರ ಹಳಿಯಲು ಬೇಡ,
> ಇದೆ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ.
> ಇದೇ ನಮ್ಮ ಕೂಡಲ ಸಂಗಮದೇವರ ನೊಲಿಸುವ ಪರಿ.

ವೈಯಕ್ತಿಕ ಜೀವನದಲ್ಲಿ ಮಾತ್ರವಲ್ಲ, ಸಮಾಜದಲ್ಲಿ ಶಾಂತಿಕ್ಷೇಮಗಳು ನೆಲಸಬೇಕಾದರೆ ಈ ನೀತಿ ಸಂಹಿತೆ ಅತ್ಯಗತ್ಯ. ನುಡಿದಂತೆ ನಡೆಯದಿರುವವನು ಆತ್ಮದ್ರೋಹಿ ಎಂಬುದು ಅವರ ಮತ. ದಯೆಯೇ ಧರ್ಮದ ಮೂಲವೆನ್ನುತ್ತಾರೆ.

ಒಟ್ಟಿನಲ್ಲಿ ಲಿಂಗದೀಕ್ಷೆಯ ಹಿಂದೆ ವೈಚಾರಿಕತೆಯ ಬಲವಿದೆ, ವೈಜ್ಞಾನಿಕ ಮನೋಧರ್ಮವಿದೆ, ಸಮಾಜ ಸುಧಾರಕನ ಉತ್ಸಾಹವಿದೆ, ಪ್ರವಾದಿಯ ವರ್ತಮಾನ ಭವಿಷ್ಯತ್ತುಗಳ ಪ್ರಜ್ಞೆಯಿದೆ ಎಂಬುದನ್ನು ಮರೆಯುವಂತಿಲ್ಲ. ಮೂರ್ತಿಪೂಜೆಯನ್ನು ತಿರಸ್ಕರಿಸಿದ್ದರಿಂದ ಮೂಢ ಸಂಪ್ರದಾಯಗಳಿಗೆ ಮಂಗಳ ಹಾಡಿದಂತಾಗುತ್ತದೆ, ಪುರೋಹಿತ ಶಾಹಿಗೆ ಎಳ್ಳು ನೀರೆರೆದಂತಾಗುತ್ತದೆ; ಸುಲಿಗೆಗೆ ತಡೆ ಹಾಕಿದಂತಾಗುತ್ತದೆ. ಬಸವ ಧರ್ಮ ನಿಜವಾಗಿಯೂ ಜೀವನ ವಿಧಾನವಾಗುತ್ತದೆ. ಅದು

ಮಾಯಾವಾದವನ್ನು ತಿರಸ್ಕರಿಸುತ್ತದೆ ; ಸಂಸಾರ ಪ್ರಧಾನ ವಾದ ಲೌಕಿಕ ಜೀವನವನ್ನು ಪುರಸ್ಕರಿಸುತ್ತದೆ. ಭೂಮಿಯಲ್ಲಿ ಭಗವಂತನ ರಾಜ್ಯವನ್ನು, ಅಂದರೆ ಸ್ವರ್ಗವನ್ನು ಸ್ಥಾಪಿಸುವುದೇ ಅದರ ಉದ್ದೇಶ. ಇದು ಕಣ್ಣೀರಿನ ಕಣಿವೆಯಲ್ಲ, ಪಾಪದ ನೆಲೆವನೆಯಲ್ಲವೆಂದು ಅದು ಮನವರಿಕೆ ಮಾಡಿಕೊಡುತ್ತದೆ. ತನ್ನನ್ನು ತಾನರಿಯಬೇಕೆಂಬುದೇ ಆಧ್ಯಾತ್ಮ ಸಾಧನೆಯ ಪರಮ ಗುರಿಯೆಂದು ಅದು ಬೋಧಿಸುತ್ತದೆ. ಆ ಗುರಿಯ ಸಾಧನೆಗಾಗಿ ಸಾಧಕ ಗುಹೆಯನ್ನು ಸೇರಬೇಕಾಗಿಲ್ಲವೆಂದು ಅದು ವಾದಿಸುತ್ತದೆ. ತನಗಾಗಿ ಮತ್ತೊಬ್ಬ ಉಂಡರೆ ಆವನ ಹಸಿವು ಹಿಂಗುವುದಿಲ್ಲ ; ಅಂತೆಯೇ ತನಗಾಗಿ ಮತ್ತೊಬ್ಬ ಪೂಜೆ ಮಾಡಿದ್ದಾದರೆ ಅವನಿಗೆ ಈಶಕೃಪೆ ಒದಗಲಾರದು. ಕಾಯವೆ ದೇವಾಲಯ, ಭಕ್ತಿಯೆ ನೈವೇದ್ಯ, ಕಾಯಕವೆ ಯೋಗ, ದಾಸೋಹವೆ ಭೋಗ. ಶೋಧನ ಭಾವ ಶುದ್ಧಿ, ದರ್ಶನ, ಸಂಗಮ—ಇವು ಅನುಭಾವಿಯ ಸಾಧನೆಯ ಹಂತಗಳು ; ಶೂನ್ಯ ಸಂಪಾದನೆಯೆ ಅವನ ಗುರಿ. ಶೂನ್ಯವೆಂದರೆ ಸೊನ್ನೆಯಲ್ಲ, ಗುಣರಹಿತವೂ, ಅಗೋಚರವೂ, ಅವ್ಯಕ್ತವೂ, ಅವರ್ಣನೀಯವೂ ಆದ ಶಕ್ತಿಯ ಸ್ಥಿತಿ. ಅನ್ನಮಯ ಕೋಶದಿಂದ ವಿಜ್ಞಾನಮಯ ಕೋಶದವರೆಗೆ ನಡಸುವ ಯಾತ್ರೆ ಯಾವ ಜೀವಿಗಳಿಗೂ ತಪ್ಪಿದ್ದಲ್ಲ. ಈಶ್ವರ ತತ್ವವನ್ನು ಪ್ರಕಾಶ ಪಡಿಸುವುದೇ ಮಾನವ ಜನ್ಮದ ಗುರಿ. ಸಾಮಾಜಿಕ ಮೌಲ್ಯಗಳನಾಗಲೀ ಸಾಂಸ್ಕೃತಿಕ ಆವಶ್ಯಕತೆಗಳನ್ನಾಗಲೀ ಆದಿ ವೀರಶೈವ ಧರ್ಮ ನಿರಾಕರಿಸುವುದಿಲ್ಲ. ಅದರಂಥ ಸರಳ ಧರ್ಮವೂ ಮತ್ತೊಂದಿಲ್ಲ. ಕ್ರಾಂತಿಯೇ

ಬಸವೇಶ್ವರರು ಶುದ್ಧೀಕರಿಸಿದ ಧರ್ಮದ ಉಸಿರು, ಅದೇ ಅದರ ಚಾಲಕ ಶಕ್ತಿ.

ಸಾಮಾಜಿಕ ಕ್ರಾಂತಿ

ಧರ್ಮದ ಬೆಳಕಿನಲ್ಲಿ ಸಾಮಾಜಿಕ ಕ್ರಾಂತಿಯನ್ನು ನಡೆಸಿದ್ದೇ ಬಸವಣ್ಣನವರ ಹೆಗ್ಗಳಿಕೆ. ವೈಯಕ್ತಿಕ ಶ್ರೇಯಸ್ಸು ಮತ್ತು ಸಮಾಜ ಕಲ್ಯಾಣಗಳೇ ಮಾನವ ರೂಪಿಸಿಕೊಂಡಿರುವ ಎಲ್ಲ ವ್ಯವಸ್ಥೆಗಳ ಏಕ ಮಾತ್ರ ಗುರಿ ಯೆಂಬುದು ಅವರ ಮತ. ಭರತ ಖಂಡದ ಏಕತೆಗೆ, ಹಿಂದೂ ಸಮಾಜದ ಭದ್ರತೆಗೆ ಮಾರಕವಾಗಿರುವ ಪಾಪ ಗಳೆಂದರೆ ಅಸ್ಪೃಶ್ಯತೆ, ಜಾತೀಯತೆ, ಸ್ತ್ರೀದಾಸ್ಯ, ವೃತ್ತಿಗಳ ತಾರತಮ್ಯ ಭಾವನೆ ಮತ್ತು ವರ್ಗ ವರ್ಣಗಳ ಉಪಟಳ ವೆಂಬುದನ್ನು ಆ ಧನ್ವಂತರಿ ಬಲ್ಲರು. ಅವುಗಳ ನಿರ್ಮೂ ಲನದಿಂದ ಮಾತ್ರ ಲೋಕ ಶಾಂತಿ, ನಾಡಿನ ಒಗ್ಗಟ್ಟು, ಸಮಾಜ ಕಲ್ಯಾಣ ಮತ್ತು ವೈಯಕ್ತಿಕ ಹಿತಸಾಧನೆ ಸಾಧ್ಯ ವೆಂದು ಅವರು ಸಾರುತ್ತಾರೆ.

ಜಾತಿ ವಿಂಗಡಣೆಗೆ ಕಸಬುಗಳೆ ಆ ಧಾ ರ ವ ಷ್ಟೆ. ಕಸಬುಗಳಿಗೆ ಸಂಬಂಧಿಸಿದ ಮೇಲು ಕೀಳುಗಳ ಭಾವನೆ ಜಾತಿಗಳ ವರ್ಗೀಕರಣಕ್ಕೂ ಕಾರಣವಾಗುತ್ತದೆ. 'ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವೋದಿ ಹಾರುವನಾದ' ಎಂದು ಬಸವೇಶ್ವರರೆ ಜಾತಿಗಳಾದ ಬಗೆಯನ್ನು ವಿವರಿಸುತ್ತಾರೆ. ಸುಖ ಜೀವನ ಮೇಲ್ಮೆಯು, ಶ್ರಮ ಜೀವನ ಕೀಳ್ಮೆಯು ಸಂಕೇತವಾಗಿ, ದುಡಿಮೆಗೆ ಬೆಲೆಯಿಲ್ಲವಾಗುತ್ತದೆ. ದುಡಿಮೆ ಶೂದ್ರರಿಗೆ ಹಾಗೂ ಪಂಚಮರಿಗೆ ಮಾತ್ರ

ಮೀಸಲು ಎಂಬ ಭಾವನೆ ತಲೆಯೆತ್ತಿದಾಗ ಉತ್ಪತ್ತಿ ಕಡಿಮೆಯಾಗುತ್ತದೆ ; ನಾಡಿನ ಸತ್ವ ಕುಸಿಯುತ್ತದೆ ; ಮಿಗಿಲಾಗಿ ಅನೈತಿಕತೆ ಸಮಾಜದ ಸರ್ವಾಂಗಗಳನ್ನು ವ್ಯಾಪಿಸುತ್ತದೆ. ದುಡಿಮೆಯ ಹಿರಿಮೆಯನ್ನು ಬದುಕಿನಲ್ಲಿ ಬೇರೂರಿಸುವುದು ಸಮಾಜ ಸುಧಾರಣೆಯ ಮೊದಲನೆಯ ಹೆಜ್ಜೆಯಾಗುತ್ತದೆ. ಲಿಂಗದೀಕ್ಷೆಗೂ ಕಾಯಕ ತತ್ವಕ್ಕೂ ಹೊಕ್ಕುಳ ಬಳ್ಳಿಯ ಸಂಬಂಧವನ್ನು ಕಲ್ಪಿಸುವ ಮೂಲಕ ಬಸವಣ್ಣ ದುಡಿಮೆಯ ಘನತೆಯನ್ನು ಎತ್ತಿ ಹಿಡಿಯುತ್ತಾರೆ. ಲಿಂಗಧಾರಿಯಲ್ಲದ ದೊರೆ ಲಿಂಗಧಾರಿ ಜಲಗಾರನಿಗಿಂತ ಕೀಳೆಂದು ಅವರು ಸ್ಪಷ್ಟಪಡಿಸುತ್ತಾರೆ. 'ದೇವಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡೆನಾದಡೆ ನಿಮ್ಮಾಣೆ ತಲೆದಂಡ'; 'ಭಕ್ತರಲ್ಲಿ ಕುಲವನರಸಿದೊಡೆ ನಿಮ್ಮ ರಾಣಿವಾಸದಾಣೆ' ಎಂದವರು ಸಂಕಲ್ಪತೊಡುತ್ತಾರೆ. ಪರುಷ ಮುಟ್ಟಿದ ಲೋಹ ಹೊನ್ನಾಗುವಂತೆ, ಜ್ಯೋತಿ ಮುಟ್ಟಿದ ಬತ್ತಿ ಜ್ಯೋತಿಯಾಗುವಂತೆ, ಲಿಂಗ ಧರಿಸಿದ ಬಳಿಕ ಜಾತಿ ಕುಲಗಳ ಕಿಲುಬು ಮಾಯವಾಗುತ್ತದೆಂದು ಅವರು ನುಡಿಯುತ್ತಾರೆ.

ಅದಷ್ಟೇ ಅಲ್ಲ, ವೃತ್ತಿ ಆನುವಂಶಿಕವಾಗಬೇಕಾಗಿಲ್ಲ, ತಂದೆ ಹಿಡಿದ ವೃತ್ತಿಯನ್ನೇ ಮಗ ಹಿಡಿಯಬೇಕಾಗಿಲ್ಲ, ಕಮ್ಮಾರನ ಮಗ ಕಮ್ಮಾರನಾಗಬೇಕಾಗಿಲ್ಲ, ಜಲಗಾರನ ಮಗ ಜಲಗಾರನಾಗಬೇಕಾಗಿಲ್ಲ ಎಂದು ನುಡಿದು ಅವರು ಹಳೆಯ ಸಂಪ್ರದಾಯಗಳಿಗೆ ಬಾಂಬು ಸಿಡಿಸುತ್ತಾರೆ. ಪ್ರತಿಯೊಬ್ಬನೂ ತಂತನ್ನ ಬುದ್ಧಿ ಸಾಮರ್ಥ್ಯ ಹಾಗೂ ಅಭಿರುಚಿಗಳಿಗೆ ತಕ್ಕಂತೆ ಕಸಬನ್ನು ಆಯ್ಕೆ ಮಾಡಿಕೊಳ್ಳುವುದೆ ಸರಿಯೆಂದೂ ಅದರಿಂದ ಅವನ ಕೌಶಲ್ಯ ಹರಿತ

ವಾಗುತ್ತದೆಂದೂ, ಕಸುಬಿಗೆ ಹೊಸತನ ಲಭಿಸುತ್ತದೆಂದೂ ಅವರು ಭಾವಿಸಿದಂತೆ ತೋರುತ್ತದೆ.

ಅಸ್ಪೃಶ್ಯತೆ ಅನೈತಿಕತೆಯ ಕುರುಹು : ಅವನತಿಯ ಚಿಹ್ನೆ ; ನಾಡಿನ ಕೇಡಿಗದು ಮೂಲ. ರಾಷ್ಟ್ರೀಯ ಸ್ವಾತಂತ್ರ್ಯದ ಹರಣಕ್ಕೆ, ವಿದೇಶೀಯ ಮತಗಳ ಪ್ರಸಾರಕ್ಕೆ ಜಾತೀಯತೆ ಮತ್ತು ಅಸ್ಪೃಶ್ಯತೆಗಳೇ ಮುಖ್ಯ ಕಾರಣಗಳೆಂಬುದನ್ನು ಇತಿಹಾಸದಿಂದ ತಿಳಿಯಬಹುದಾಗಿದೆ. ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ಪ್ರಾಣವನ್ನೇ ಪಣವೊಡ್ಡಿದ ಮಹಾವ್ಯಕ್ತಿಯೆಂದರೆ ಬಸವಣ್ಣನವರೊಬ್ಬರೇ! ಇತರರಂತೆ ಅಂತ್ಯಜರಿಗೂ ಅವರು ಲಿಂಗವನ್ನು ಕಟ್ಟಿ, ಸಮಾಜದಲ್ಲಿ ಉತ್ತಮರೊಡನೆ ಸಮಾನ ಸ್ಥಾನ ನೀಡುತ್ತಾರೆ.

ಕಷ್ಟ ಕುಲದಲ್ಲಿ ಹುಟ್ಟಿದ ಕರ್ಮವ ಕಳೆದು
ಮುಟ್ಟಿ ಪಾವನ ಮಾಡಿ ಕೊಟ್ಟನಯ್ಯ ಎನ್ನ
ಕರಸ್ಥಳಕ್ಕೆ ಲಿಂಗವ |

ಆ ಲಿಂಗ ಬಂದು ಸೋಂಕಲೊಡನೆ ಎನ್ನ
ಸರ್ವಾಂಗದ ಅವಲೋಹವಳಿಯಿತ್ತಯ್ಯ

ಎನ್ನುವ ಕಕ್ಕಯ್ಯನಿಗೆ ಬಸವಣ್ಣನವರ ಕರುಣೆಯೇ ವರವಾಗುತ್ತದೆ. 'ಅಪ್ಪನು ಡೋಹಾರ ಕಕ್ಕಯ್ಯನಾಗಿ, ಮುತ್ತಯ್ಯ ಚೆನ್ನಯ್ಯನಾದಡೆ ಆನು ಬದುಕೆನೆ? 'ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ' ಎಂದು ಬಸವಣ್ಣ ಅವರ ಮೇಲೆ ತಮಗಿದ್ದ ಗೌರವಾದರಗಳನ್ನು ಪ್ರಕಟಿಸುತ್ತಾರೆ. 'ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ, ಕುಲವುಂಟೆ ಜಂಗಮವಿದ್ದೆಡೆಯಲ್ಲಿ' ಎಂದವರು ಸಾರುತ್ತಾರೆ. ಅವರು ಗಗನಕ್ಕೆ ಮಾತಿನ ಏಣಿ ಹಾಕಿದವರಲ್ಲ, ಕ್ರಿಯಾಶೀಲರೂ

ಆಹುದೆನ್ನುವುದಕ್ಕೆ ಹರಳಯ್ಯ–ಮಧುವರಸರ ಮಕ್ಕಳ ಮದುವೆಯೇ ಸಾಕ್ಷಿಯಾಗಿದೆ

ಹೆಣ್ಣು ಮಾಯೆಯಲ್ಲ, ದಾಸಿಯೂ ಅಲ್ಲ, ಪುರುಷನ ಅರ್ಧಾಂಗಿನಿ ಎಂಬುದು ಬಸವಣ್ಣನವರ ಭಾವನೆ. ಲಿಂಗವಿದ್ದಲ್ಲಿ ಸೂತಕವೂ ಇಲ್ಲ ಎಂದವರೂ ಅವರೇ. ಬುದ್ಧಿಯಲ್ಲಿ, ಪ್ರತಿಭೆಯಲ್ಲಿ, ಜ್ಞಾನಸಂಪಾದನೆಯಲ್ಲಿ, ಆಧ್ಯಾತ್ಮಿಕ ಸಾಧನೆಯಲ್ಲಿ ಹೆಂಗಸು ಯಾವ ರೀತಿಯಲ್ಲಿಯೂ ಗಂಡಸಿಗಿಂತ ಕೀಳಲ್ಲವೆಂದು ಅವರು ವಾದಿಸುತ್ತಾರೆ. ಗಂಡಸಿನಂತೆ ಅವಳೂ ಎಲ್ಲ ಸ್ವಾತಂತ್ರ್ಯಗಳಿಗೆ ಅರ್ಹಳು ಎಂಬುದನ್ನು ಮನದಟ್ಟುಮಾಡಿಕೊಡುತ್ತಾರೆ. ಅನುಭವ ಮಂಟಪದಲ್ಲಿ ಅನೇಕ ಶರಣೆಯರು ಶರಣರೊಡನೆ ಸರಿಸಮನಾಗಿ ಕುಳಿತು ಚರ್ಚೆ ನಡಸಿದ ಸಂಗತಿ ಅವರ ಸ್ವಾತಂತ್ರ್ಯಕ್ಕೆ ಸಾಕ್ಷಿಯಾಗಿದೆ. ಸಮಾಜದ ಎಲ್ಲ ವರ್ಗದ ಜನರಿಗೆ ಸಮಾನಾವಕಾಶಗಳನ್ನು ಕಲ್ಪಿಸಿದ್ದಾದರೆ ಕಕ್ಕಯ್ಯ, ಶ್ವಪಚಯ್ಯ, ಮಾಚಯ್ಯ, ಅಪ್ಪಣ್ಣ, ಮುಕ್ತಾಯಕ್ಕ, ಮಹಾದೇವಿಯಕ್ಕಗಳಂಥ ಪ್ರತಿಭಾವಂತರು ಅಪಾರ ಸಂಖ್ಯೆಯಲ್ಲಿ ಸಿಗುತ್ತಾರೆಂಬುದನ್ನು ಬಸವಣ್ಣ ಅನೇಕ ನಿದರ್ಶನಗಳ ಮೂಲಕ ತೋರಿಸಿ ಕೊಟ್ಟಿದ್ದಾರೆ.

ಸಮಾಜದ ಅಶಾಂತಿಗೆ ಆರ್ಥಿಕ ವಲಯದ ಏರುಪೇರುಗಳೇ ಕಾರಣವೆಂಬುದನ್ನು ಬಸವಣ್ಣನವರು ಬಲ್ಲರು. ಒಂದು ಕಡೆ ದುಡಿಯುವವರ ವರ್ಗ, ಮತ್ತೊಂದು ಕಡೆ ಶ್ರೀಮಂತ ವರ್ಗ; ಒಂದು ಕಡೆ ಹೊಟ್ಟೆಬಟ್ಟೆಗಳಿಗೆ ಗತಿಯಿಲ್ಲ ; ಮತ್ತೊಂದು ಕಡೆ ಕಣ್ಣುಕುಕ್ಕುವ ಭೋಗ ವೈಭವ. ಲೋಭದಿಂದ ಸಂಗ್ರಹ, ಸಂಗ್ರಹದಿಂದ ಏರುಪೇರು, ಏರುಪೇರಿನಿಂದ ಅಸೂಯೆ, ಅಸೂಯೆಯಿಂದ

ಸಂಘರ್ಷ–ಇದೊಂದು ಶನಿಸಂತಾನ. ಅಂದಮೇಲೆ ಶ್ರೀಮಂತ ವರ್ಗವೇ ಸಾಮಾಜಿಕ ಘರ್ಷಣೆಗಳಿಗೆ ಕಾರಣ ವೆಂಬುದು ಸುಸ್ಪಷ್ಟ. 'ಹಾವು ತಿಂದವರ ನುಡಿಸ ಬಹುದು ; ಸಿರಿಗರ ಹೊಡೆದವರ ನುಡಿಸಲು ಬಾರದು' ಎಂಬುದು ಬಸವಣ್ಣನವರ ಅನುಭವದ ಮಾತು. ಕನಿಷ್ಠಾವಶ್ಯಕತೆಗಿಂತ ಹೆಚ್ಚು ಪಡೆಯುವುದು ಸಮಾಜ ದ್ರೋಹವಾಗುತ್ತದೆ, ಕಳ್ಳತನವಾಗುತ್ತದೆ ; ಮರುಳುತನ ವಾಗುತ್ತದೆ. ತಾನು ಬಳಸದ ವಸ್ತುವನ್ನೋ, ದ್ರವ್ಯ ವನ್ನೋ, ಆಸ್ತಿಯನ್ನೋ ಹೊಂದುವುದು ಧೂರ್ತತನ ವಾಗುತ್ತದೆ. ಪ್ರೇಮ ಅಥವಾ ಸುಖ ಮಾರಾಟದ ವಸ್ತು ವಲ್ಲ. ಸುಖದ ಮೂಲ ತ್ಯಾಗವೇ ಹೊರತು ಭೋಗವಲ್ಲ. ಆದ್ದರಿಂದಲೇ ಬಸವಣ್ಣನವರು 'ಧನವನಿರಿಸದಿರಾ; ಇರಿಸಿ ದರೆ ಭವ ಬಪ್ಪುದು ತಪ್ಪದು' 'ನೇಲನನಗಿದು ಮಡುಗದಿರಾ! ಪೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ ! ಕೂಡಲಸಂಗನ ಶರಣರಿಗೊಡನೆ ಸವೆಸುವುದು', 'ಒಡೆಯರಿಗೊಡವೆಯ ನೊಪ್ಪಿಸುವುದೇ ನೇಮ !' ಎಂದು ಧಾರ್ಮಿಕ ಭಾಷೆ ಯಲ್ಲಿ ಅಸಂಗ್ರಹದ ಹಿರಿಮೆಯನ್ನೂ ತ್ಯಾಗದ ಮಹಿಮೆ ಯನ್ನೂ ಕೊಂಡಾಡುತ್ತಾರೆ. ಹಾಲು ಬೆಣ್ಣೆ ಬೆಲ್ಲ ಕಿಚ್ಚಡಿಯ ನೇಮಕ್ಕಿಂತ ಅಂಬಲಿಯ ನೇಮದಿಂದ ಸಮಾಜದಲ್ಲಿ ಸಮತೋಲನ ಸಿದ್ಧಿಸುತ್ತದೆಂಬುದು ಅವರ ಖಚಿತಾಭಿಪ್ರಾಯ. ಶ್ರೀಮಂತರು ಭೋಗ ಜೀವನ ಮತ್ತು ಹೊಟ್ಟೆಬಾಕತನಗಳನ್ನು ತೊರೆದರೆ ಎಲ್ಲ ಬಡ ಜನರ ಹಸಿವು ನೀಗುತ್ತದೆನ್ನುವ ಸತ್ಯ ಅವರ ಈ ಮಾತುಗಳಿಂದ ಮೊಗದೋರುತ್ತದೆ.

ನೈತಿಕ ಜೀವನದಿಂದಲ್ಲದೆ ಸಾಮಾಜಿಕ ಶಾಂತಿ ಎಂದೆಂದಿಗೂ ಸಾಧ್ಯವಿಲ್ಲವೆಂಬುದು ಬಸವಣ್ಣನವರ

ಘಾವನೆ. ಎಲ್ಲ ಪಾಪಗಳಿಗೂ ಅಹಂಕಾರವೇ ಮೂಲ. ಆದ್ದರಿಂದ ಅವರು ಶಿಸ್ತು ಸಂಯಮಗಳಿಗೆ ಪ್ರಾಶಸ್ತ್ಯ ನೀಡುತ್ತಾರೆ. ಮನುಷ್ಯ ತನ್ನ ದೌರ್ಬಲ್ಯವನ್ನು ಮರೆತು ನೆರೆಮನೆಯವರ ಕುಂದನ್ನೆತ್ತಿ ತೋರಿಸುವಾಗ, ಸಹಜ ವಾಗಿಯೇ ವಿರಸ ತಲೆದೋರುತ್ತದೆಂದು ಅವರು ನಿಜ ನುಡಿಯುತ್ತಾರೆ ಪರದ್ರವ್ಯದಾತೆ ಪರಸ್ತ್ರೀ ವ್ಯಸನವೂ ಹಾನಿಕಾರಕವೆಂದು ಅವರು ಒತ್ತಿ ಹೇಳುತ್ತಾರೆ. 'ಛಲ ಬೇಕು ಶರಣಂಗೆ ಪರ ಧನವ ನೊಲ್ಲೆನೆಂಬ, ಛಲ ಬೇಕು ಶರಣಂಗೆ ಪರಸತಿಯ ನೊಲ್ಲೆನೆಂಬ' ಎಂದು ಹೇಳುವಲ್ಲಿ ಅವರು ಛಲದ ಆವಶ್ಯಕತೆಯನ್ನು ಗುರುತಿಸುತ್ತಾರೆ. ಬಸವಣ್ಣನವರು ಬಂಡಾಯಗಾರರಾಗಿ, ಸಂಪ್ರದಾಯ ಜಡತೆಗೆ, ಪಟ್ಟಭದ್ರ ಹಿತಾಸಕ್ತರಿಗೆ, ಶೋಷಕರಿಗೆ ಸಿಂಹ ಸ್ವಪ್ನವಾಗುತ್ತಾರೆ.

ರಾಜಕೀಯಾರ್ಥಿಕ ಕ್ರಾಂತಿ

ಓಬಿರಾಯನ ಕಾಲದ ವ್ಯವಸ್ಥೆಯನ್ನು ಭೇದಿಸದ ಹೊರತು ರಾಜಕೀಯ ಹಾಗೂ ಆರ್ಥಿಕ ಕ್ರಾಂತಿ ಸಾಧ್ಯ ವಿಲ್ಲ; ಅದು ಸಾಧ್ಯವಿಲ್ಲದಾಗ, ಸಮಾಜದಲ್ಲಿ ಹಿಂದುಳಿ ದವರ ಉದ್ಧಾರ ಈಡೇರುವುದಿಲ್ಲವೆಂಬುದು ಬಸವಣ್ಣ ನವರ ನಿಲವು. ರಾಜಕೀಯ ಹಾಗೂ ಆರ್ಥಿಕ ವ್ಯವಹಾರ ಗಳಲ್ಲಿ ಧರ್ಮಕ್ಕೆ ಸ್ಥಾನವಿಲ್ಲವೆಂಬುದು ಚಾಣಕ್ಯನಂಥ ರಾಜನೀತಿಜ್ಞರ ವಿಚಾರ. ಧರ್ಮದ ತಳಹದಿಯಿಲ್ಲದ ರಾಜಕೀಯ ಹೊಲಸಾಗುತ್ತದೆಂಬುದು ಬಸವೇಶ್ವರರಂಥ ಮಹಾತ್ಮರ ಆಲೋಚನೆ. ಧರ್ಮದ ಕಡಿವಾಣವಿಲ್ಲದ ರಾಜಕೀಯದ ಕುದುರೆ ಸವಾರರನ್ನು ಎಲ್ಲೆಂದರಲ್ಲಿ ಕೆಡವಿ

ಬಿಡಬಹುದು. ಆದ್ದರಿಂದಲೇ ಅವರು ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳ ಶುದ್ಧೀಕರಣಕ್ಕೆ ಆದ್ಯಗಮನ ಹರಿಸಿದ್ದು. ರಾಜಕೀಯವೂ ಬದುಕಿನ ಒಂದು ಮುಖ ಮಾತ್ರವಲ್ಲ, ಎಲ್ಲವೂ ಆಗಿರುವುದರಿಂದ ಅದು ರೋಗಗ್ರಸ್ತವಾಗದಂತೆ ಜನ ಎಚ್ಚರದಿಂದಿರಬೇಕಾಗುತ್ತದೆ. ಸರ್ವೋದಯವೇ ಅದರ ಗುರಿಯಾಗಿರಬೇಕು.

ಸಮಾಜದಲ್ಲಿ ನೀತಿ, ರಾಜಕೀಯದಲ್ಲಿ ಧರ್ಮ ನೆಲೆಗೊಂಡದ್ದಾದರೆ ಮನುಕುಲದ ಬದುಕು ಹಸನಾಗುತ್ತದೆ, ಸರ್ವೋದಯ ಕೈಗೂಡುತ್ತದೆಂಬುದಾಗಿ ಬಸವಣ್ಣನವರು ಆಲೋಚಿಸಿರಬೇಕು. ಅದಕ್ಕಾಗಿಯೇ ಅವರು ದಂಡನಾಥ ಪದವಿಯನ್ನು ಸ್ವೀಕರಿಸಿದ್ದು. ಆದರೆ ಅವರಿಗೆ ರಾಜಕೀಯ ಕುತಂತ್ರ ಎಳ್ಳಷ್ಟೂ ಗೊತ್ತಿದ್ದಂತಿಲ್ಲ. ಅವರೆಂದೂ ರಾಜನನ್ನಾಗಲಿ ರಾಜತ್ವವನ್ನಾಗಲಿ ವಿರೋಧಿಸಿದವರಲ್ಲ. ಪ್ರಾರಂಭದಲ್ಲಂತು ಅವರ ಮತ್ತು ಬಿಜ್ಜಳನ ಸಂಬಂಧ ಸುಮಧುರವಾಗಿತ್ತು. 'ಅಯ್ಯಾ ಎಂದಡೆ ಸ್ವರ್ಗ, ಎಲವೊ ಎಂದಡೆ ನರಕ' ಎಂದು ನುಡಿಯುವ ಅವರಿಗೆ ವಿನಯಾಚಾರವನ್ನು ಹೇಳಿಕೊಡಬೇಕಾಗಿಲ್ಲ. 'ಪರಚಿಂತೆ ನಮಗೇಕಯ್ಯ ನಮ್ಮ ಚಿಂತೆ ನಮಗೆ ಸಾಲದೆ ? ಕೂಡಲಸಂಗಯ್ಯ ಒಲಿದಾನೋ ಒಲಿಯನೋ ಎಂಬ ಚಿಂತೆ ಹಾಸಲುಂಟು ಹೊದೆಯಲುಂಟು' ಎಂದು ಹೇಳಿಕೊಳ್ಳುವ ಅವರಿಗೆ ರಾಜಕೀಯದ ಕಿತಾಪತಿಯೆಂದರಾಗದು. ಸುತ್ತ ಮುತ್ತ ನಡೆಯುತ್ತಿದ್ದ ಸಂಚು ಹೊಂಚುಗಳು ಅವರ ಗಮನಕ್ಕೆ ಬಂದಾಗಲೂ ಅವುಗಳ ಬಗ್ಗೆ ಅವರು ತಲೆ ಕೆಡಿಸಿಕೊಳ್ಳುವುದಿಲ್ಲ. 'ಲೋಕದ ಡೊಂಕ ನೀವೇಕೆ ತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ ;

ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ ; ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ಕೂಡಲ ಸಂಗಮದೇವ' ಎಂದು ಹೇಳುವಲ್ಲಿ ಅವರ ಅಲಿಪ್ತ ನೀತಿ ಎದ್ದು ಕಾಣು ತ್ತದೆ. ರಾಜಕೀಯದ ಮೂರೆಲೆಯಾಟದ ಮೂಲಕ ಜೀವನಯಾಪನೆ ಮಾಡಿಕೊಳ್ಳಬಹುದಾದ ಜನ ಬಸವಣ್ಣ ನವರ ಈ ನೀತಿಯನ್ನು ಅನುಸರಿಸಿದ್ದೇ ಆದರೆ ವೈಷಮ್ಯ ಗಳು ತಾವಾಗಿಯೇ ಕರಗಿಹೋಗುತ್ತವೆ. ಬೃಹದ್ರಾಷ್ಟ್ರ ಗಳಿಗೂ ಈ ಮಾತು ಅನ್ವಯವಾಗುತ್ತದೆ.

ಅಧಿಕಾರ ಲಾಲಸೆ ಧನಲೋಭಗಳಿರುವ ತನಕ ಮನುಷ್ಯ ಆತ್ಮ ಗೌರವವನ್ನುಳಿಸಿಕೊಳ್ಳಲಾರ ; ಧರ್ಮ ಶ್ರದ್ಧೆಯನ್ನು ಕಾಪಾಡಿಕೊಳ್ಳಲಾರನೆಂಬುದು ಬಸವಣ್ಣ ನವರಿಗೆ ತಿಳಿದ ಸಂಗತಿ. ಎಂಥ ಸಂದರ್ಭದಲ್ಲಿಯೂ ಅವರು ಇವನ್ನು ಬಿಟ್ಟುಕೊಟ್ಟವರಲ್ಲ.

> ಬ್ರಹ್ಮ ಪದವಿಯನೊಲ್ಲೆ ವಿಷ್ಣುಪದವಿಯನೊಲ್ಲೆ । ರುದ್ರ ಪದವಿಯನೊಲ್ಲೆ
>
> ಮತ್ತಾವ ಪದವಿಯನೊಲ್ಲೆನಯ್ಯಾ ! ಕೂಡಲ ಸಂಗಮ ದೇವಾ
>
> ನಿಮ್ಮ ಸದ್ಭಕ್ತರ ಪಾದವನರಿದಪ್ಪ ಮಹಾಪದವಿಯನೆ ಕರುಣಿಸಯ್ಯ

ಎಂದವರು ತಮ್ಮ ಇಷ್ಟದೇವರಲ್ಲಿ ಪ್ರಾರ್ಥನೆ ಸಲ್ಲಿಸು ತ್ತಾರೆ. ತಮ್ಮ ಆದರ್ಶ ಸಾಧನೆಗೆ ದಂಡಾಧಿಕಾರಿ ಪದವಿ ಅಡ್ಡಬಂದರೆ ಅದನ್ನು ತೊರೆಯಲೂ ಅವರು ಸಿದ್ಧ. ಅರಸು ಮುನಿದಡೆ ನಾಡೊಳಗಿರಬಾರದಯ್ಯ ಎಂದು ಕೊಂಕದೆ ಕುನಿಯದೆ ಹೇಳಬಡುತ್ತಾರೆ.

ಅಲಿಪ್ತನೀತಿ ಅವರದಾದರೂ, ಮನುಷ್ಯ ಸ್ವಭಾವವನ್ನು ಬಲ್ಲವರು, ಲೋಕಾನುಭವದಲ್ಲಿ ಪರಿಶ್ರಮವುಳ್ಳವರು. 'ಅರ್ಥವುಳ್ಳವರೆಲ್ಲ ಅರಸಿಂಗಂಜುವರಯ್ಯ', 'ತುಡುಗಿನಾಯನು ಹಿಡಿತಂದು ಸಾಕಿದಡೆ ತನ್ನೊಡೆಯಂಗೆ ಬಗುಳುವಂತೆ ಕಾಣ', 'ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ ಅಧರ್ಮದಲ್ಲಿ ಕೆಡಿಸುವ ಸುತನಂತೆ'—ಇವು ರಾಜಕೀಯ ಜೀವನದಲ್ಲಿ ನಿತ್ಯ ಸತ್ಯಗಳಾಗುಳಿದಿವೆ. 'ಭಕ್ತರ ಕಂಡಡೆ ಬೋಳಪ್ಪಿರಯ್ಯ, ಸವಣರ ಕಂಡಡೆ ಬತ್ತಲೆಯಪ್ಪಿರಯ್ಯ, ಹಾರುವರ ಕಂಡಡೆ ಹರಿನಾಮವೆಂಬಿರಯ್ಯ, ಅವರವರ ಕಂಡಡೆ ಅವರವರಂತೆ' ಎಂಬ ನುಡಿಗಳು ಇಂದಿನ ಪಕ್ಷಾಂತರಿಗಳನ್ನು ನೋಡಿ ಹೇಳಿದಂತಿವೆ. ಹಿಂಸೆ ಅನ್ಯಾಯ ಭ್ರಷ್ಟಾಚಾರಗಳನ್ನೂ ರಾಜಕೀಯ ವಾತಾವರಣದ ಮಾಲಿನ್ಯವನ್ನೂ ಕಂಡು ಬೇಸರಗೊಂಡ ಬಸವಣ್ಣನವರು 'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ' ಎಂದು ಹೇಳಿರಲಿಕ್ಕೆ ಸಾಕು. ರಾಜಕೀಯ ಜೀವನ ಹಸನಾಗಬೇಕಾದರೆ ವ್ಯಷ್ಟಿ ಸಮಷ್ಟಿಗಳೆರಡರಲ್ಲಿಯೂ ಚಾರಿತ್ರ್ಯ ಶುದ್ಧಿಯಿರಬೇಕೆಂಬುದು ಅವರ ಅಭಿಲಾಷೆ.

ಬಸವಣ್ಣನವರ ರಾಜನೀತಿಯಲ್ಲಿ ಲಿಂಗಭೇದವಿಲ್ಲದ ವ್ಯಕ್ತಿಸ್ವಾತಂತ್ರ್ಯಕ್ಕೆ, ಜಾತಿವರ್ಣಗಳಿಲ್ಲದ ಸರ್ವಸಮಾನತೆಗೆ ಮೊದಲ ಸ್ಥಾನ. ವಿಚಾರ ಸ್ವಾತಂತ್ರ್ಯ ಮಾನವನ ಮೂಲಭೂತ ಹಕ್ಕು ಎಂಬುದನ್ನು ಅನುಭವ ಮಂಟಪದ ಚರ್ಚೆಗಳ ಮೂಲಕ ಎತ್ತಿ ಹಿಡಿದಿದ್ದಾರೆ. ಧಾರ್ಮಿಕ ಕ್ಷೇತ್ರವಾಗಲಿ, ರಾಜಕೀಯಕ್ಷೇತ್ರವಾಗಲಿ, ಬೇರೆಯಾವುದೇ ಕ್ಷೇತ್ರವಾಗಲಿ ವಿಚಾರ ಸ್ವಾತಂತ್ರ್ಯಕ್ಕೆ ಮಿತಿ ಹಾಕಿಯೇ

ಪ್ರಗತಿ ನಿಲ್ಲುತ್ತದೆಂಬುದು ಅವರ ನಿರ್ಣಯ. ಅವರು ವ್ಯಕ್ತಿನಿಂದೆಯನ್ನು ಸಹಿಸರು; ಆತ್ಮಸ್ತುತಿಯನ್ನೊಲ್ಲರು.

ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಗಳು ಅವಳಿ ಜವಳಿಗಳಿದ್ದಂತೆ. ಒಂದರ ಏರಿಳಿತ ಮತ್ತೊಂದರ ಮೇಲೆ ಪ್ರಭಾವ ಬೀರುತ್ತದೆ; ಒಂದರ ರೋಗ ಮತ್ತೊಂದಕ್ಕೆ ಅಂಟಿಕೊಳ್ಳುತ್ತದೆ. ಅದರಲ್ಲೂ ಆರ್ಥಿಕ ಸ್ಥಿತಿಗತಿ ರಾಜಕೀಯ ವ್ಯವಸ್ಥೆಯ ಆರೋಗ್ಯ ಅಥವಾ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಆದ್ದರಿಂದಲೇ ಬಸವಣ್ಣನವರ ವಚನಗಳಲ್ಲಿ ಆರ್ಥಿಕ ವಿಚಾರಧಾರೆಗೆ ವಿಶೇಷ ಸ್ಥಾನವಿದೆ. ಕೆಲವರ ಶ್ರೀಮಂತಿಕೆ ಹಲವರ ದಾರಿದ್ರ್ಯಕ್ಕೆ ಮೂಲವಾಗುತ್ತದೆ. ಲಜ್ಜೆಗೆಟ್ಟ ನೀತಿ ಬಿಟ್ಟ ಜನ ಹಣವನ್ನು ಕೊಳ್ಳೆಹೊಡೆಯುತ್ತಾರೆ. ಅವರಿಗೆ ಧರ್ಮಪ್ರಜ್ಞೆಯಿಲ್ಲ, ಅನುಕಂಪವಿಲ್ಲ. ತಮ್ಮ ಕಣ್ಮುಂದೆಯೇ ಜನ ಹಸಿವಿನಿಂದ ಸಾಯುತ್ತಿದ್ದರೂ, ಅವರ ಶೋಕಿಗೆ ಇತಿಮಿತಿಯಿಲ್ಲ. ಇದು ದೈವ ದ್ರೋಹ, ಆತ್ಮದ್ರೋಹ. ಪಿತೃದ್ರೋಹ, ಸಮಾಜದ್ರೋಹ, ವಿಶ್ವದ್ರೋಹ. ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲದಲ್ಲಿಯೂ ದೊರೆ ಪುರೋಹಿತ ಹಣವಂತ ಈ ಮೂವರೂ ಜತೆಗೂಡಿ ಇಡೀ ಸಮಾಜವನ್ನೇ ಲೂಟಿ ಮಾಡಿದ್ದಾರೆ. ಈಗಂತು ಅವರ ಗುಂಪಿಗೆ ಅಧಿಕಾರಿಗಳನ್ನು ಸೇರಿಸಬೇಕಾಗಿದೆ. ಈ ಎಲ್ಲರ ಮೇಲೆಯೂ ಬಸವಣ್ಣನವರಿಗೆ ಕಣ್ಣಿದೆ. ಅವರು ನೀತಿವಂತರಾದರೆ ಸಮಾಜಕ್ಕೆ ಹಿತವಾಗುತ್ತದೆಂಬುದು ಅವರು ದಯೆಗೈದಿರುವ ಬೀಜ ಮಂತ್ರ.

ಗಾಂಧೀಜಿಯಂತೆಯೇ ಅವರು ಸಿರಿವಂತರನ್ನು ಗೇಲಿಮಾಡುವುದಿಲ್ಲ. ಎಲ್ಲರಿಗೂ ಸಾಮಾಜಿಕವಾಗಿ

ಸಮಾನತೆ ಇರಬೇಕು, ಸಮಾನಾವಕಾಶಗಳಿರಬೇಕೆಂಬುದ ರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ಆದರೆ ಮನುಷ್ಯನಿಂದ ಮನುಷ್ಯನಿಗೆ ಬೌದ್ಧಿಕ ವ್ಯತ್ಯಾಸವಿದೆಯಲ್ಲ? ಮನೋಧರ್ಮದಲ್ಲಿ ದೃಷ್ಟಿಯಲ್ಲಿ ತಾರತಮ್ಯವಿದೆಯಲ್ಲ? ಗ್ರಹಣ ಶಕ್ತಿಯಲ್ಲಿ, ಕ್ರಿಯಾಶೀಲತೆಯಲ್ಲಿ, ಕಾರ್ಯೋತ್ಸಾಹದಲ್ಲಿ ಅಸಮತೆ ಇದೆಯಲ್ಲ? ಅರಿಷಡ್ವರ್ಗಗಳು ಒಬ್ಬೊಬ್ಬನನ್ನು ಒಂದೊಂದು ರೀತಿಯಾಗಿ ಕಾಡುತ್ತವೆಯಲ್ಲ? ಒಬ್ಬ ಕೋಪಿ, ಮತ್ತೊಬ್ಬ ಶಾಂತ; ಒಬ್ಬ ಸಂಯಮಿ, ಮತ್ತೊಬ್ಬ ಲಂಪಟ; ಒಬ್ಬ ಜಾಣ, ಮತ್ತೊಬ್ಬ ಕೋಣ; ಒಬ್ಬ ಸಭ್ಯ, ಮತ್ತೊಬ್ಬ ಅಸಭ್ಯ; ಎಲ್ಲಿ ನೋಡಿದರೂ ದ್ವಂದ್ವ ಮಾತ್ರವಲ್ಲ, ಬಹುತ್ವ. ಈ ಅಂತರ ನಿಸರ್ಗ ಸಹಜವೆಂದೇ ತೋರದಿರದು. ಸಮನ್ವಯ ತತ್ವದ ಮೂಲಕ ಈ ಅಂತರವನ್ನು ಸರಿಗೊಳಿಸಲು ಈ ಇಬ್ಬರು ಮಹಾತ್ಮರೂ ಪ್ರಯತ್ನಿಸುತ್ತಾರೆ. ಅಧಿಕಾರವುಳ್ಳವರಾಗಲಿ ಹಣವುಳ್ಳವರಾಗಲಿ ಸಮಾಜದ ಧರ್ಮದರ್ಶಿಗಳಂತಿರಬೇಕು. ಹಣ ಅಧಿಕಾರ ಶಿವನಿಂದ ಬಂದುವು; ಶಿವನ ಸೊಮ್ಮು ಅವು; ಅವು ಶಿವನವರಿಗೆ ಸಲ್ಲಬೇಕು; ಶಿವನವರೆಂದರೆ ಪತಿತರು, ದೀನರು. ಅವರಿಗೆ ಸಲ್ಲದ ಹಣ ಪಾಷಾಣ. ಬಸವಣ್ಣನವರ ತ್ರಿವಿಧ ದಾಸೋಹ ತತ್ವವಾಗಲಿ, ಗಾಂಧೀಜಿಯ ಧರ್ಮದರ್ಶಿತತ್ವವಾಗಲಿ ಒಂದೆ. 'ಹಡೆಮೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು', 'ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು', 'ಆಯುಷ್ಯವುಂಟು ಪ್ರಳಯವಿಲ್ಲೆಂದು ನೆಲನನಗೆನು ಮಡುಗದಿರಾ', 'ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ'. ಎನ್ನುವಲ್ಲಿ ಉತ್ಪನ್ನ ಅನುಭೋಗ ಮತ್ತು

ಹಂಚಿಕೆಗಳ ತತ್ತ್ವವನ್ನು ಬಸವಣ್ಣನವರು ಗಾಂಧೀಜಿಗಿಂತ ಹೆಚ್ಚು ವಿಶದವಾಗಿ ನಿರೂಪಿಸಿದ್ದಾರೆಂದೇ ಹೇಳಬಹುದು.

ಸಿರಿವಂತಿಕೆ ಅಧಿಕಾರಗಳು ಮನುಷ್ಯನನ್ನು ಅನೀತಿ ಅಸತ್ಯ ಆತ್ಮವಿನಾಶಗಳ ಕಡೆಗೆ ಒಯ್ಯುತ್ತವೆಂಬುದನ್ನು ಬಸವಣ್ಣನವರು 'ಆನೆಯನೇರಿಕೊಂಡು ಹೋದಿರೆ ನೀವು' ಎಂದು ಮೊದಲಾಗುವ ವಚನದಲ್ಲಿ ಮಾರ್ಮಿಕವಾಗಿ ಬಣ್ಣಿಸಿದ್ದಾರೆ. ಅವನ್ನು ಜನತೆಯ ಕಲ್ಯಾಣಕ್ಕಾಗಿ ಬಳಸಬೇಕೇ ಹೊರತು, ಅದರ ದಮನಕ್ಕಾಗಲಿ ಸ್ವಾರ್ಥಕ್ಕಾಗಲಿ ಶೋಷಣೆಗಾಗಲಿ ಉಪಯೋಗಿಸಬಾರದೆಂಬುದೇ ಅವರ ತೀರ್ಮಾನ. ಅವು ತೀರಿದುವೆಂದರೆ, ಅವರು ತೊತ್ತಿಗೂ ಬೇಡವಾಗುತ್ತಾರೆ. 'ನೆಲನಾಳ್ವನ ಹೆಣವೆಂದಡೆ ಒಂದಡಿಕೆಗೆ ಕೊಂಬುವರಿಲ್ಲ ಕಾಣಾ' ಎಂಬ ಸಂಗತಿಯನ್ನವರು ಬಲ್ಲರು.

ಸೇವೆಗಾಗಿ ಅಧಿಕಾರ, ಹಂಚಿಕೆಗಾಗಿ ಹಣ, ಉಪಯೋಗಗೊಳ್ಳುವುದಾದರೆ ಅಶಾಂತಿ ಅನೀತಿಗಳಿಗೆ ಅವಕಾಶವೇ ಇರುವುದಿಲ್ಲ. ನಿರಂಕುಶಾಧಿಕಾರವನ್ನು ಚಲಾಯಿಸುವುದಾದರೆ ಜನ ದಂಗೆಯೇಳುತ್ತಾರೆ ; ಉಳ್ಳವರ ಮನೆಗೆ ಲಗ್ಗೆ ಹಾಕಲು ಬಡವರು ಕಾದಿರುತ್ತಾರೆ. ಅಧಿಕಾಂಶವನ್ನು ಇಲ್ಲದವರಿಗೆ ಹಂಚಬೇಕಾದ್ದು ನಿಸರ್ಗಧರ್ಮ. 'ಕಾಗೆ ಒಂದಗುಳ ಕಂಡರೆ ಕರೆಯದೆ ತನ್ನ ಬಳಗವನು, ಕೋಳಿಯೊಂದು ಕುಟುಕ ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ ?' ತ್ಯಾಗಶೀಲನಲ್ಲದ ಮನುಷ್ಯ ಕಾಗೆ ಕೋಳಿಗಿಂತಲೂ ಹೀನವೆಂದು ಬಸವಣ್ಣ ಹೇಳುತ್ತಾರೆ. ನೆರೆಹೊರೆಯವರಿಗೆ ಕೊಟ್ಟು ಉಣ್ಣುವುದರಲ್ಲಿ ಆನಂದವಿದೆ.

ದಾಸೋಹತತ್ವದ ಗುರಿಯೇ ಹಂಚಿಕೆ. ಅಹಂಕಾರ ತ್ಯಾಗ, ಭೋಗ ನಿರಾಕರಣೆ, ಶರಣಾಗತಿ, ಭ್ರಾತೃಭಾವ ಗಳು ಈ ತತ್ತ್ವದ ಅನುಷ್ಠಾನದಿಂದ ಫಲಿಸುತ್ತವೆ. ಆವಶ್ಯಕತೆಗಿಂತ ಮಿಗಿಲಾದ ದ್ರವ್ಯವನ್ನೆಲ್ಲ ಸಮಾಜ ಕ್ಕೊಪ್ಪಿಸಬೇಕೆಂಬುದೇ ಇವರ ಮೂಲ ರಹಸ್ಯ. ಅಂದರೆ ಯಾರಲ್ಲಿಯೇ ಆಗಲಿ, ಹೆಚ್ಚುವರಿ ಸ್ವತ್ತು ಏನಿದೆಯೋ ಅದೆಲ್ಲ ಸಮಾಜದ ಆಸ್ತಿ ಎಂಬುದು ಬಸವಣ್ಣನವರ ಅಭಿಪ್ರಾಯ. ಅನೀತಿಯಿಂದ ಬಂದ ಹಣ ಸತ್ಪಾತ್ರಕ್ಕೆ ಸಲ್ಲದೆಂದು ಅವರು ಸ್ಪಷ್ಟಪಡಿಸುತ್ತಾರೆ. ಅನ್ಯಾಯ ಅಧರ್ಮಗಳ ಮೂಲಕ ಹಣ ಸಂಪಾದಿಸಬಾರದೆಂಬುದೇ ಈ ಮಾತಿನ ಭಾವ. ಅಷ್ಟೇ ಅಲ್ಲ, 'ಹೊನ್ನಿನೊಳ ಗೊಂದೊರೆಯ, ಸೀರೆಯೊಳಗೊಂದೆಳೆಯ, ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪುರಾತನ ರಾಣೆ! ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ,' 'ಕದ್ದು ತಿಂದರೆ ಕೈ ಹಿಡಿದೊಮ್ಮೆ ಬಡಿದು ತುಡುಗುಣಿ ತನವ ಬಿಡಿಸಯ್ಯಾ' ಎಂಬುದು ಅವರ ಸಂಕಲ್ಪ. ಯಾವ ವೃತ್ತಿಯೂ ಕೀಳಲ್ಲ, ಯಾವ ವ್ಯಕ್ತಿಯೂ ಮೇಲಲ್ಲ. ಕಷ್ಟದಿಂದ ದುಡಿಯದ ಹಣ ಕಳ್ಳಮಾಲಾಗುತ್ತದೆ. ನಾಳೆಗೆಂದು ಚೂರುಪಾರು ಸಂಗ್ರಹಿಸಿದರೂ ಬೇರೊಬ್ಬರ ಪಾಲನ್ನು ಕಸಿದುಕೊಂಡಂತಾಗುತ್ತದೆ. ಅಂಬಲಿಯ ನೇಮವನ್ನು ಪಾಲಿಸಿದ್ದಾದರೆ ಯಾರೂ ಹಸಿವಿನಿಂದ ಸಾಯಬೇಕಾಗಿಲ್ಲ—ಈ ನಾಲ್ಕು ಸೂತ್ರಗಳಲ್ಲಿ ಬಸವಣ್ಣ ನವರ ಸಮಾಜವಾದದ ತಿರುಳಿದೆ. ಇತ್ತೀಚಿನ ಸಾಮ್ಯ ವಾದಿಗಳಾಗಲಿ, ಸಮಾಜವಾದಿಗಳಾಗಲಿ ಇವಕ್ಕಿಂತ ಮುಂದೆ ಹೋಗಿಲ್ಲವೆಂದರೆ ಅತಿಶಯೋಕ್ತಿಯಾಗದು.

ಎಲ್ಲ ಆರ್ಥಿಕ ವಿಚಾರಗಳನ್ನು ಉತ್ಪತ್ತಿ ಹಂಚಿಕೆ ಎಂಬ ಎರಡು ಪದಗಳಲ್ಲಿ ಅಡಕ ಮಾಡಬಹುದು. ಅವೆರಡನ್ನೂ ಸರಿಯಾಗಿ ನಿರ್ವಹಿಸಿದ್ದಾದರೆ ಆರ್ಥಿಕ ಸಮಸ್ಯೆಗಳೇ ಏಳುವುದಿಲ್ಲ. ಕಾಯಕ ದಾಸೋಹಗಳೆಂಬ ಅವಳಿ ತತ್ತ್ವಗಳಲ್ಲಿ ಅತ್ಯಂತ ಆಧುನಿಕವೆನ್ನಬಹುದಾದ ಆರ್ಥಿಕ ವಿಚಾರಗಳು ಹುದುಗಿವೆ. ಬಸವಣ್ಣನವರು ಜಗತ್ತಿಗೆ ನೀಡಿದ ಎರಡು ಅದ್ಭುತ ಕೊಡುಗೆಗಳಿವು. ಶಿವಶರಣರು ಕಾಯಕಕ್ಕೆ ಕೊಟ್ಟಿರುವ ಸ್ಥಾನವನ್ನು ಗಮನಿಸಿದಾಗ ಅದೇ ಬದುಕು, ಅದೇ ಇಹಪರ ಸಾಧನ, ಅದೇ ಗುರಿ ಹಾಗೂ ಮಾರ್ಗ, ಅದೇ ಸರ್ವಸ್ವವೆಂಬುದು ತೋರದಿರದು. ಬುದ್ಧಿಯ ಜತೆಗೆ ವೃತ್ತಿಗೌರವವುಳ್ಳವರು ನಿರುದ್ಯೋಗಿಗಳಾಗಿರಬೇಕಾಗಿಲ್ಲ. ಕಾಯಕದ ಮೂಲಕ ಬುದ್ಧಿ ಅರಳುತ್ತದೆ, ಜ್ಞಾನ ವರ್ಧಿಸುತ್ತದೆ. ಮಾಡುವವನು ಮಾಟದಲ್ಲಿಯೇ ಒಂದಾಗುವುದರಿಂದ ಲಿಂಗಾಂಗ ಸಾಮರಸ್ಯಕ್ಕೆ, ಪರಮಾನಂದಾನುಭವಕ್ಕೆ ಅದೇ ದಾರಿಯಾಗುತ್ತದೆ. ಸಮರ್ಪಣದ ಮೂಲಕ ಶಿವಭಾವ ಉದಿಸುತ್ತದೆ. ಅದರಲ್ಲಿ ಸರ್ವಯೋಗಗಳೂ ವಿಲೀನಗೊಳ್ಳುತ್ತವೆ. ಅದೇ ಪರಮಪೂಜೆಯಾದ್ದರಿಂದ ಅದರಲ್ಲಿ ನಿರತನಾದವನು ಲಿಂಗಪೂಜೆಯನ್ನು ತೊರೆಯಬಹುದು, ಗುರುವನ್ನು ಗಮನಿಸದಿರಬಹುದು. ಸತ್ಯಶುದ್ಧ ಕಾಯಕ ಸೃಜನಾತ್ಮಕವೂ ಅಹುದು. ಕಲಾತ್ಮಕವೂ ಅಹುದು. ಬುದ್ಧಿ ಭಾವಕ್ರಿಯೆಗಳ ಸಮ್ಮಿಲನವೇ ಕಾಯಕ. ಅದರಿಂದಲೇ ಪೂರ್ಣಜೀವನ ವಿಕಾಸ ಸಾಧ್ಯ. ಕಾಯಕವಿಲ್ಲದೆ ಬೊಜ್ಜು ಬೆಳೆಸುವುದೆಂತು ಪಾಪಕರವೋ, ಯಾಚನೆಯಿಂದ ಜೀವನ ಹೊರೆಯುವುದೂ ಅಂತೆಯೇ ಅವಹೇಳನಕರವಾದದ್ದು.

ಕ್ರಿಯಾತ್ಮಕವಲ್ಲದ ಜೀವನ ಜಡವಾಗುತ್ತದೆ. ಸೋಮಾರಿತನ ಸೃಷ್ಟಿನಿಯಮಕ್ಕೆ ವಿರುದ್ಧ. ಶ್ರದ್ಧಾಭಕ್ತಿಗಳಿಂದ ಮಾಡುವ ಕಾಯಕವೆಲ್ಲವೂ ಪರಿಶುದ್ಧವಾದದ್ದು; ಶಿವಾರ್ಪಣೆಗೆ ಯೋಗ್ಯವಾದದ್ದು. ಬಸವಣ್ಣನವರ ಈ ವಿಚಾರಧಾರೆ ಇಂದಿಗೂ ಪ್ರಸ್ತುತ, ಅದರ ಆಚರಣೆಯೇ ಅನೇಕ ಆರ್ಥಿಕ ಸಮಸ್ಯೆಗಳಿಗೆ ಪರಿಹಾರವೆಂದು ಹೇಳಬಹುದಾಗಿದೆ.

ಶೈಕ್ಷಣಿಕ ಕ್ರಾಂತಿ

ಅಷ್ಟಾವರಣದಲ್ಲಿ ಗುರುವಿಗೆ ಮೊದಲ ಸ್ಥಾನ. ಗುರು ಪರಬ್ರಹ್ಮನ ಅಥವಾ ಪರಶಿವನ ನರರೂಪವೆಂಬುದು ಶರಣರ ನಂಬಿಕೆ. ಉಪದೇಶ ಆಚರಣೆಗಳ ಮೂಲಕ ಶಿಷ್ಯನಲ್ಲಿ ಹುದುಗಿರುವ ಶಕ್ತಿಗಳನ್ನು ಎಚ್ಚರಿಸುವವನೇ ಗುರು; ಲೋಕಕಲ್ಯಾಣವನ್ನೇ ಸದಾ ಚಿಂತಿಸುತ್ತ, ತನ್ನ ಚಿಂತನಾನುಭವಗಳನ್ನು ಜಗತ್ತಿಗೆ ಧಾರೆಯೆರೆಯುವವನೇ ಪರಮಗುರು. ಕೇವಲ ಹಿಡಿಮಂದಿಗೆ ಮೀಸಲಾದ ವಿದ್ಯೆ ಸುವಿದ್ಯೆಯಲ್ಲ. ಕಲಿತ ಹಿಡಿಮಂದಿಯಿಂದ ನಾಡಿನ ಕಲ್ಯಾಣ ಪೂರ್ಣವಾಗದು; ಸಂಸ್ಕೃತಿ ಸರ್ವಾಂಗ ಸುಂದರವಾಗಿ ವರ್ಧಿಸಲಾರದು. ಶ್ರೀಸಾಮಾನ್ಯರಿಗೂ ಜ್ಞಾನದಾನ ಮಾಡಿದಾಗ ಮಾತ್ರ ಸರ್ವೋದಯ ಸಾಧ್ಯವಾಗುತ್ತದೆ, ರಾಷ್ಟ್ರಶಕ್ತಿ ಪರಾಕಾಷ್ಠೆಯನ್ನು ಮುಟ್ಟುತ್ತದೆ. ಇದನ್ನರಿತೇ ಬಸವಣ್ಣನವರು ಶಿಕ್ಷಣವನ್ನು ಸಾರ್ವತ್ರಿಕಗೊಳಿಸಲು ಪ್ರಯತ್ನಿಸುತ್ತಾರೆ. ಮಾತೃ ಹೃದಯವುಳ್ಳ ಅವರು ಮಾತೃ ಭಾಷೆಯ ಮೂಲಕ ಸಾಮಾನ್ಯರಿಗೆ ತಮ್ಮ ಸಂದೇಶವನ್ನು ಮುಟ್ಟಿಸಲು ಅಣಿ

ಯಾಗುತ್ತಾರೆ. ಶಿವಾನುಭವ ಸರ್ವರಿಗೂ ಲಭಿಸಿ, ಸರ್ವರೂ ಶಿವಪಥದಲ್ಲಿ ಸಾಗಲಿ, ಲೋಕ ಶಿವಮುಖ ವಾಗಲಿ ಎಂಬುದೇ ಅವರ ಹಂಬಲ. ಬುದ್ಧನ ನಂತರ ಮಾತೃಭಾಷೆಯ ಮಹತ್ವವನ್ನು ಲೋಕಕ್ಕೆ ಡಂಗುರಿಸಿದ ಮಹಾಶಿಕ್ಷಣತಜ್ಞ ಮನೋವಿಜ್ಞಾನಿ ಆಚಾರ್ಯಶ್ರೇಷ್ಠ ರೆಂದರೆ ಬಸವಣ್ಣನವರು. ಮಾತೃಭಾಷಾ ಮಾಧ್ಯಮದ ಶಿಕ್ಷಣ ಮಾತ್ರ ಅತ್ಯಂತ ಸಾರ್ಥಕವೆಂಬುದಕ್ಕೆ ಆಗಿನ ಕಾಲದಲ್ಲಿ ಹುಟ್ಟಿಕೊಂಡ ನೂರಾರು ಮಂದಿ ವಚನಕಾರರೇ ನಿದರ್ಶನ. ಆತ್ಮವಿಶ್ವಾಸವಾಗಲಿ, ಸ್ವತಂತ್ರ ಚಿಂತನೆ ಯಾಗಲಿ, ವಿಚಾರ ವಿನಿಮಯವಾಗಲಿ, ಆತ್ಮವಿಕಾಸ ವಾಗಲಿ ತಾಯಿನುಡಿಯ ಮೂಲಕವೇ ಸಾಧ್ಯ ಎಂಬುದಕ್ಕೆ ಅನುಭವ ಮಂಟಪದ ಕಾರ್ಯಕಲಾಪಗಳೇ ಸಾಕ್ಷಿಯಾಗಿವೆ. ಆಡು ಮಾತನ್ನು ಸಾಹಿತ್ಯದ ಗದ್ದುಗೆಗೇರಿಸಿ, ವಚನಗಳ ಮೂಲಕ ಅದರ ಕಸುವನ್ನು ಬನಿಯನ್ನು ಹುರುಪನ್ನು ಸೂರೆಗೊಂಡ ಕೀರ್ತಿ ಆ ಕ್ರಾಂತದರ್ಶಿ ಮಹಾ ಪ್ರವಾದಿಗೆ ಸಲ್ಲಬೇಕಾಗಿದೆ.

ಕಾಯಕವೇ ತಳಹದಿಯಾಗುಳ್ಳ ಶಿಕ್ಷಣವನ್ನು ರೂಪಿಸಿ ದವರಲ್ಲಿ ಬಸವೇಶ್ವರರೇ ಮೊದಲಿಗರೆನ್ನಬಹುದು. ಗಾಂಧೀಜಿಯವರ ಮೂಲ ಶಿಕ್ಷಣ ಯೋಜನೆ ಇದಕ್ಕೆ ಹತ್ತಿರವಾದುದು. ಶ್ರಮ ಜೀವನದ ಗೌರವ, ಬುದ್ಧಿಭಾವ ಅಧ್ಯಾತ್ಮ ಕ್ರಿಯಾಶಕ್ತಿಗಳ ಸಹವಿಕಾಸ ಮತ್ತು ನೈತಿಕ ಪ್ರಜ್ಞೆಯ ಹೊಮ್ಮುಗೆ ಕಾಯಕ ಶಿಕ್ಷಣದಿಂದಲ್ಲದೆ ಅನ್ಯವಿಧಾನದಿಂದ ಸಾಧ್ಯವಿಲ್ಲವೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.

ಅನುಭವ ಮಂಟಪವೊಂದು ಮಹಾಶಿಕ್ಷಣ ಕೇಂದ್ರ. ಸಾಕ್ಷರರಿಗೆ ಮಾತ್ರವಲ್ಲ. ನಿರಕ್ಷರರಿಗೂ ಅಲ್ಲಿ ಶಿಕ್ಷಣ ದೊರೆಯುತ್ತಿತ್ತು. ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣ ಏಕಕಾಲದಲ್ಲಿ ಜರುಗುತ್ತಿತ್ತು. ವಿಚಾರ ಸ್ವಾತಂತ್ರ್ಯದ ವಾತಾವರಣದಲ್ಲಿ ವಿಚಾರವಿನಿಮಯವೂ ಜ್ಞಾನಾರ್ಜನೆಯೂ ಸಾಗುತ್ತಿದ್ದುವು. ಭಾಷಣ ಹಾಗೂ ಸಂಭಾಷಣಾ ಪದ್ಧತಿಗಳೆರಡಕ್ಕೂ ಅಲ್ಲಿ ಸಮಾನ ಸ್ಥಾನವಿತ್ತು. ಸಾಮತಿ ದೃಷ್ಟಾಂತ ಕಥೆ ಮತ್ತು ವ್ಯಾಖ್ಯಾನ ವಿಧಾನಗಳೂ ಅಲ್ಲಿ ಚಾಲ್ತಿಯಲ್ಲಿದ್ದುವು. ಗುರು ಶಿಷ್ಯರ ಪರಸ್ಪರ ಅರಿವಿಗೆ ಅಲ್ಲಿ ಅವಕಾಶವಿರುತ್ತಿತ್ತು. ಶೀಲ ಸಂಪಾದನೆ ಹಾಗೂ ಜ್ಞಾನಾರ್ಜನೆಗಳಿಗೆ ಸತ್ಸಂಗವೂ ಮುಖ್ಯವೆನ್ನುವುದನ್ನು ಬಸವೇಶ್ವರರೇ ತೋರಿಸಿಕೊಟ್ಟಿದ್ದಾರೆ. 'ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ ಎನ್ನ ತನುಗುಣವೆಲ್ಲವ ಸುಡದಿಪ್ಪುದೆ ?' 'ಶರಣರ ಸಂಗದಲಿರ್ದು ಶಿವನ ಬೇಡುವ ಹಂಗೇಕಯ್ಯ' 'ಶರಣರ ಸಂಗವಿಲ್ಲದವರ ಕಂಡಡೆ ನಾಚುವೆ' ಎಂದು ಅವರೇ ಹೇಳಿದ್ದಾರೆ.

ಶಿಕ್ಷಣಾರ್ಥಿ ಪಂಚೇಂದ್ರಿಯ ಬ್ರಹ್ಮಚರ್ಯ ವ್ರತವನ್ನು ಕೈಕೊಳ್ಳಬೇಕು ; ಶಿವಶಕ್ತಿಯನ್ನರಿಯದ ಜ್ಞಾನವೆಲ್ಲ ಅಜ್ಞಾನ; ಅಂತರಂಗ ಶುದ್ಧಿ ಶಿಕ್ಷಣದ ಗುರಿಯಾಗಬೇಕು: ಅದು ಅಷ್ಟಮದಗಳನ್ನು ಸುಡುವಂತಿರಬೇಕು. 'ಸೋಹಂ ಎಂದೆನಿಸದೆ ದಾಸೋಹಂ' ಎಂದೆನಿಸಬೇಕು. ನಡೆನುಡಿಗಳಲ್ಲಿ ಬಿರುಕು ಮೂಡಿಸದ ವಿದ್ಯೆಯೇ ಸದ್ವಿದ್ಯೆ. ವಿದ್ಯೆಯಿಂದ ವಿನಯ ಪ್ರಾಪ್ತವಾಗಬೇಕು. 'ನುಡಿದರೆ ಮುತ್ತಿನ ಹಾರದಂತಿರಬೇಕು...ನುಡಿದರೆ ಲಿಂಗ ಮೆಚ್ಚಿ

ಆಹುದಹುದೆನಬೇಕು' ಎನ್ನುವಲ್ಲಿ ಬಸವಣ್ಣನವರು ಮಾತಿನ ಕಲೆಗೂ ಹೆಚ್ಚು ಒತ್ತು ಕೊಡುತ್ತಾರೆ.

ಬಸವಣ್ಣನವರು ಲೌಕಿಕ ಅಲೌಕಿಕ ವಿದ್ಯೆಗಳೆರಡಕ್ಕೂ ಸಮಾನ ಸ್ಥಾನ ಕಲ್ಪಿಸುತ್ತಾರೆ. ಕಾಣದ ಸ್ವರ್ಗಕ್ಕೆ ಗೋಣು ಚಾಚಿ ಬಳಲುವುದಕ್ಕಿಂತ, ಸದಾಚಾರ ವಿಚಾರಗಳ ಮೂಲಕ ಮರ್ತ್ಯದಲ್ಲಿಯೇ ಸ್ವರ್ಗವನ್ನು ಸೃಷ್ಟಿಸಿಕೊಳ್ಳಬೇಕೆಂದು ನುಡಿಯುತ್ತಾರೆ. ಹಸನಾದ ಬಾಳಿಗೆ, ಸಮಾಜದ ಒಳಿತಿಗೆ ಇಂದ್ರಿಯಸಂಯಮ ಅತ್ಯಗತ್ಯವೆಂದರೆ ಹೊರತು ಸಂಸಾರ ಹೇಯವೆಂದು ಹೇಳುವುದಿಲ್ಲ. ಸನ್ಯಾಸವೊಂದೇ ಸ್ವರ್ಗಕ್ಕೆ ರಹದಾರಿ ಎಂದು ಸಾರುವುದಿಲ್ಲ. ಲೋಕದಲ್ಲಿದ್ದುಕೊಂಡೇ, ತ್ರಿಕರಣ ಶುದ್ಧಿಯಾಗಿ ತನ್ನ ಕರ್ತವ್ಯವನ್ನು ಪಾಲಿಸುತ್ತ, ಹೆಣ್ಣು ಹೊನ್ನು ಮಣ್ಣುಗಳು ಮಾಯೆಯೆಂದು ತಿರಸ್ಕರಿಸದೆ ಅವುಗಳಲ್ಲೆಲ್ಲ ಪರಮಾತ್ಮನ ಪ್ರತಿಬಿಂಬವನ್ನು ಕಾಣುತ್ತ, ತನ್ನಗೈಮೆಯಲ್ಲಿ ಶಿವಶಕ್ತಿಯ ಜ್ಯೋತಿಯನ್ನು ಕಾಣುತ್ತ. ಮಾತಿನ ಮೂಲಕ ಮೌನವನ್ನು ಸಾಧಿಸುವಂತೆ ಲೌಕಿಕದ ಮೂಲಕ ಅಲೌಕಿಕವನ್ನು ಸಾಧಿಸುವವನೇ ಮಹಾಮಾನವ ; ಅಂಥ ಮಾನವನ ಸೃಷ್ಟಿಯೇ ಬಸವಣ್ಣನವರ ಕಲ್ಪನೆಯ ಶಿಕ್ಷಣದ ಗುರಿ; ಅವರ. ಮತ್ತು ಸಕಲ ಶಿವಶರಣರ ವಚನಗಳ ಸಂದೇಶವೂ ಇದು.

ಮೌಢ್ಯ ಸಂಪ್ರದಾಯಗಳಿಂದಾಗಿ ಭಾರತೀಯ ಸಮಾಜ ಜಡವಾಗಿದೆಯೆಂಬುದು ಸರ್ವರಿಗೂ ತಿಳಿದಿರುವ ವಿಷಯ. ಅವು ಬುದ್ಧಿವಂತರ ಸುಲಿಗೆಗೆ ಬಂಡವಾಳವಾಗಿವೆ. ಬಡತನಕ್ಕೆ ಅವೂ ಒಂದು ಪ್ರಮುಖ ಕಾರಣ. ಆದ್ದರಿಂದಲೇ ಬಸವಣ್ಣನವರು ಅವನ್ನು ಬೇರು

ಸಮೇತ ಕಿತ್ತೊಗೆಯಲು ಪಣ ತೊಡುತ್ತಾರೆ. ಸ್ವತಂತ್ರ ಭಾವ ವಿಚಾರಕ್ಕೆ ಅವು ಅಡ್ಡಿಯಾಗುತ್ತವೆ. ಅವುಗಳ ಸೆರೆಯಿಂದ ಜನರನ್ನು ಪಾರುಮಾಡದಿದ್ದರೆ ಅವರ ಉದ್ಧಾರ ಸಾಧ್ಯವಾಗದು. ಸಮಾಜದಲ್ಲಿ ಮನೆ ಮಾಡಿಕೊಂಡಿರುವ ಅನಿಷ್ಟಗಳು ಅಳಿಯುವುದಿಲ್ಲವೆಂದು ಬಸವಣ್ಣನವರು ಮೊದಲೇ ತೀರ್ಮಾನಿಸಿಕೊಳ್ಳುತ್ತಾರೆ. ಮಾರಿಮಸಣಿಯರ ಹಿಡಿತದಿಂದ ಜನರನ್ನು ಬಿಡಿಸಿದರೆ ಅವರಲ್ಲಿ ಸಾತ್ವಿಕ ಭಕ್ತಿ ಮೂಡಲನುಕೂಲವಾಗುತ್ತದೆಂದು ಅವರು ತಿಳಿಯುತ್ತಾರೆ. ಮಾರಿಯೆಂದರೆ ಯಾರು ? 'ಕಂಗಳು ತಪ್ಪಿ ನೋಡಿದರೆ ಮಾರಿ, ನಾಲಗೆ ತಪ್ಪಿ ನುಡಿದರೆ ಮಾರಿ, ನಮ್ಮ ಕೂಡಲ ಸಂಗಮದೇವರ ನೆನಹ ಮರೆದರೆ ಮಾರಿ'!' ಎಂದವರು ನುಡಿದು. ಜನರ ಮನಸ್ಸಿನ ಕೊಳೆಯನ್ನು ತೊಳೆಯುತ್ತಾರೆ.

ಕೆಲವರು ಉತ್ತಮ ವರ್ಗದ ಜನ ಮಡಿ ಮೈಲಿಗೆಗಳ ಸೂತಕ ಪಾತಕಗಳ ಹೆಸರಿನಲ್ಲಿ ಬಡಜನರನ್ನು ದಡ್ಡರನ್ನು ಕೊಳ್ಳೆ ಹೊಡೆಯುವುದುಂಟಷ್ಟೆ. ಮಡಿ ಮೈಲಿಗೆ ಯಾವುದೆಂದು ಬಸವಣ್ಣನವರು ಹೊಸ ವಿವರಣೆ ನೀಡುತ್ತಾರೆ. ಕಿವಿ ಕಣ್ಣು ಬಾಯಿ ಮೈ ಮನಗಳು ಮಡಿಯಾಗಿದ್ದರೆ ಬಾಳು ಹಸನಾಗುತ್ತದೆಂಬುದು ಅವರ ನಿಲುವು. ಗುರುಲಿಂಗ ಜಂಗಮರ ಸೇವೆಯಿಂದ. ಅವರ ಉಪದೇಶದಿಂದ ಎಲ್ಲ ಸೂತಕಗಳು ನಿವಾರಣೆಯಾಗುತ್ತವೆಂದು ಅವರು ಸ್ಪಷ್ಟಪಡಿಸುತ್ತಾರೆ. ಜನಮನ ಶುದ್ಧವಾದರೆ ಸಮಾಜವೂ ಹಸನಾಗುತ್ತದಷ್ಟೇ.

'ಹರೆಯ ಹೊಯಿಸಿ ಕುರುಹ ಪೂಜಿಸುವವರ ಮೆಚ್ಚ ಕೂಡಲ ಸಂಗಮದೇವ' ಎಂದು ಆಡಂಬರದ ಮೆರವಣಿಗೆಯನ್ನವರು ಖಂಡಿಸುತ್ತಾರೆ. 'ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡಲಿ ಬಡವನಯ್ಯಾ' ಎಂದು ಮೂರ್ತಿ ಪೂಜೆಗೆ ಮಂಗಳ ಹಾಡುತ್ತಾರೆ. ಕರ್ತವ್ಯ ಪಾಲನೆಗೆ ಅಡ್ಡಿಯಾಗುವ ರಾಹುಕಾಲ ರಾಶಿ ಕೂಟ ಚಂದ್ರಬಲ ತಾರಾಬಲಗಳನ್ನು ಅಲ್ಲಗಳೆಯುತ್ತಾರೆ.

ಎಮ್ಮವರು ಬೆಸಗೊಂಡಡೆ ಶುಭ ಲಗ್ನವೆನ್ನಿರಯ್ಯ
ರಾಶಿ ಕೂಟ ಋಣ ಸಂಬಂಧವುಂಟೆಂದು ಹೇಳಿರಯ್ಯ
ಚಂದ್ರ ಬಲ ತಾರಾಬಲವುಂಟೆಂದು ಹೇಳಿರಯ್ಯ
ನಾಳಿನ ದಿನಕಿಂದಿನ ದಿನ ಲೇಸೆಂದು ಹೇಳಿರಯ್ಯ

ಎಂದು ಪಂಚಾಂಗ ಜ್ಯೋತಿಷ್ಯಗಳ ಹಾವಳಿಯನ್ನು ತಡೆಗಟ್ಟಲು ಪ್ರಯತ್ನಿಸುತ್ತಾರೆ.

ಮಾನುಕುಲದಲ್ಲಿಯೇ ಹಲವರು ಮುಟ್ಟಬಾರದವರು, ಹೆಂಗಸರು ನಿಕೃಷ್ಟರು ಎಂಬ ಮೂರ್ಖತನ ಎಲ್ಲೆಲ್ಲೂ ಹಬ್ಬಿಕೊಂಡಿತ್ತಷ್ಟೆ. ಅದನ್ನು ವಿಚಾರದ ಮೂಲಕ ಬೇರುಸಹಿತ ಕಿತ್ತು ಹಾಕುತ್ತಾರೆ. ಲಿಂಗದೀಕ್ಷೆಯ ಮೂಲಕ ಎಲ್ಲರಿಗೂ ಧರ್ಮದ ಬಾಗಿಲನ್ನು ತೆರೆಯುತ್ತಾರೆ. ಜಾತಿ ವರ್ಣಗಳನ್ನು ತೂರುತ್ತಾರೆ. ಬಾಳು ಹಸನಾಗಲು ಭಕ್ತಿ ಕಾಯಕ ದಾಸೋಹ ಸುವಿಚಾರಗಳು ಮುಖ್ಯವೆಂದು ಸಾರುತ್ತಾರೆ. ಅವರು ಕಾಣದ ಸ್ವರ್ಗಕ್ಕೆ ಏಣಿ ಹಾಕುವುದಿಲ್ಲ, ಅಲ್ಲಿಯ ಭೋಗ ವಿಲಾಸದ ನಂದನವನ್ನು ಬಣ್ಣಿಸುವುದಿಲ್ಲ; ಕಾಣದ ನರಕಕ್ಕೆ ಜನರನ್ನು ನೂಕುವುದಿಲ್ಲ, ಅಲ್ಲಿಯ

ಗುಮ್ಮ ದೆವ್ವಗಳನ್ನು ತೋರಿಸಿ ಅವರನ್ನು ಅಂಜಿಸುವುದಿಲ್ಲ, ನಂಜಿಸಿ ಮೋಸ ಮಾಡುವುದಿಲ್ಲ. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ' ಎಂದು ನುಡಿದು ಜನರ ಮನಸ್ಸಿನಲ್ಲಿದ್ದ ಭ್ರಮೆಗಳನ್ನೂ ಕಲ್ಪನೆಗಳನ್ನೂ ಪರಿಹರಿಸಿದ ವಾಸ್ತವವಾದಿಗಳವರು.

ಬಸವಣ್ಣನವರು ಇಂದ್ರಿಯ ಸಂಯಮ ಬೇಕೆನ್ನುತ್ತಾರೆ; ಪರಸ್ತ್ರೀ ವ್ಯಸನ ಬೇಡವೆನ್ನುತ್ತಾರೆ: ಪರದ್ರವ್ಯದ ಮೋಹ ಬೇಡವೆನ್ನುತ್ತಾರೆ, ಆದರೆ ಪೂರ್ಣ ವೈರಾಗ್ಯವನ್ನಾಗಲೀ ಸನ್ಯಾಸವನ್ನಾಗಲೀ ಅವರು ಬೆಂಬಲಿಸುವುದಿಲ್ಲ. ಜಗತ್ತು ಮಾಯೆಯೆಂದು ಹಳಿದವರಲ್ಲ. ಇತರರಿಗೆ ಹಿಂಸೆಯಾಗದಂತೆ ಇಲ್ಲಿ ಸಿಗುವ ಸುಖವನ್ನು ಅನುಭವಿಸಬೇಕು, ಶಿವಚಿಂತನೆಯಲ್ಲಿ ಮನಸ್ಸು ಊರಿರಬೇಕು ಎಂಬುದೇ ಅವರ ಉಪದೇಶದ ನೆಲೆ. ಸನ್ಯಾಸದ ಮಾರ್ಗ ಮೇಲಲ್ಲ, ಸಂಸಾರದ ಮಾರ್ಗ ಕೀಳಲ್ಲವೆಂದು ಅವರು ಸ್ವಂತ ಅನುಭವದಿಂದಲೇ ಸಮರ್ಥಿಸುತ್ತಾರೆ. 'ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವುವು ದೋಷಂಗಳು' ಎಂಬ ಅವರ ದೃಷ್ಟಿ ಲೋಕದ ಹಲವು ಸಂತರ ದೃಷ್ಟಿಯಿಂದ ಭಿನ್ನವಾದುದು: ಆದರೆ ಅತ್ಯಂತ ಶ್ರೇಯಸ್ಕರವಾದುದು: ಸ್ವತಂತ್ರ ವಿಚಾರ ಶಕ್ತಿಗೆ ನಿದರ್ಶನವಾಗುವಂಥದು. ಭೂಮಿಯಲ್ಲಿಯೇ. ಒಂದು ಜನ್ಮದಲ್ಲಿಯೇ ಸ್ವರ್ಗವನ್ನು ಕಾಣಿಸಿದ ಹಿರಿಮೆ ಅವರದು.

ಢಂಬಾಚಾರದ ಭಕ್ತಿಯನ್ನು ಸೋಗಿನ ಪೂಜೆಯನ್ನು ಅವರು ಬಯಲಿಗೆಳೆಯುತ್ತಾರೆ. ಕುಡಿಯುವ

ಉಣ್ಣುವ ಜನರಿಗೆ ಕೊಡದೆ ಇಕ್ಕದೆ ಜಡ ವಸ್ತುಗಳಿಗೆ ನೀಡುವ ನೈವೇದ್ಯ ವಂಚನೆಯಿಂದ ಕೂಡಿದ್ದೆಂದೇ ಅವರ ಭಾವನೆ.

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯ
ಉಂಬ ಜಂಗಮ ಬಂದಡೆ ನಡೆಯೆಂಬರು ;
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯ

ಎಂಬ ಅವರ ಮಾತಿನಲ್ಲಿ ಅಜ್ಞಾನದ ಅವಿಚಾರದ ಖಂಡನೆಯಿದೆ.

ಆಚರಣೆಯಿಲ್ಲದ ಓದಾಗಲಿ, ಭಕ್ತಿಯಿಲ್ಲದ ಪೂಜೆಯಾಗಲಿ ವ್ಯರ್ಥವೆಂದು ಅವರು ಪಂಡಿತರನ್ನೂ, ಪುರೋಹಿತರನ್ನೂ ಅಣಕಿಸುತ್ತಾರೆ. 'ಗೀತವ ಹಾಡಿದಡೇನು, ಶಾಸ್ತ್ರ ಪುರಾಣವ ಕೇಳಿದಡೇನು? ವೇದ ವೇದಾಂತವ ನೋಡಿದಡೇನು?' 'ದ್ವೈತಾದ್ವೈತವನೋದಿ ಏನ ಮಾಡುವಿರಯ್ಯಾ' 'ಲಾಂಛನ ಹೊರಗೆ ಬಂದಿರಲು ಒಳಗೆ ಲಿಂಗಾರ್ಚನೆ ಎಂತಯ್ಯಾ?' 'ನೂರನೋದಿ ನೂರ ಕೇಳಿದಡೇನು? ಆಸೆ ಹರಿಯದು ರೋಷ ಬಿಡದು' ಎಂದವರು ನುಡಿಯುವಾಗ ವಿವೇಚನೆಯಿಲ್ಲದ, ಶುದ್ಧ ಭಕ್ತಿಯಿಲ್ಲದ ಗರ್ವಿಗಳ ನೆನಪು ಬರುತ್ತದೆ. ಗುಡಿಯ ದೊನ್ನ ಕಳಶವಾಗುವುದಕ್ಕಿಂತ ಶರಣರು ಮೆಟ್ಟಿಕೊಳ್ಳುವ ಚಮ್ಮಾವುಗೆಯಾಗುವುದು ಲೇಸೆನ್ನುತ್ತಾರೆ. ಕಳಶವಾದರೆ ಕಾಗೆ ಅದರ ಮೇಲೆ ಕುಳಿತು ಕೆಡಿಸುತ್ತದೆ. ಚಮ್ಮಾವುಗೆಯಾಗುವಲ್ಲಿ ವಿನಯದಿಂದ ಕೂಡಿದ ಭಕ್ತಿಯ ಹಿರಿತನ ಎದ್ದು ಕಾಣುತ್ತದೆ. ಇದಿಷ್ಟೇ ಅವರ ತಾತ್ಪರ್ಯವಲ್ಲ;

ದೇವಾಲಯಗಳ ನಿರ್ಮಾಣದ ಹಾಗೂ ಪ್ರತಿಮೆಗಳ ಸ್ಥಾಪನೆಯ ಅಣಕವಿದೆ.

ಸಾಹಿತ್ಯ ಕ್ರಾಂತಿ

ಸಾಹಿತ್ಯ ಸೃಷ್ಟಿ ಬಸವಣ್ಣನವರ ಮೂಲೋದ್ದೇಶ ವಲ್ಲ. ಆತ್ಮ ವಿಕಾಸಗೊಳ್ಳುವಾಗ ಅಂತರಂಗದಿಂದ ತಾವೇ ತಾವಾಗಿ ಚಿಮ್ಮಿದ ಭಾವತರಂಗಗಳೇ ವಚನಗಳು. ಲೋಕಾನುಭವ ಹಾಗೂ ಶಿವಾನುಭವ ತೀವ್ರವಾದಾಗ ಹೊಮ್ಮಿದ ಲಹರಿಯೇ ಸಾಹಿತ್ಯವಾಗುತ್ತದೆ. ಜತೆಗೆ ತಾವು ಕಂಡದ್ದನ್ನು ಕಾಣದವರಿಗೆ ಅರಿವು ಮಾಡಿಕೊಡುವ ಹಂಬಲವೇ ಸಾಹಿತ್ಯದ ರೂಪವನ್ನು ಪಡೆಯುತ್ತದೆ. ಅವರ ಚೈತನ್ಯವೇ ಭಾವದ ಬದಗೆಯಲ್ಲಿ ಹೊರಹೊಮ್ಮಿದಾಗ, ಅಂತಃಕರಣವೇ ಮಾತಾಡುವಾಗ ಅವರ ಮಾತೆಲ್ಲ ಸಾಹಿತ್ಯವಾಗುತ್ತದೆ. ಸಾಹಿತ್ಯದ ಗುಣ ಇದ್ದುದ್ದರಿಂದಲೇ ವಚನಗಳು ಎಲ್ಲರಿಗೂ ಎಲ್ಲ ಕಾಲಕ್ಕೂ ಪ್ರಿಯವಾಗುತ್ತವೆ. ಹೃದಯದಿಂದ ನೇರವಾಗಿ ಬಂದು ದ್ದರಿಂದ ನೇರವಾಗಿ ಹೃದಯವನ್ನು ಪ್ರವೇಶಿಸುತ್ತವೆ.

ಆತ್ಮದ ಬೆಳಕೇ ಭಾವವನ್ನು ಹೊಕ್ಕು, ಭಾಷೆಯಲ್ಲಿ ಗಟ್ಟಿಗೊಂಡು, ವಚನ ರೂಪವನ್ನು ಪಡೆಯುತ್ತದೆ: ವಚನಗಳಲ್ಲಿ ನಿಯತವಾದ ಛಂದಸ್ಸಿಲ್ಲದಿರಬಹುದು, ಲಯವಿದೆ; ವರ್ಣನೆ ಇಲ್ಲದಿದ್ದರೂ ಅನುಭವದ ಕಾವಿದೆ: ತತ್ತ್ವಕ್ಕಿಂತ ಹೆಚ್ಚಾಗಿ ದರ್ಶನದ ಕಾಂತಿಯಿದೆ: ಭಾಷೆಯ ಪೆಡಸಿಲ್ಲ. ಅಲಂಕಾರಗಳ ಭಾರವಿಲ್ಲ. ಶೀಘ್ರವಾದ ತನಿಬನಿ ಗಳುಳ್ಳ ಹುರುಳುಗೂಡಿದ ಮಾತೇ ವಚನ ಶೈಲಿಯ ಗುಟ್ಟು. ಶಿವಪಥವನ್ನು ತೋರಿಸುವ, ಶಿವನ ಬಗ್ಗೆ ಅರಿವು ಮೂಡಿಸುವ ಗುಣವೇ ಅವರ ವಿಶಿಷ್ಟ

ಲಕ್ಷಣ. ಅವರ ಭಾಷೆಯಲ್ಲಿ ನೆಲದ ಸೊಗಡಿದೆ; ಪರಿಸರದ ಗಾಳಿಯ ಕಂಪಿದೆ.

ಕಲಾತ್ಮಕವಾದ ಬದುಕಿನಿಂದ ಹೊರ ಹೊಮ್ಮುವ ಮಾತೂ ಕಲಾತ್ಮಕವಾಗಿರುತ್ತದೆ. ಪ್ರತಿಯೊಂದು ವಸ್ತುವಿನ ಒಳಗನ್ನರಿಯ ಬಲ್ಲ, ವಸ್ತುವಸ್ತುಗಳ ನಡುವಣ ಸಾಮ್ಯವನ್ನು ಗುರುತಿಸಬಲ್ಲ, ವ್ಯಕ್ತಿಯ ಅನುಭವ ವಿಶೇಷವಿಲ್ಲದ್ದು. ಅನುಭವ ಸಂಪತ್ತಿರುವಲ್ಲಿ ಮಾತಿಗೆ ಸತ್ವಪ್ರಾಪ್ತವಾಗುತ್ತದೆ; ಸೊಬಗು ಸಮನಿಸುತ್ತದೆ. ಅರ್ಥಪೂರ್ಣವಾದ ಅಲಂಕಾರಗಳು ಅಪ್ರಯಾಸವಾಗಿ ಮೂಡುತ್ತವೆ. 'ಇಲಿಗಡಹ ನೊಡ್ಡಿದಲ್ಲಿ ಇಪ್ಪಂತೆ' 'ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ' 'ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ ನೆಲ ಹತ್ತಿ ಉರಿದಡೆ ನಿಲಲುಬಹುದೆ?;' 'ಅಂದಣವನೇರಿದ ಸೊಣಗನಂತೆ' 'ಕೆಸರಿನಲಿ ಬಿದ್ದ ಬಡ ಪಶುವಿನಂತೆ;' 'ಎನ್ನ ಚಿತ್ತ ಅತ್ತಿಯ ಹಣ್ಣು' 'ಒಡೆತ್ತ ಬಲ್ಲುದು ಅವಲಕ್ಕಿಯ ಸವಿಯ?' 'ಎಲವದ ಮರ ಹೂತು ಫಲವಾದ ತೆರನಂತೆ,' 'ಮಳಲ ಹೊಸೆದಡೆ ಹೊಸೆದಂತಲ್ಲದೆ, ಸರವಿಯ ಪಡೆಯಲುಬಾರದು;' 'ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಂತೆ'–ಇಂಥ ಅಲಂಕಾರಗಳ ಮೂಲಕ ಬಸವಣ್ಣನವರ ಬೋಧನೆ ಮನಮುಟ್ಟುವಂತಾಗುತ್ತದೆ. 'ಆರಿಗಾರೂ ಇಲ್ಲ, ಕೆಟ್ಟವಂಗೆ ಕೆಳೆಯಿಲ್ಲ', 'ಕರಿಘನ, ಅಂಕುಶ ಕಿರಿದೆನ್ನಬಹುದೆ', 'ಅರಿದಡೆ ಶರಣ, ಮರೆತಡೆ ಮಾನವ'. 'ಎನ್ನ ನುಡಿ ಎನಗೆ ನಂಜಾಯಿತ್ತು'–ಹಿರಿದಾದ ಅರ್ಥವಿರುವ ಇಂಥ ಕಿರುನುಡಿಗಳಲ್ಲಿ ಆಕರ್ಷಕ ಶಕ್ತಿಯಿದೆ.

ಬಸವಣ್ಣನವರು ಹುಟ್ಟಿನಿಂದಲೆ ಸಂಕ್ರಾಂತಿ ಪುರುಷರು. ಪ್ರಗತಿಗೆ ಅಡ್ಡಿಬರುವ ಎಲ್ಲ ಪದ್ಧತಿಗಳನ್ನು, ನಂಬಿಕೆಗಳನ್ನು, ವ್ಯವಸ್ಥೆಗಳನ್ನು, ತತ್ತ್ವಗಳನ್ನು ಒರಸುವ, ತಿದ್ದುವ, ಇಲ್ಲವೇ ನವೀಕರಿಸುವ ಸಂಕಲ್ಪ ತೊಟ್ಟವರು. ಹೊಸಧರ್ಮದ, ಹೊಸ ಸಮಾಜದ ಪ್ರಸಾರಕ್ಕೆ ಹೊಸ ಭಾಷೆ ಮತ್ತು ಹೊಸರೀತಿ ಅತ್ಯಗತ್ಯವಾಗುತ್ತವೆ. ಹಿಂದಿನ ಸಾಹಿತ್ಯ ರಚನೆಯಾದದ್ದು ಪಂಡಿತರಿಗಾಗಿ; ಮೆರೆದದ್ದು ರಾಜರ ಆಸ್ಥಾನಗಳಲ್ಲಿ ; ಅಲ್ಲಿ ಬಳಕೆಗೊಂಡ ಭಾಷೆ ಸಂಸ್ಕೃತದ ಅಪರಾವತಾರ. ಸಾಮಾನ್ಯ ಜನತೆ ಆ ಕಡೆಗೆ ಇಣುಕಿ ನೋಡುವಂತೆಯೂ ಇಲ್ಲ: ಸಾಹಿತ್ಯ ಅವರ ಕೈಗೆ ಸಿಗಬಾರದೆಂಬುದು ಚಂಪೂಕವಿಗಳ ಭಾವನೆಯಾಗಿದ್ದಂತೆ ತೋರುತ್ತದೆ. ಆದರೆ ಬಸವಣ್ಣನವರ ದೃಷ್ಟಿಯೇ ಬೇರೆ. ಅವರ ಪ್ರಮುಖಗುರಿ ಅಂತ್ಯೋದಯ. ತಾವು ಹೇಳುವ ಮಾತು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಅರ್ಥವಾಗಬೇಕು. ಅದರಿಂದ ಅವನ ಉದ್ಧಾರವಾಗಬೇಕು. ಸಾಧ್ಯವಾದಷ್ಟು ಅವನ ಭಾಷೆಯನ್ನೇ ಬಳಸಿಕೊಳ್ಳಬೇಕು. ವಿಷಯ ನಿರೂಪಣೆಯ ವಿಧಾನವೂ ಬದಲಾವಣೆಯಾಗಬೇಕು. ಹೀಗಾಗಿ ಹಿಂದಿನದಕ್ಕಿಂತ ಬೇರೆಯಾದ ಹೊಸ ಸಾಹಿತ್ಯಕ್ಕೆ ಅವರು ಜನಕರಾಗುತ್ತಾರೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಡೆದ ಮೊಟ್ಟ ಮೊದಲ ಕ್ರಾಂತಿಗೆ ಅವರು ಪಿತಾಮಹರಾಗುತ್ತಾರೆ: ಮುಂದಿನ ಪೀಳಿಗೆಗೆ ದಾರಿದೀಪವಾಗುತ್ತಾರೆ.

ಮೊಟ್ಟಮೊದಲಿಗೆ ಬಸವಣ್ಣನವರು ಸಾಮಾನ್ಯರ ಮೂಕ ವೇದನೆಗೆ ನಾಲಗೆಯಾಗುತ್ತಾರೆ. ಅವರವರ ಮಾತುಗಳಲ್ಲಿಯೇ ಅವರವರ ನೋವು ನಲಿವುಗಳನ್ನು

ರೀತಿನೀತಿಗಳನ್ನು ಕನ್ನಡಿಸುತ್ತಾರೆ. ಇದರಿಂದಾಗಿ ಅವರ ಮೂಲಕ ಮೂಡಿದ ಸಾಹಿತ್ಯ ಒಬ್ಬರದಾಗದೆ ಎಲ್ಲರದೂ ಆಗುತ್ತದೆ. ಅವರ ಕೈಯಲ್ಲಿ ಆಡುಮಾತಿಗೆ ಹೊಸಶಕ್ತಿ ತೇಜಸ್ಸುಗಳು ಲಭಿಸುತ್ತವೆ. ಸಾಹಿತ್ಯಕ್ಕೆ ಹೊಸ ಭಾಷೆ ಲಭ್ಯವಾಗುತ್ತದೆ. ಗದ್ಯತನಕ್ಕಿಳಿಯದ ಪದ್ಯತನಕ್ಕೇರದ, ಗೇಯತೆಯನ್ನು ಬಿಡದ ನೂತನ ಶೈಲಿ ಸಿದ್ಧವಾಗುತ್ತದೆ. ಶಿವಪಾರ್ವತಿಯರಿಗೂ ಕನ್ನಡವನ್ನು ಕಲಿಸಿದ, ಕನ್ನಡಕ್ಕೆ ಮಂತ್ರ ಶಕ್ತಿಯನ್ನು ನೀಡಿದ, ಕನ್ನಡದ ಕಾವೇರಿಯ ಮೂಲಕ ಗುಡಿಸಿಲಿನ ತನಕ–ಶಿವಾನುಭವವನ್ನು ಹರಿಸಿದ ಗಾರುಡಿಗರವರು.

ಬಸವ ಬೆಳಕು

ಬಸವಣ್ಣನವರ ವ್ಯಕ್ತಿತ್ವ ಬಹುಮುಖವಾದುದು. ಅವರ ಪ್ರತಿಭೆ ಅಳತೆಗೆ ಸಿಲುಕುವಂಥದಲ್ಲ.ಅದು ವಿಶ್ವವನ್ನೇ ಬಾಚಿ ತಬ್ಬಿಕೊಳ್ಳುತ್ತದೆ. ಅವರು ಕೇವಲ ಶಿವಾನುಭಾವಿಗಳಲ್ಲ. ಅವರು ಅಭವಲೋಕದಿಂದ ಭವಲೋಕಕ್ಕೆ ಇಳಿದಂತೆ, ಲೋಕ ಕಲ್ಯಾಣಕ್ಕಾಗಿ ಅನುಭಾವವನ್ನು ಅನುಭವಕ್ಕೆ ತಿರುಗಿಸಿಕೊಳ್ಳುತ್ತಾರೆ. ಇದರಿಂದಾಗಿ ಅವರ ಪ್ರತಿಭೆ ಏಕಕಾಲದಲ್ಲಿ ಹತ್ತು ಮುಖಗಳಲ್ಲಿ ಕೆಲಸಮಾಡುತ್ತದೆ. ಅಧ್ಯಾತ್ಮ ಸಿದ್ಧಿಯ ತುತ್ತತುದಿಯನ್ನು ಸೇರಿಯೂ ಹಲವು ಬಗೆಗಳಲ್ಲಿ ಲೋಕ ಕಲ್ಯಾಣವನ್ನು ಸಾಧಿಸಿದ ಮಹಾತ್ಮರು ವಿರಳ. ಅವರು ನಡೆಸಿದ ಕ್ರಾಂತಿ ಧರ್ಮ ಮೊದಲುಗೊಂಡು ಜೀವನದ ಎಲ್ಲ ಕ್ಷೇತ್ರಗಳನ್ನು ಒಳಗೊಳ್ಳುತ್ತದೆ. ಅದೊಂದು ಮಹಾ ಸಾಂಸ್ಕೃತಿಕ ಕ್ರಾಂತಿ, ಸಮಗ್ರಕ್ರಾಂತಿ.

ಜಗತ್ತಿಗೆ ಬಸವಣ್ಣನವರ ಬದುಕೇ ಒಂದು ಜೀವಂತ ಸಂದೇಶ. ಆದರೂ ಅವರ ಸಂದೇಶವನ್ನು ಐದು ಮಾತುಗಳಲ್ಲಿ ಸಂಗ್ರಹಿಸಬಹುದು : ಅಹಿಂಸೆ, ಸದಾಚಾರ,

ಸದ್ಭಕ್ತಿ, ಕಾಯಕ ಮತ್ತು ದಾಸೋಹ. ಇವು ಜೀವನದ ಪಂಚಮಂತ್ರ. ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ. ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಇವು ಜೀವನ ಶುದ್ಧಿಯ ಸಪ್ತ ಸೂತ್ರಗಳು. 'ದೇವನೊಬ್ಬ ನಾಮ ಹಲವು'; 'ನಂಬಿ ಕರೆದಡೆ ಓ ಎನ್ನನೆ ಶಿವನು' 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ', 'ದೇವಲೋಕ ಮರ್ತ್ಯಲೋಕ ಬೇರಿಲ್ಲ ಕಾಣಭೊ' 'ದಯವಿಲ್ಲದ ಧರ್ಮವದೇವುದಯ್ಯ' 'ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ', 'ಅರಿದಡೆ ಶರಣ, ಮರೆತಡೆ ಮಾನವ,' 'ನುಡಿದರೆ ಲಿಂಗ ಮೆಚ್ಚಿ ಅಹುದಹುದೆನ್ನಬೇಕು' 'ಕಾಯುವೆ ಕೈಲಾಸ' 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಶರಣರೆ ಕುಲಜರು' 'ಲೇಸೆನಿಸಿಕೊಂಡು ಒಂದು ದಿನ ಬದುಕಿದೊಡೇನು?' 'ಲಿಂಗವಿದ್ದು ಫಲವೇನು ಶಿವಪಥವನರಿಯದನ್ನಕ್ಕ', 'ಪಟ್ಟವ ಕಟ್ಟಿದಬಳಿಕ ಲಕ್ಷಣವನರಸುವರೆ', 'ಮೃದು ವಚನವೆ ಸಕಲ ತಪಂಗಳಯ್ಯ';'ಆತ್ಮಸ್ತುತಿ ಪರನಿಂದೆಯ ಕೇಳಿಸದಿರಯ್ಯಾ, ನಿಮ್ಮ ಧರ್ಮ','ಪರಸ್ತ್ರೀ ಪರಧನವೆಂಬ ಜೂಬಿಂಗಂಜುವೆ', 'ನಿಮ್ಮನರಿಯದ ಜ್ಞಾನವೆಲ್ಲಾ ಅಜ್ಞಾನ', 'ಮರಣವೆ ಮಹಾನವಮಿ'– ಈ ಹದಿನೆಂಟು ಸೂಕ್ತಿಗಳು ಜೀವನ ವಿಮುಕ್ತಿಗೆ ಸಾಧನಗಳು. ಬಸವಣ್ಣನವರ ವಚನಗಳು ಮಾನವನನ್ನು ಅಜ್ಞಾನದಿಂದ ಸುಜ್ಞಾನದಕಡೆಗೆ ಒಯ್ಯುವ ನಾವೆಗಳು; ಭೂಮಿಯಲ್ಲಿಯೇ ದೇವರ ರಾಜ್ಯವನ್ನು ಕಾಣಿಸುವ ಸೂರ್ಯ ರಶ್ಮಿಗಳು: ದುಃಖದಿಂದ ಪಾರುಮಾಡಿ ಬದುಕಿಗೆ ಕಲ್ಯಾಣವನ್ನೊದಗಿಸುವ ಅಮೃತ

ಲಹರಿಗಳು; ಲೋಕದ ಹೃದಯಕ್ಕೊಡ್ಡಿದ ಕನ್ನಡಿಗಳು: ಶಿವಪಥವನ್ನು ತೋರಿಸುವ ದೀಪಗಳು.

ಯಾವ ದೃಷ್ಟಿಯಿಂದ ನೋಡಿದರೂ ಬಸವಣ್ಣ ಮಹಾತ್ಮರು. ಅವರು ಅಗೋಚರವೂ, ಅಪ್ರಮೇಯವೂ ಆದ ಶಕ್ತಿಯನ್ನು ಕಂಡವರು. ಜಗತ್ತಿನಲ್ಲಿ ಹೊಸ ವಿಚಾರ ಧಾರೆಯನ್ನು ಹರಿಸಿದವರು. ಹಳೆಯ ಗೊಡ್ಡು ಸಂಪ್ರದಾಯಗಳಿಂದ ಸಮಾಜವನ್ನು ಬಿಡುಗಡೆ ಮಾಡಿದವರು ; ಅದರಲ್ಲಿ ಹೊಸ ಚೈತನ್ಯವನ್ನು ತುಂಬಿದವರು. ದೀನ ದಲಿತರ ಉದ್ಧಾರಕ್ಕಾಗಿ, ಜಾತಿ ನಿರ್ಮೂಲನಕ್ಕಾಗಿ, ಅಸ್ಪೃಶ್ಯತೆಯ ವಿನಾಶಕ್ಕಾಗಿ ಪ್ರಾಣವನ್ನೇ ಪಣವಾಗಿ ಒಡ್ಡಿದವರು. ಮನುಕುಲವನ್ನು ಕತ್ತಲೆಯಿಂದ ಬೆಳಕಿನೆಡೆಗೆ ಒಯ್ದವರು. ಅಜ್ಞಾನ ದಾರಿದ್ರ್ಯಗಳ ಮೇಲೆ ಸತತವಾಗಿ ಧಾಳಿ ನಡೆಸಿದವರು. ನೂರಾರು ಕ್ರೂರ ದೇವತೆಗಳನ್ನು ಓಡಿಸಿದವರು. ಒಟ್ಟಿನಲ್ಲಿ ಇತಿಹಾಸ ನಿರ್ಮಾಪಕರು. ಸತ್ತು ಅಮರರಾದವರು, ಬೆಳಕಾದವರು. ಅವರೇ ವಿಭೂತಿ ಪುರುಷರು. ಅಂದಿಗಿಂತ ಹೆಚ್ಚಾಗಿ ಇಂದಿಗೆ ಬೇಕಾದವರು. ರಾಷ್ಟ್ರಕವಿ ಕುವೆಂಪು ಅವರೊಡನೆ ದನಿಗೂಡಿಸಿ, ಜಗತ್ತು ಅವರನ್ನು ತನ್ನ ಮಧ್ಯಕ್ಕೆ ಮತ್ತೆ ಆಹ್ವಾನಿಸಬೇಕಾಗಿದೆ.

> ಕಾರ್ತಿಕದ ಕತ್ತಲಲಿ ಆಕಾಶ ದೀಪವಾಗಿ
> ನೀ ಬಂದೆ,
> ಬಟ್ಟೆಗೆಟ್ಟವರಿಗೊಂದು ದೊಂದಿದಿಕ್ಕಾಗಿ
> ಎಂಟು ಶತಮಾನಗಳ ಹಿಂದೆ.
> ಅಗ್ನಿಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ
> ದೇವದಯೆಯೊಂದು ಹೇ ಧೀರಾವತಾರ.

ಶ್ರೀ ಬಸವೇಶ್ವರಾ !
ಜಾತಿ ಪದ್ಧತಿಯ ಹೋಮ ಕೂಪಕ್ಕೆ
ಬಿದ್ದು, ವೈದಿಕರ ಯಜ್ಞತಾಪಕ್ಕೆ
ಬಲಿವೋದ ದಲಿತ ಜೀವರನೆತ್ತಿ ಮತಿ ವಿಚಾರಕ್ಕೆ
ಕಾಯಕದ ದಿವ್ಯ ತತ್ತ್ವದಾ ಸುಕ್ಷೇಮ ಧರ್ಮನಾಕಕ್ಕೆ
ನಡೆಸಿದ ಮಹಾತ್ಮನೆ ನಿನಗೆ ನಮೋ ನಮಃ !

ಇಂದಿಗೂ ನಾವು ನಿನ್ನೆತ್ತರಕೆ ಏಳಲಾರದೆ ಅಯ್ಯೊ
ಮತದ ಉಸುಬಿಗೆ ಸಿಲುಕಿ ತತ್ತರಿಸುತಿಹೆವಯ್ಯ !
ಬಾರಯ್ಯ, ಕೈ ಹಿಡಿದೆತ್ತಿ ಬದುಕಿಸು ನಮ್ಮನೆಳೆದು
ವರ್ಣಾಶ್ರಮವೆಸರ ಹೊಲೆಗೆಸರ ವಂಚನೆಯ
ಹೊಂಡದಿಂದೆ !

ಭಕ್ತಿ ಗಂಗೆಯನೆರೆದು
ಭಾಗವತ ಶಕ್ತಿಯಂ ಕರೆದು
ಮತ ಮೌಢ್ಯದಜ್ಞಾನ ಪಂಕವನು ತೊಳೆದು
ಶುಚಿಗೊಳಿಸು ವಿಜ್ಞಾನ ವೇದಾಂತ ತೀರ್ಥದಿಂದೆ !

ಅವರ ಬದುಕೊಂದು ಹಾಡಾಗಿದೆ, ಬೆಳಕಾಗಿದೆ ಎಂದು ಅಂದು ಇಂದು ಮುಂದು ಎಂದೆಂದಿಗೂ ಜನ ಸ್ಮರಿಸುತ್ತಾರೆ.

ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವ ಬೆಳಕ ಧರೆಯೊಳಗೆ
ಸೊಲ್ಲೆತ್ತಿ ಜನವು ಹಾಡುವುದು.

ಪ್ರಚಾರೋಪನ್ಯಾಸ ಮಾಲೆಯ ಕೆಲವು ಹೊತ್ತಿಗೆಗಳು

ನಕ್ಷತ್ರ ಲೋಕ	ಜಿ. ಟಿ. ನಾರಾಯಣರಾವ್
ಹವಾನುಕೂಲನ ಮತ್ತು ಪ್ರಶೀತನ	ಕೆ. ವಿ. ಸುಬ್ಬರಾಯ
ಪಾನೀಯಗಳು	ಕೆ. ಎಸ್. ಲಕ್ಷ್ಮಣರಾವ್
ಚಂದ್ರಲೋಕ ಯಾತ್ರೆ	ಓ. ಎಸ್. ವೆಂಕಟಸ್ವಾಮಿ
ಬೆಳಕಿನ ಸ್ವರೂಪ	ಬಿ. ವಿ. ನಾರಾಯಣರಾವ್
ದೂರದರ್ಶನ	ಕೆ. ಶೇಷಾದ್ರಿ ಅಯ್ಯಂಗಾರ್
ಸೂಕ್ಷ್ಮದರ್ಶಕಗಳು ಮತ್ತು ದೂರದರ್ಶಕಗಳು	ಕೆ. ಶೇಷಾದ್ರಿ ಅಯ್ಯಂಗಾರ್
ಉಕ್ಕು : ತಯಾರಿಕೆ ಮತ್ತು ರಚನೆ	ಕೆ. ಆರ್. ಮೋಹನ್
ನೀರಾವರಿ ಸಮಸ್ಯೆಗಳು	ಕೆ. ಎನ್. ಶಿವಶಂಕರರಾವ್
ಅಂತರ್ಜಲ	ಸಿ. ನಾಗಣ್ಣ
ಮಾನವ ನಿರ್ಮಿತ ಧಾತುಗಳು	ಎಸ್. ವೆಂಕಟೇಶಮೂರ್ತಿ
ಕರ್ನಾಟಕ ಅಂತರ್ಜಲ ಸಂಪನ್ಮೂಲಾಭಿವೃದ್ಧಿ	ವೈ. ಲಿಂಗರಾಜು
ಮಾನವನ ಮೇಲೆ ಗ್ರಹಗಳ ಪ್ರಭಾವ ಉಂಟೆ?	ಎನ್. ಕೆ. ನರಸಿಂಹಮೂರ್ತಿ
ಅನುವಂಶೀಯತೆ ಮತ್ತು ವೈವಿಧ್ಯ	ಎಂ. ಎಸ್. ಎಸ್. ರಾವ್
ದ್ಯುತಿ ವಿದ್ಯುತ್ ಪರಿಣಾಮ	ಕೆ. ನಾಗರಾಜನ್
ಮಾನವ ಮತ್ತು ಪಾಚಿಗಳು	ವಿ. ಎಸ್. ಯಲವಿಗಿ
ಕಪ್ಪು ರಂಧ್ರಗಳು	ವಿ. ಟಿ. ಎಸ್. ಶರ್ಮ